ಜನಶಕ್ತಿ



ಕನ್ನಡ ವಾರಪತ್ರಿಕೆ

Blog : janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 13
ಮಾರ್ಚ್ 31, 2013

ಪುಟ 16 ರೂ. 10/-


ದೆಹಲಿಯಲ್ಲಿ ಸಮಾಗಮ




“ಉತ್ತಮ ಭಾರತಕ್ಕಾಗಿ ತೀವ್ರಗೊಳ್ಳಲಿ ಸಂಘರ್ಷ”



ಅಧಿಕಾರದಾಹೀ ಸರ್ಕಾರ : ಅಂತ್ಯಕಾಲದ ಆಮಿಷಗಳು



ಪೂರ್ಣ ಸಂತೃಪ್ತಿಗೆ ಜಾಗವಿಲ್ಲ... - ಮಾಣಿಕ್ ಸರ್ಕಾರ್



ಬಾಂಗ್ಲಾದೇಶದಲ್ಲಿ ಮೂಲಭೂತವಾದದ ವಿರುದ್ಧ ಚಳುವಳಿ

ಕಷ್ಟಕಾರ್ಪಣ್ಯ ಮೆಟ್ಟಿ ಮುನ್ನಡೆಯುತ್ತಿರುವ ದುಡಿಯುವ ಮಹಿಳೆಯರು



'ಪೂರ್ಣ ಸಂತೃಪ್ತಿಗೆ ನಮ್ಮಲ್ಲಿ ಜಾಗವಿಲ್ಲ. ಇನ್ನಷ್ಟು ಸಾಧಿಸಬೇಕಿದೆ'
ವಿಶೇಷ ಸಂದರ್ಶನದಲ್ಲಿ 'ಮಾಣಿಕ್ ಸರ್ಕಾರ್'

ಸಂದರ್ಶನ : ಎಸ್.ವೈ. ಗುರುಶಾಂತ

ಅದಾಗಲೇ ನೂತನವಾಗಿ ಆಯ್ಕೆಯಾಗಿದ್ದ ಸಿಪಿಐ(ಎಂ)ನ ಶಾಸಕರ ಸಭೆಯಲ್ಲಿ ನಾಯಕರಾಗಿ ಚುನಾಯಿತರಾದ ಬಳಿಕ ಕಾಂ। ಮಾಣಿಕ್ ಸರ್ಕಾರ್ ಅಲ್ಲಿಂದಲೇ ನೇರವಾಗಿ ಬಂದಿದ್ದು 'ಜನಶಕ್ತಿ'ಯ ಸಂದರ್ಶನಕ್ಕೇ. ಅವರು ನಾಲ್ಕನೆಯ ಬಾರಿಗೆ ಎಡರಂಗದ ಮುಖ್ಯಮಂತ್ರಿಯಾಗಿ ಮಾರ್ಚ್ 6ಕ್ಕೆ ಪ್ರಮಾಣವಚನ ಸ್ವೀಕರಿಸಬೇಕಿತ್ತು. ರಾಜ್ಯದೆಲ್ಲೆಡೆಯಂತೆ ಗೆಲುವಿನ ಸಂಭ್ರಮದ ಹೊನಲು ಅಲ್ಲೂ.

ಈ ಬಾರಿಯೂ ಜಯಭೇರಿ ಬಾರಿಸಿದ ಎಡರಂಗಕ್ಕೆ, ಅದರ ನೇತೃತ್ವ ವಹಿಸಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರೂ ಆಗಿರುವ ಕಾಂ.ಮಾಣಿಕ್ ಸರ್ಕಾರ್‌ರವರಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತಾ ಜನಶಕ್ತಿಯ ಸಂದರ್ಶನ ಆರಂಭ'ವಾಯಿತು. 'ನಿಮಗೆ ಧನ್ಯವಾದಗಳು' ಎಂದು ಮಾತು ಆರಂಭಿಸಿದರು.

ಜನಶಕ್ತಿ: ಈ ಐತಿಹಾಸಿಕ ಮಹತ್ವದ ಗೆಲುವನ್ನು ತಾವು ಹೇಗೆ ವಿಶ್ಲೇಷಿಸುತ್ತೀರಿ?


ಮಾಣಿಕ್ ಸರ್ಕಾರ್: ಇದು ದೊಡ್ಡ ಪ್ರಶ್ನೆ. ನಾವಿನ್ನೂ ವಿವರವಾಗಿ ವಿಶ್ಲೇಷಣೆ ಮಾಡಿಲ್ಲ. ಅದಕ್ಕೆ ಸಮಯ ಹಿಡಿಯುತ್ತದೆ. ಚುನಾವಣಾ ಪ್ರಚಾರದಲ್ಲಿ ನಾವು ಶಾಂತಿ ಸ್ಥಾಪನೆಗೆ, ಜಾತ್ಯಾತೀತ ಸಂರಚನೆಯನ್ನು ಕಾಪಾಡಲು, ಪ್ರಜಾಪ್ರಭುತ್ವ ಉಳಿಸಲು. ಜನತೆಗೆ ಕೇಳಿದ್ದೆವು. ಅಭಿವೃದ್ಧಿ ಯೋಜನೆಗಳು, ಅವುಗಳ ಅನುಷ್ಠಾನದ ಮುಂದುವರಿಕೆಗೆ ವಿನಂತಿಸಿದೆವು. ಬಹುತೇಕವಾಗಿ ಜನತೆ ನಮ್ಮ ಈ ಮನವಿಯನ್ನು ಪುರಸ್ಕರಿಸಿದರು. ಈ ಬಾರಿಯಂತೂ ಮಹಿಳೆಯರ ಸ್ಪಂದನ ಅಪೂರ್ವ. ಅವರು ದೊಡ್ಡ ಪ್ರಮಾಣದಲ್ಲಿ ಎಡರಂಗವನ್ನು ಬೆಂಬಲಿಸಿದ್ದಾರೆ.

ಈ ಬಾರಿ ಸೋಲಬಹುದು ಎಂಬ ಪ್ರಚಾರವಿತ್ತು. ಆದರೆ ಗೆಲ್ಲುವ ವಿಶ್ವಾಸ ತಮಗಿತ್ತು? ಈ ಆತ್ಮವಿಶ್ವಾಸ ಬಂದಿದ್ದಾದರೂ ಹೇಗೆ?

ನಮ್ಮ ಆತ್ಮವಿಶ್ವಾಸದ ಕಾರಣ, ನಾವು ಮಾಡಲಾಗದ್ದನ್ನು ಎಂದೂ ಜನರಿಗೆ ಹೇಳಲಿಲ್ಲ. ಸಾಧ್ಯವಿರುವುದನ್ನು ಮಾಡಿದೆವು. ನಿಗದಿತ ಸಮಯದೊಳಗೆ ಮಾಡುವ, ಅದಕ್ಕಿರುವ ನಮ್ಮ ಮಿತಿಗಳನ್ನು ತಿಳಿಸಿದೆವು. ಬಹಳಷ್ಟು ಯೋಜನೆಗಳನ್ನು ಹೆಚ್ಚಿನ ಗಂಭೀರತೆಯಿಂದ, ಪ್ರಾಮಾಣಿಕತೆಯಿಂದ ಜಾರಿಗೆ ತಂದೆವು. ಇವನ್ನೆಲ್ಲಾ ನೋಡಿದ ಜನರು ನಮ್ಮ ಮೇಲೆ ವಿಶ್ವಾಸವಿರಿಸಿದರು. ಇನ್ನು ಜನರಲ್ಲುಂಟಾದ ವಿಶ್ವಾಸವೇ ನಮಗೂ ವಿಶ್ವಾಸ ಮೂಡಿಸಿತು. ಒತ್ತಿ ಹೇಳ ಬಯಸುವುದೇನೆಂದರೆ: ನಮ್ಮ ಜನರಿಗೆ, ನಮ್ಮ ರಾಜ್ಯಕ್ಕೆ ಹಾನಿ ತರುವ ಯಾವುದನ್ನೂ ನಾವು ಮಾಡಲಿಲ್ಲ. ಹೀಗಿರುವಾಗ ಜನ ನಮ್ಮನ್ನೇಕೆ ಆರಿಸುವುದಿಲ್ಲ? ಸಹಕಾರ ನೀಡುವುದಿಲ್ಲ?

ಈ ಅವಧಿಯಲ್ಲಿನ ಗಮನಾರ್ಹ ಸಾಧನೆಗಳೇನು?

ಶಾಂತಿಯ ಸ್ಥಾಪನೆ. ಒಂದು ವಿಶಿಷ್ಟ ಸಂದರ್ಭದಲ್ಲಿ ಉಗ್ರಗಾಮಿತ್ವದ ಹಾವಳಿ ತ್ರಿಪುರದಲ್ಲಿ ವ್ಯಾಪಕವಾಗಿತ್ತು. ಅದನ್ನು



ನಾವು ಪರಿಣಾಮಕಾರಿಯಾಗಿ ಎದುರಿಸಿದೆವು. ಈಗ ಶಾಂತಿ ನೆಲೆಸಿದೆ. ಆದಾಗ್ಯೂ ನಾವು ಸಂತೃಪ್ತರೇನಲ್ಲ. ಆ ಶಕ್ತಿಗಳು ಪುನಃ ಸಂಘಟಿತವಾಗಬಹುದು, ಸಮಸ್ಯೆ ತರಲು ಯೋಜಿಸಬಹುದು. ಈ ಹಿನ್ನೆಲೆಯಲ್ಲಿ ಜನರನ್ನು ನಾವು ಜಾಗೃತವಾಗಿರಿಸಿದ್ದೇವೆ. ಶಾಂತಿ ಸ್ಥಾಪನೆಯಲ್ಲಿ ಒಂದು ಗಮನಾರ್ಹ ಮುನ್ನಡೆ ಸಾಧ್ಯವಾಗಿದೆ.

ಎರಡನೆಯದಾಗಿ, ಸಮಾಜದ ಜಾತ್ಯಾತೀತ ಸ್ವರೂಪವನ್ನು ಕಾಯ್ದುಕೊಳ್ಳುವುದು. ದೇಶದ ಇಂದಿನ ಸಂದರ್ಭದಲ್ಲಿ ಯೋಚಿಸಿದಾಗ, ವಿಶೇಷವಾಗಿ ನೀವು ಪ್ರತಿನಿಧಿಸುವ ರಾಜ್ಯದ ಸನ್ನಿವೇಶವನ್ನೂ ಗಮನದಲ್ಲಿರಿಸಿದಾಗ ಈ ಅಂಶದ ಮಹತ್ವ ಅರ್ಥವಾದೀತು. ತ್ರಿಪುರಾದಲ್ಲಿನ ಸೌಹಾರ್ದತೆ, ಸಾಮರಸ್ಯದ ವಾತಾವರಣ ಗಮನಾರ್ಹ. ಅವರವರ ಧರ್ಮ ಅನುಸರಣೆ, ಆರಾಧನೆಗೆ ಇಲ್ಲಿ ಎಳ್ಳಷ್ಟೂ ಭಂಗವಿಲ್ಲ. ಇನ್ನೊಂದು ಅಂಶವೆಂದರೆ, ತಳಮಟ್ಟದವರೆಗೂ ಪ್ರಜಾಪ್ರಭುತ್ವದ ವಿಸ್ತರಣೆ. ಪ್ರಜಾಪ್ರಭುತ್ವದ ಅರ್ಥ ಕೇವಲ 5 ವರುಷಗಳಿಗೊಮ್ಮೆ ಓಟು ಹಾಕಿ ಕೂಡುವುದಲ್ಲ. ಇಲ್ಲಿ ಜನತೆಗೆ ಪರಮಾಧಿಕಾರವಿರಬೇಕು. ಅದನ್ನು ನಾವು ಪಂಚಾಯತ್ ರಾಜ್ ವ್ಯವಸ್ಥೆ ಮೂಲಕ, ನಗರ ಪಂಚಾಯತ್‌ಗಳ ಮೂಲಕ, ಸಂವಿಧಾನದ ಆರನೇ ಷೆಡ್ಯೂಲ್ ಪ್ರಕಾರ ಬುಡಕಟ್ಟು ಜನರು ವಾಸಿಸುವ ಪ್ರದೇಶದಲ್ಲಿ ಸ್ವಾಯತ್ತ ಮಂಡಳಿಗಳ ರಚನೆಯನ್ನು ಮಾಡಿದ್ದೇವೆ. ಈ ಸಮಿತಿಗಳನ್ನು ಕೇವಲ ಆಯ್ಕೆ ಮಾಡಿದ್ದಷ್ಟೇ ಅಲ್ಲ, ಅವುಗಳಿಗೆ ಹೆಚ್ಚಿನ ಅಧಿಕಾರ ನೀಡಿದೆವು, ಸಾಧ್ಯವಿರುವಷ್ಟು ಹೆಚ್ಚಿನ ಸಂಪನ್ಮೂಲ ಒದಗಿಸಿ ನಿಜಕ್ಕೂ ಪರಿಣಾಮಕಾರಿಯಾಗುವಂತೆ ನೋಡಿಕೊಂಡೆವು.

ಮತ್ತೊಂದು ಮಹತ್ವದ ಅಂಶ: ಹಿಂದೆ ಕಾಂಗ್ರೆಸ್ ಆಡಳಿತವಿರುವಾಗ ಬುಡಕಟ್ಟು ಜನರು ಹಸಿವು ತಾಳದೆ ನಮ್ಮ ತಾಯಂದಿರು ಅನ್ನ ಹುಡುಕಿಕೊಂಡು ಅಲೆಯುತ್ತಿದ್ದರು. ಮಕ್ಕಳನ್ನು ಮಾರುತ್ತಿದ್ದರು. ಅನ್ನ ಹುಡುಕಿ ಹೋದವರು ಮನೆಗೆ ಮರಳುತ್ತಿದ್ದುದು ಕಡಿಮೆ. ಕುಟುಂಬಗಳು ಒಡೆದು ಹೋಗಿದ್ದವು. ಅಲ್ಲಿ ಹಲವಾರು ದುರಂತಗಳ ಸರಮಾಲೆಗಳಿದ್ದವು. ಆದರೀಗ ಅಂತಹ ನಕಾರಾತ್ಮಕ ಅಂಶಗಳು ಕೇವಲ ನೆನಪು, ಅದು ಇತಿಹಾಸದ ಭಾಗವಷ್ಟೆ. ಈಗ ಜನ ಸಾಮಾನ್ಯರ ಜೀವನ ಮಟ್ಟ ಸುಧಾರಿಸಿದೆ. ಇದರ ಪ್ರತಿಫಲನ ನಮ್ಮ ಸಮಾಜದ ವಿವಿಧ ಸ್ಥರಗಳಲ್ಲಿ ಕಾಣುತ್ತೇವೆ. ಅಂದ ಮಾತ್ರಕ್ಕೆ ಪೂರ್ಣ ಸಂತೃಪ್ತಿಗೆ ನಮ್ಮಲ್ಲಿ ಜಾಗವಿಲ್ಲ. ಇನ್ನಷ್ಟು ಸಾಧಿಸಬೇಕಿದೆ.

ಜನರಲ್ಲಿ ನಿರೀಕ್ಷೆಗಳು ಹೆಚ್ಚಾಗಿವೆ. ಅದು ತಪ್ಪಲ್ಲ. ಅದನ್ನು ಈಡೇರಿಸಲು ಶ್ರಮಿಸುತ್ತೇವೆ.

ದೇಶದೆಲ್ಲೆಡೆ ತೀವ್ರವಾದ ಕಾರ್ಷಿಕ ಬಿಕ್ಕಟ್ಟನ್ನು ಕಾಣುತ್ತಿದ್ದೇವೆ. ರೈತರ ಆತ್ಮಹತ್ಯೆ, ಕೂಲಿಕಾರರ ವಲಸೆಗಳು ಇತ್ಯಾದಿ ನಡೆದಿವೆ. ತ್ರಿಪುರಾದಲ್ಲಿನ ಸ್ಥಿತಿಯೇನು?

ತ್ರಿಪುರಾದಲ್ಲಿ ರೈತರ ಆತ್ಮಹತ್ಯೆಗಳಿಲ್ಲ. ಕೃಷಿ ಕ್ಷೇತ್ರದಲ್ಲಿ ಸುಸ್ಥಿರ ಬೆಳವಣಿಗೆಗಾಗಿ ಶ್ರಮಿಸುತ್ತಿದ್ದೇವೆ. ಇಲ್ಲಿ ಕೇಂದ್ರ ಸರ್ಕಾರ ನಮಗೆ ಸಹಾಯ ನೀಡುವುದರಲ್ಲಿ ಹಲವು ಅಡ್ಡಿ ಉಂಟು ಮಾಡುತ್ತಿದೆ. ಆದರೂ ನಾವು ರೈತರಿಗೆ ಸಹಾಯ ಮಾಡಲು ನಿರಂತರ ಪ್ರಯುತ್ನಿಸುತ್ತಿದ್ದೇವೆ. ಒಂದಂತೂ ಸತ್ಯ, ಇಡೀ ದೇಶವೇ ಆಳವಾದ ಬಿಕ್ಕಟ್ಟನ್ನು ಎದುರಿಸುತ್ತಿರುವಾಗ ತ್ರಿಪುರಾ ಪ್ರತ್ಯೇಕವಾಗಿ ಅದರಿಂದ ಹೊರಗಿರಲು ಸಾಧ್ಯವಿಲ್ಲ. ನಮ್ಮದು ಸಣ್ಣ ರಾಜ್ಯ. ಆದರೆ ಸಣ್ಣ ಪುಟ್ಟ ರೈತರಲ್ಲಿ, ಕೂಲಿಕಾರರಲ್ಲಿ ಒಂದು ವಿಶ್ವಾಸ ಬೆಳೆಸಲು ಸಾಧ್ಯವಾಗಿದೆ. ಅದೇನೆಂದರೆ ತ್ರಿಪುರಾದ ಎಡರಂಗ ಸರ್ಕಾರ ನಮ್ಮನ್ನು ಕೈ ಬಿಡುವುದಿಲ್ಲ ಸಾಧ್ಯವಿರುವುದೆಲ್ಲವನ್ನೂ ಮಾಡುತ್ತಿದೆ' ಎಂಬುದು.(ರಬ್ಬರ್ ಫ್ಲಾಂಟೇಶನ್ ಉತ್ಪಾದನೆ, ವಿವಿಧ ವಾಣಿಜ್ಯ ಬೆಳೆಗಳಿಗೆ ಪ್ರೋತ್ಸಾಹ, ಮಾರುಕಟ್ಟೆ ಒದಗಿಸುವ ಪ್ರಯತ್ನಗಳು, ರೇಗಾ ಯೋಜನೆ ಪರಿಣಾಮಕಾರಿ ಜಾರಿ, ಸಾರ್ವತ್ರಿಕ ಪಡಿತರ ವ್ಯವಸ್ಥೆ ಮುಂ.ಗಳು ಗ್ರಾಮೀಣ ಜನತೆಯನ್ನು ರಕ್ಷಿಸಲು ಸಹಕಾರಿಯಾಗಿವೆ.- ಸಂದರ್ಶಕ)

ಕೃಷಿ – ಕೈಗಾರಿಕೆ ಬೆಳವಣಿಗೆಗೆ ಸಂಬಂಧಿಸಿಂತೆ ಕೇಂದ್ರ ಸರ್ಕಾರದ ವರ್ತನೆ ಹೇಗಿದೆ? ಯೋಜನೆಗಳ ಅಂಗೀಕಾರ ಅಥವಾ ಸಂಪನ್ಮೂಲಗಳ ನೀಡಿಕೆ ವಿಷಯದಲ್ಲಿ ಹಿಂದಿನ ತಾರತಮ್ಯವೇ ಮುಂದುವರಿದಿದೆಯೇ ಹೇಗೆ?.

ನೋಡಿ ಇಷ್ಟು ಹೇಳಬಲ್ಲೆ. ಭಾರತ ಸರ್ಕಾರ ನಮ್ಮ ಅಗತ್ಯಗಳು, ಕೇಳಿಕೆಗಳನ್ನು ಈಡೇರಿಸುವಷ್ಟು ಉದಾರಿ ಅಲ್ಲ! ಅವರು ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ನಮ್ಮ ಕೈ ತಿರುವಲು, ಸಂಕಷ್ಟದಲ್ಲೇ ಇರಿಸಲು ಯತ್ನಿಸುತ್ತಾರೆ. ಆದರೆ ಅದೂ ಹೆಚ್ಚಿಗೆ ಮಾಡಲು ಆಗುತ್ತಿಲ್ಲ. ಕಾರಣ, ನಮ್ಮ ಎಡರಂಗ ಸರಕಾರದ ಸಾಧನೆಗಳು, ನಮ್ಮ ಪಾರದರ್ಶಕತೆ, ಉತ್ತರದಾಯಿತ್ವ ಮತ್ತು ಜನ ಭಾಗಿತ್ವ, ಅಲ್ಲಿಂದ ಸಿಗುವ ಹಣ ಅದು ನಮ್ಮ ಪಾಲು. ಅದೇನೂ ಅವರ ಕಾಣಿಕೆಯೇನಲ್ಲ. ಆದ್ದರಿಂದ ನಮ್ಮ ಪಾಲು ನಮಗೆ ಕೊಡಿ ಎನ್ನುತ್ತೇವೆ.

ಇನ್ನು ಕೈಗಾರಿಕೆ ಬೆಳವಣಿಗೆಯೆಂದರೆ ನಮ್ಮಲ್ಲಿ ಬೃಹತ್ ಕೈಗಾರಿಕೆಗಳಿಲ್ಲ, ಏನಿದ್ದರೂ ಸಣ್ಣವು. ಕೈಗಾರಿಕಾ ಬೆಳವಣಿಗೆಗೆ ಅಗತ್ಯವಾದ ಮೂಲ ಸೌಲಭ್ಯಗಳನ್ನು ನಾವು ನಿರ್ಮಿಸಿದ್ದೇವೆ. ಜನರಲ್ಲಿ ಕೊಳ್ಳುವ ಶಕ್ತಿ ಬೆಳೆಯುತ್ತಿದೆ. ಸಾಕ್ಷರತೆ ಪ್ರಮಾಣ ಶೇ 90% ಇದೆ. ಈ ಕ್ಷೇತ್ರದಲ್ಲಿ ಪ್ರಗತಿ ಸಾಧಿಸುವಲ್ಲಿ ನಾವು ದೇಶದಲ್ಲಿ 3ನೆಯ ಸ್ಥಾನದಲ್ಲಿದ್ದೇವೆ. ಶಿಕ್ಷಣದ ಗುಣಮಟ್ಟವೂ ಹೆಚ್ಚಿದೆ. ರಾಜಕೀಯ ಸ್ಥಿರತೆ, ಶಾಂತಿ ಇದೆ. ಕೈಗಾರಿಕಾ ಬೆಳವಣಿಗೆಗೆ ಅವಕಾಶವಿರುವ ಇನ್ನೊಂದು ರಾಜ್ಯ ಇದು ಎಂದು ಹಲವಾರು

ಪುಟ 12 ಕೆ

ಸಂಪಾದಕೀಯ

ಕೊನೆಗೂ ಸೂರಿಂಜೆಗೆ ಜಾಮೀನು

ಮಂಗಳೂರಿನ ಪಡೀಲ್‌ನ ಮಾರ್ನಿಂಗ್ ಮಿಸ್ಟ್ ಹೋಂ ಸ್ಟೇ ಮೇಲಿನ ದಾಳಿ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದ ಕಸ್ತೂರಿ ನ್ಯೂಸ್ 24 ರ ವರದಿಗಾರ ಪತ್ರಕರ್ತ ನವೀನ್ ಸೂರಿಂಜೆಗೆ ಐದು ತಿಂಗಳ ನಂತರ ಕೊನೆಗೂ ಕರ್ನಾಟಕ ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ. ಸೂರಿಂಜೆ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಶ್ರೀಧರ್‌ರಾವ್ ಅವರಿದ್ದ ಏಕಸದಸ್ಯ ಪೀಠ ಮಾನ್ಯ ಮಾಡಿ ಕೆಲವು ಷರತ್ತುಗಳನ್ನು ವಿಧಿಸಿ ಜಾಮೀನು ನೀಡಿದೆ.

2012 ರ ಜುಲೈ 28 ರಂದು ಶನಿವಾರ ಸಾಯಂಕಾಲ ಹೋಂ ಸ್ಟೇಯೊಂದರಲ್ಲಿ ಜನ್ಮದಿನ ಆಚರಿಸುತ್ತಿದ್ದ ಯುವಕರು ಮತ್ತು ಯುವತಿಯರ ಮೇಲೆ ದಾಳಿ ಮಾಡಿ ಹಲ್ಲೆ ನಡೆಸಿದ ಹಿಂದೂ ಜಾಗರಣ ವೇದಿಕೆಯ ಪುಂಡರ ಜೊತೆ ಷಾಮೀಲಾಗಿ ಯುವತಿಯರ ಮೇಲೆ ನಡೆದ ದಾಳಿಯ ದೃಶ್ಯಾವಳಿಯನ್ನು ಚಿತ್ರೀಕರಣ ಮಾಡಿ ಕೆಟ್ಟದಾಗಿ ಪ್ರಸಾರ ಮಾಡಿದ ಆರೋಪದ ಮೇಲೆ ನವಂಬರ್ 7 ರಂದು ಸೂರಿಂಜೆ ಅವರನ್ನು ಬಂಧಿಸಲಾಗಿತ್ತು. ಅವರ ಮೊದಲ ಜಾಮೀನು ಅರ್ಜಿಯನ್ನು ಹೈ ಕೋರ್ಟ್ ಡಿಸೆಂಬರ್ 26 ರಂದು ತಿರಸ್ಕರಿಸಿತ್ತು.

ಈ ನಡುವೆ ಸದರಿ ಪ್ರಕರಣದಿಂದ ಸೂರಿಂಜೆ ಅವರನ್ನು ಕೈಬಿಡಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿ ರಾಜ್ಯಾದ್ಯಂತ ಪತ್ರಕರ್ತರೂ, ಮಾನವ ಹಕ್ಕು ಹೋರಾಟಗಾರರು, ಎಡ ಮತ್ತು ಪ್ರಜಾಪ್ರಭುತ್ವವಾದಿ ಸಂಘಟನೆಗಳು ಹೋರಾಟ ನಡೆಸಿದ್ದವು. ಸಾರ್ವಜನಿಕ ಅಭಿಪ್ರಾಯವನ್ನು ಪರಿಗಣಿಸಿದ ರಾಜ್ಯ ಸಚಿವ ಸಂಪುಟ ಸೂರಿಂಜೆ ವಿರುದ್ದದ ಪ್ರಕರಣವನ್ನು ಕೈಬಿಡಲು 2013 ಜನವರಿಯಲ್ಲೇ ನಿರ್ಧರಿಸಿತ್ತು. ಆದರೆ ಸೂರಿಂಜೆ ಅವರ ವಿರುದ್ದದ ಪ್ರಕರಣವನ್ನು ಕೈಬಿಟ್ಟರೆ, ಇನ್ನುಳಿದ ಆರೋಪಿಗಳ ವಿರುದ್ದದ ಪ್ರಕರಣವನ್ನು ಕೈಬಿಡಬೇಕೆಂಬ ಸಂಘ ಪರಿವಾರದ ಒತ್ತಡಕ್ಕೆ ಮಣಿದು ಬಿಜೆಪಿ ಇದುವರೆಗೂ ರಾಜ್ಯ ಸಚಿವ ಸಂಪುಟದ ತೀರ್ಮಾನವನ್ನು ಜಾರಿಮಾಡಲು ಮುಂದಾಗಿರಲಿಲ್ಲ.

ಬದಲಾದ ಪರಿಸ್ಥಿತಿ ಮತ್ತು ಪ್ರಕರಣಕ್ಕೆ ಸಂಬಂಧಿಸಿದಂತೆ ನಡೆದಿರುವ ಹೊಸ ಬೆಳವಣಿಗೆಗಳನ್ನು ಆಧರಿಸಿ ಜಾಮೀನು ಮಂಜೂರು ಮಾಡುವಂತೆ ಕೋರಿ ಸೂರಿಂಜೆ ನ್ಯಾಯಾಲಯಕ್ಕೆ ಹೊಸ ಅರ್ಜಿ ಸಲ್ಲಿಸಿದ್ದರು. ಜಾಮೀನು ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳು ಈಗಾಗಲೇ ಕೋರ್ಟ್ ಜಾಮೀನನ್ನು ನಿರಾಕರಿಸಿದೆ. ಬದಲಾದ ಪರಿಸ್ಥಿತಿಯಲ್ಲಿ ಮಾತ್ರ ಪುನಃ ಜಾಮೀನು ಅರ್ಜಿ ಸಲ್ಲಿಸಲು ಸಾಧ್ಯ. ಹೀಗಾಗಿ ಯಾವ ಬದಲಾದ ಪರಿಸ್ಥಿತಿ ಆಧರಿಸಿ ಜಾಮೀನು ಕೋರಲಾಗುತ್ತಿದೆ ಎಂದು ನ್ಯಾಯಮೂರ್ತಿಗಳು ವಿಚಾರಣೆ ಸಂದರ್ಭದಲ್ಲಿ ಸೂರಿಂಜೆ ಪರ ವಕೀಲರನ್ನು ಪ್ರಶ್ನಿಸಿದರು.

ಇದಕ್ಕೆ ಉತ್ತರಿಸಿದ ವಕೀಲರು, ಸೂರಿಂಜೆ ವಿರುದ್ಧದ ಪ್ರಕರಣ ಕೈ ಬಿಡಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿದೆ. ಅಲ್ಲದೆ ದಾಳಿ ಪ್ರಕರಣದಲ್ಲಿ ಪತ್ರಕರ್ತ ಸೂರಿಂಜೆ ತಪ್ಪಿಲ್ಲ ಎಂದು ದೂರುದಾರ ವಿಜಯ್ ಕುಮಾರ್ ಭಾರತೀಯ ಪತ್ರಿಕಾ ಮಂಡಳಿಯ ಅಧ್ಯಕ್ಷ ನ್ಯಾಯಮೂರ್ತಿ ಮಾರ್ಕಂಡೇಯ ಕಾಟ್ಜು ಅವರಿಗೆ ಪತ್ರ ಬರೆದಿದ್ದಾರೆ. ಈ ಬದಲಾದ ಪರಿಸ್ಥಿತಿ ಆಧರಿಸಿ ಜಾಮೀನು ನೀಡುವಂತೆ ಕೋರಿದರು. ಈ ಬಗ್ಗೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿಗಳು ಆ ಪತ್ರವನ್ನು ದೂರುದಾರನೇ ಬರೆದಿದ್ದಾನೆ ಎಂಬುದಕ್ಕೆ ಖಾತರಿ ಏನು ಎಂದು ಪ್ರಶ್ನಿಸಿದರಲ್ಲದೆ ಮುಂದಿನ ವಿಚಾರಣೆಗೆ ದೂರುದಾರ ವಿಜಯ್‌ಕುಮಾರ್ ಅವರನ್ನು ಹಾಜರುಪಡಿಸುವಂತೆ ಪೊಲೀಸರಿಗೆ ಆದೇಶ ನೀಡಿದರು. ಪ್ರಕರಣವನ್ನು ಚಿತ್ರೀಕರಿಸಿದ ಡಿವಿಡಿಯನ್ನು ನ್ಯಾಯಮೂರ್ತಿಗಳು ವೀಕ್ಷಿಸಿದರು.


ಪತ್ರಕರ್ತ ಸೂರಿಂಜೆ ಅಂದು ಹಲ್ಲೆಕೋರರ ಜೊತೆಯಲ್ಲೇ ಬಂದು, ಯುವತಿಯರು ಹಲ್ಲೆಗೊಳಗಾಗುವುದನ್ನು ಕೆಟ್ಟದಾಗಿ ಚಿತ್ರಿಸಿ ಪ್ರಸಾರ ಮಾಡಿದ್ದರು ಎಂಬ ಆರೋಪದ ಮೇಲೆ ಪೊಲೀಸರು ಸೂರಿಂಜೆ ಅವರನ್ನು 44 ನೇ ಆರೋಪಿಯಾಗಿ ಪ್ರಕರಣದಲ್ಲಿ ಸೇರಿಸಿಕೊಂಡಿದ್ದರು. ಆದರೆ ದೂರುದಾರ ವಿಜಯ್ ಕುಮಾರ್ ಬರೆದ ಪತ್ರದಲ್ಲಿ ಸೂರಿಂಜೆ ಅವರು ಘಟನೆ ನಡೆದ ಸ್ವಲ್ಪ ಹೊತ್ತಿಗೆ ಅಲ್ಲಿಗೆ ಬಂದಿದ್ದರೆಂದೂ, ಯುವತಿಯರ ಮೇಲೆ ಹಲ್ಲೆ ಮಾಡುವುದನ್ನು ನಿಲ್ಲಿಸಿ ಎಂದು ಅವರು ಕೂಗಿ ಕೂಗಿ ಹೇಳುತ್ತಿದ್ದರೆಂದೂ, ಹಲ್ಲೆ ಮಾಡುತ್ತಿದ್ದವರನ್ನು ತಡೆಯಿರಿ ಎಂದು ಸ್ಥಳದಲ್ಲಿದ್ದ ಪೊಲೀಸರಿಗೆ ಅವರು ಅನೇಕ ಬಾರಿ ಮನವಿ ಮಾಡಿದರೆಂದೂ, ಸೂರಿಂಜೆ ಅವರು ಅಲ್ಲಿಗೆ ಬರದೆ ಹೋಗಿದ್ದರೆ ಇನ್ನೂ ಹೆಚ್ಚು ಅನಾಹುತ ಆಗುತ್ತಿತ್ತು ಎಂದೂ, ಈ ಪ್ರಕರಣದಲ್ಲಿ ಸೂರಿಂಜೆ ಯಾವುದೇ ತಪ್ಪು ಎಸಗಿಲ್ಲವೆಂದೂ, ಚಿತ್ರೀಕರಣ ಮಾಡಿದ ಕ್ಯಾಮರಮೆನ್ ಬೇರೆಯವರೆಂದೂ ವಿವರವಾಗಿ ಬರೆದಿದ್ದರು. ದೂರುದಾರರ ಹೇಳಿಕೆಯನ್ನು

ದಾಖಲು ಮಾಡಿಕೊಂಡ ನ್ಯಾಯಾಲಯವು ಸದರೀ ಪತ್ರವನ್ನು ದೂರುದಾರರೇ ಬರೆದಿದ್ದಾರೆ ಎಂಬುದನ್ನು ಖಚಿತಪಡಿಸಿ, ಆ ಪತ್ರವನ್ನು ಹೊಸ ಪರಿಸ್ಥಿತಿ ಎಂದು ಪರಿಗಣಿಸಿ ಸೂರಿಂಜೆಗೆ ಜಾಮೀನು ನೀಡಿದರು.

ರಾಜ್ಯ ಹೈಕೋರ್ಟಿನ ಕ್ರಮದಿಂದಾಗಿ ರಾಜ್ಯ ಬಿಜೆಪಿ ಸರ್ಕಾರಕ್ಕೆ ತೀವ್ರ ಹಿನ್ನಡೆಯಾಗಿದೆ.

ಪುಟ 4 ಕ್ಕೆ

ಅಧಿಕಾರದಾಹೀ ಸರಕಾರದ ಅಂತ್ಯ ಕಾಲದ ಆಮಿಷಗಳು



ಈ ವಾರವಿಡೀ ಎಲ್ಲಾ ಪಕ್ಷಗಳಲ್ಲಿಯೂ ಚುನಾವಣಾ ತಯಾರಿಯ ಗಡಿಬಿಡಿ. ಯಾಕೆಂದರೆ ರಾಜ್ಯದ ವಿಧಾನ ಸಭೆಗೆ ಯಾವಾಗ ಬೇಕಾದರೂ ಚುನಾವಣೆಗಳು ಘೋಷಿತವಾಗಬಹುದು ಎಂಬ ದಟ್ಟ ವದಂತಿ. ಈ ನಿರೀಕ್ಷೆಯಂತೆ ಚುನಾವಣಾ ಆಯೋಗ ಮೇ 5ರಂದು ಎಲ್ಲಾ ಸ್ಥಾನಗಳಿಗೂ ಏಕ ಕಾಲಕ್ಕೆ ಮತದಾನವನ್ನು ನಿಗದಿ ಪಡಿಸಿದೆ. 8ರಂದು ಜನತೆಯ ತೀರ್ಪು ಬಹಿರಂಗ. ಹೀಗಾಗಿಯೇ ಈಗ ರಾಜಕೀಯ ವಲಯಗಳಲ್ಲಿ ವಿದ್ಯುತ್ ಸಂಚಾರ.

ಅಡ್ಡ ಹಾದಿ

ಪಕ್ಷಗಳೇನೋ ಅಭ್ಯರ್ಥಿಗಳ ಪಟ್ಟಿ ತಯಾರಿ, ಮತದಾರರನ್ನು ತಲುಪುವ ಹಲವು ತಾಲೀಮು ನಡೆಸುತ್ತಿರುವುದೇನೋ ನಿಜ. ಆದರೆ ಬಿಜೆಪಿ ಇತ್ತೀಚೆಗಿನ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಸೋಲಿನ ಅಘಾತದಿಂದ ಇನ್ನೂ ಚೇತರಿಸಿಕೊಂಡಿಲ್ಲ. ಅದರ ಹಲವು ಸುತ್ತಿನ ಆತ್ಮಾವಲೋಕನ ಬೈಠಕ್‌ಗಳು ಸೋಲಿನ ನಿಜ ಕಾರಣಗಳನ್ನು ಪತ್ತೆ ಹಚ್ಚಲಿಲ್ಲ. ಹಾಗೊಮ್ಮೆ ಇದ್ದಿದ್ದರೆ ತನ್ನ ದುರಾಡಳಿತವನ್ನು ಅಂಗೈ ಕನ್ನಡಿಯಲ್ಲಿ ಕಾಣಬೇಕಿತ್ತು. ಅವುಗಳನ್ನು ಸರಿಪಡಿಸಿಕೊಳ್ಳಲು ಕೊಂಚವಾದರೂ ಯತ್ನಿಸಬೇಕಿತ್ತು. ಆದರೆ ಈಗಲೂ ತನ್ನದು ಸುವರ್ಣ ಯುಗದ ಆಡಳಿತವೆಂದೇ ಬಿಜೆಪಿ ಹೇಳಿಕೊಳ್ಳುತ್ತಿದೆ. ಜನತೆಯ ತೀರ್ಪಿಗೆ ತಲೆಬಾಗುವ ಜಾಯಮಾನ ಬಿಜೆಪಿಯಂತಹ ಫ್ಯಾಸಿಸ್ಟ್ ಪಕ್ಷದ್ದಲ್ಲ. ಹೀಗಾಗಿಯೇ ಹೇಗಾದರೂ ಅಡ್ಡ ಹಾದಿ ಹಿಡಿದಾದರೂ ಪುನಃ ಅಧಿಕಾರಕ್ಕೆ ಬರುವ ಕುತಂತ್ರಗಳನ್ನೇ ಹೆಣೆಯುತ್ತಿದೆ.

ಬಿಜೆಪಿಯು ತನ್ನ ಸೋಲಿಗೆ ಪಕ್ಷ ಒಡೆದಿರುವುದು ಒಂದು ಪ್ರಮುಖ ಕಾರಣವೆಂದೂ, ಮುಂದೂ ಕಾರಣವಾಗಬಹುದೆಂದು ಭಾವಿಸಿದೆ. ಹೀಗಾಗಿಯೇ 'ಹೊಲಸು ಹೊರ ಹೋಗಿ ಪಕ್ಷ ಶುಚಿಯಾಯಿತೆಂದು ಹೇಳುತ್ತಿದ್ದ ಅದು ತನ್ನ ಎಲ್ಲಾ ಶತೃತ್ವವನ್ನೂ, ಅಪಮಾನವನ್ನೂ ಬದಿಗಿರಿಸಿ ಪುನಃ ಯಡಿಯೂರಪ್ಪ ಜನಾರ್ಧನರೆಡ್ಡಿ, ಮತ್ತು ಶ್ರೀರಾಮುಲುಗಳ ಕೈ ಕಾಲು ಹಿಡಿದು ಒಳ ಮೈತ್ರಿಯ ರಾಜೀ ಸಂಧಾನಕ್ಕಾಗಿ ಅಂಗಲಾಚುತ್ತಿದೆ. ಸಂದರ್ಭಸಾಧಕತನವೆಂದರೆ ಇದಲ್ಲವೇ?

ಎರಡನೆಯದಾಗಿ, ಅದು ಎಷ್ಟು ಹತಾಶವಾಗಿದೆಯೆಂದರೆ ಮತದಾರರನ್ನು ವಂಚಿಸಲು ಮಾಡುತ್ತಿರುವ ಪ್ರಯತ್ನಗಳು. ಓಲೈಕೆಯ ಹಲವು ಆಮಿಷಗಳೇ ಸಾಕ್ಷಿ. ಇದಕ್ಕಾಗಿ ಅದು ತನ್ನ ಅವಸಾನದ ಕೊನೆ ಕ್ಷಣಗಳಲ್ಲಿಯೂ ಸಚಿವ ಸಂಪುಟದ ಮೂಲಕ ಎಲ್ಲಾ ನೈತಿಕತೆ, ರಾಜಕೀಯ ಸೂಕ್ಷ್ಮತೆಗಳನ್ನು ಗಾಳಿಗೆ ತೂರಿ ನಾಗರೀಕ ನಡತೆಯ ಎಲ್ಲೆ ಮೀರಿ ವರ್ತಿಸುತ್ತಿದೆ. ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ರಾಜಧಾನಿಯಲ್ಲಿದ್ದು ಆಡಳಿತ ನಡೆಸುತ್ತಿಲ್ಲ. ಅವರ ದರುಶನ ಭಾಗ್ಯವೇನಿದ್ದರೂ ಮಧ್ಯ ರಾತ್ರಿಯಲ್ಲೇ. ಅದೂ ಸಚಿವ ಸಂಪುಟದ ಸಭೆಯಲ್ಲೇ. ಇಂತಹ ಮಧ್ಯ ರಾತ್ರಿ ಕಾರ್ಯಾಚರಣೆಗಳ ಬಗ್ಗೆ ವ್ಯಾಪಕ ಟೀಕೆಗಳಿದ್ದರೂ ಅದಕ್ಕೆ ಸ್ಪಂದಿಸುವ ಸಂವೇದನೆಯನ್ನೇ ಅವರು ಕಳೆದುಕೊಂಡಿದ್ದಾರೆ.

ಪ್ರಜಾಪ್ರಭುತ್ವ ವಿರೋಧಿ

ಇತ್ತೀಚೆಗೆ ಸಂಪುಟದ ಸಭೆಯಲ್ಲಿ ಕೈಗೊಂಡ ತೀರ್ಮಾನಗಳು ವಿನಾಶಕಾಲದ ವಿಪರೀತ ಬುದ್ಧಿ ಮಾತ್ರವಲ್ಲ, ಸರ್ಕಾರವೆಂಬುದು ಸಾರ್ವಜನಿಕ ಎನ್ನುವುದಕ್ಕಿಂತ ತಮ್ಮ ಪಿತ್ರಾರ್ಜಿತ ಆಸ್ತಿಯೆಂಬಂತೆ ವರ್ತಿಸಿದೆ. ತಾವೇನಿದ್ದರೂ ಜನರಿಂದ ನಿಗದಿತ ಅವಧಿಗೆ ಚುನಾಯಿತರಾದ ಪ್ರತಿನಿಧಿಗಳು ಎಂಬುದನ್ನು ಮರೆತು ಪಾಳೇಗಾರಿ ಅರಸರಂತೆ ಬೀಗುತ್ತಿದ್ದಾರೆ. ಈಗಾಗಲೇ ಸಾಮಾನ್ಯರ ತೆರಿಗೆಯ ಸಾವಿರಾರು ಕೋಟಿ ಹಣವನ್ನು ಮನಬಂದಂತೆ ಜಾತಿಯ ಮಠಗಳಿಗೆ, ಸಂಘಪರಿವಾರದ ಸಂಸ್ಥೆಗಳಿಗೆ ಹಂಚಿದ್ದ ಬಿಜೆಪಿ ಇದೀಗ ಮಹಾರಾಜರಂತೆ ತಮ್ಮನ್ನು ಬೆಂಬಲಿಸುವವರನ್ನು ಮತ್ತಷ್ಟು ಓಲೈಸಲು ಭೂಮಿಯನ್ನು ಉಂಬಳಿಯಾಗಿ ದಾನ ಮಾಡಲು ನಿರ್ಧರಿಸಿದೆ. ಇದು

ಪುಟ 4 ಕ್ಕೆ

ವಾರದ ಕಾರ್ಟೂನ್



ಸರ್ಕಾರಿ ಕಲಾ ಕಾಲೇಜು ಸ್ನಾತಕೋತ್ತರ ಕೇಂದ್ರ ಕಟ್ಟಡಕ್ಕೆ ಒತ್ತಾಯಿಸಿ ಎಸ್‌ಎಫ್‌ಐ ಪ್ರತಿಭಟನೆ

ಮಾರ್ಚ್ 20, 2013 ರಂದು ನಗರದ ಸರ್ಕಾರಿ ಕಲಾ ಕಾಲೇಜು ಎಸ್‌ಎಫ್‌ಐ ಘಟಕದ ನೇತೃತ್ವದಲ್ಲಿ ನೂರಾರು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ಸರ್ಕಾರಿ ಕಲಾ ಕಾಲೇಜಿನಿಂದ ಹೊರಟ ವಿದ್ಯಾರ್ಥಿಗಳ ಪ್ರತಿಭಟನಾ ರ್‍ಯಾಲಿ ಸೆಂಟ್ರಲ್ ಕಾಲೇಜಿನ ಉಪ ಕುಲಪತಿಯವರ ಕಛೇರಿಯವರೆಗೆ ನಡೆಯಿತು. ನಂತರದಲ್ಲಿ ಉಪಕುಲಪತಿಯವರ ಕಛೇರಿ ಮುಂಭಾಗದಲ್ಲಿ ಪ್ರತಿಭಟನಾ ನಿರತ ವಿದ್ಯಾರ್ಥಿಗಳು ಕುಳಿತು ರಾಜ್ಯ ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಎಸ್‌ಎಫ್‌ಐನ ಜಿಲ್ಲಾ ಕಾರ್ಯದರ್ಶಿ ಎಸ್.ಚಿಕ್ಕರಾಜು ಸರ್ಕಾರಿ ಕಲಾ ಕಾಲೇಜಿಗೆ ಸುಮಾರು 136 ವರ್ಷಗಳ ಇತಿಹಾಸವಿದೆ. ಪ್ರಸ್ತುತ ಈ ಕಾಲೇಜಿನಲ್ಲಿ 2000 ಕ್ಕೂ ಹೆಚ್ಚು ವಿವಿಧ ವಿಭಾಗಗಳಾದ ಬಿಎ, ಬಿಕಾಂ, ಬಿಬಿಎಂ ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಿದ್ದಾರೆ. ಈ ವಿದ್ಯಾರ್ಥಿಗಳಿಗೆ ಅಗತ್ಯ ಕೊಠಡಿಗಳ ಕೊರತೆ ಇದ್ದು, ಪಾಳಿ ಪದ್ಧತಿಯಲ್ಲಿ ತರಗತಿಗಳು ನಡೆಯುತ್ತಿವೆ. ಜೊತೆಗೆ 2008ರಲ್ಲಿ ಸ್ನಾತ-ಕೋತ್ತರ ಕೇಂದ್ರವನ್ನು ಮಂಜೂರು ಮಾಡಿದ್ದು



ಪ್ರಸ್ತುತ ಕನ್ನಡ, ಇತಿಹಾಸ, ಇಂಗ್ಲೀಷ್, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಭೂಗೋಳಶಾಸ್ತ್ರ, ಸೇರಿದಂತೆ ಒಟ್ಟು 6 ವಿಭಾಗಗಳಿವೆ. ಪದವಿ ತರಗತಿಗಳು ಪ್ರಾರಂಭವಾದಾಗ ಕೊಠಡಿಗಳ ಅಭಾವ ತೀವ್ರವಾಗುತ್ತದೆ. ಆದ್ದರಿಂದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಚಟುವಟಿಕೆಗಳಿಗೆ ಶೈಕ್ಷಣಿಕ ಪೂರಕ ವಾತಾವರಣ ಇಲ್ಲದಂತಾಗಿದೆ. ಈ ವಿಷಯವಾಗಿ ಎಸ್‌ಎಫ್‌ಐ ಸಂಘಟನೆಯಿಂದ ಹಲವಾರು ಭಾರಿ ಪ್ರತಿಭಟನೆ ನಡೆಸಿ ಸಂಬಂಧಪಟ್ಟವರಿಗೆ ಮನವಿ ಸಲ್ಲಿಸಿದರೂ ಈ ಬಗ್ಗೆ ಸರ್ಕಾರ ಗಮನಹರಿಸದೇ ಇರುವುದರಿಂದ ವಿದ್ಯಾರ್ಥಿಗಳ ಸಮಸ್ಯೆಗಳು ಉಲ್ಬಣವಾಗಿವೆ ಎಂದರು. ಎಸ್‌ಎಫ್‌ಐನ ಜಿಲ್ಲಾಧ್ಯಕ್ಷರಾದ ಮುನಿರಾಜು. ಎಂ, ರಾಜ್ಯ ಉಪಾಧ್ಯಕ್ಷರಾದ ಗುರುರಾಜ್ ದೇಸಾಯಿ ಮಾತನಾಡಿದರು. ಜಿಲ್ಲಾ ಉಪಾಧ್ಯಕ್ಷರಾದ ಯುವರಾಜ್ ಸೇರಿದಂತೆ ಎಸ್‌ಎಫ್‌ಐ ಘಟಕ ಅಧ್ಯಕ್ಷರಾದ ಸೌಭಾಗ್ಯ, ಮುಖಂಡರಾದ ಗೀತಾ, ಮನೋಹರ್ ಹಾಜರಿದ್ದರು. ಪ್ರತಿಭಟನೆಯ ನಂತರದಲ್ಲಿ ಬೆಂಗಳೂರು ವಿ.ವಿ. ಉಪ ಕುಲಪತಿ ಪ್ರೊ ತಿಮ್ಮೇಗೌಡ ಮತ್ತು ಸರ್ಕಾರದ ಪ್ರಧಾ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾ ಇವರಿಗೆ ಮನವಿ ಸಲ್ಲಿಸಲಾಯಿತು.

ಆದ್ದರಿಂದ ಸ್ನಾತಕೋತ್ತರ ವಿದ್ಯಾರ್ಥಿಗಳಿ ಬೇಕಾದಂತಹ ಪೂರಕವಾದಂತಹ ಉತ್ತಮ ಶೈಕ್ಷಣಿಕ ವಾತಾವರಣ ಒದಗಿಸಲು ಈ ಕೂಡಲೇ ಅತೀ ಶೀಘ್ರವಾಗಿ ಸ್ನಾತಕೋತ್ತ ವಿಭಾಗ ಹಾಗೂ ಸಂಶೋಧನಾ ಕೇಂದ್ರ-ಕ್ಕೆ ಪ್ರತ್ಯೇಕ ಕಟ್ಟಡವನ್ನು ಸ್ಥಾಪಿಸಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್ ಆಗ್ರಹಿಸಿ ಒಂದು ವಾರ ಕಾಲದ ಗಡುವು ನೀಡಿದೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಸಮಸ್ಯೆಗಳನ್ನು ಬಗೆಹರಿಸದಿದ್ದರೆ ತರಗತಿಗಳನ್ನು ಬಹಿಷ್ಕರಿಸಿ ಕಾಲೇಜಿಗೆ ಬೀಗ ಹಾಕಿ ಪ್ರತಿಭಟಿಸುವುದಾಗಿ ಎಸ್.ಎಫ್.ಐ ಎಚ್ಚರಿಸಿದೆ. ಅಗತ್ಯಕ್ಕೆ ತಕ್ಕಂತೆ ಉಪನ್ಯಾಸಕರುಗಳನ್ನು ನೇಮಿಸಬೇಕು ಗ್ರಂಥಾಲಯದಲ್ಲಿ ಅಗತ್ಯ ಪಠ್ಯಪುಸ್ತಕಗಳನ್ನು ಒದಗಿಸಬೇಕು. ವಿದ್ಯಾರ್ಥಿಗಳಿಗೆ ಶುದ್ಧ ಕುಡಿಯುವ ನೀರು ಹಾಗೂ ಸ್ವಚ್ಛ ಶೌಚಾಲಯ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು.

ಕಾಲೇಜು ಕ್ಯಾಂಟೀನಿನಲ್ಲಿ ವಿದ್ಯಾರ್ಥಿಗಳಿಗೆ ಬೆಂ.ವಿ.ವಿ ಯ ರೀತಿಯಲ್ಲಿ 3ರೂ ದರದಲ್ಲಿ ಊಟ ನೀಡಬೇಕು ಎಂದು ಸಹ ಆಗ್ರಹಿಸಲಾಗಿದೆ. ●

ಸೂರಿಂಜೆಗೆ.......

ಪುಟ 3 ರಿಂದ

ಯುವತಿಯರ ಮೇಲೆ ಹಿಂದೂ ಸಂಘಟನೆಯ ಕಾರ್ಯಕರ್ತರು ನಡೆಸಿದ ಹಲ್ಲೆ ಪ್ರಕರಣದಲ್ಲಿ ಸೂರಿಂಜೆ ಅವರ ಯಾವುದೇ ಪಾತ್ರ ಇಲ್ಲ ಎಂಬುದು ತಿಳಿದಿದ್ದರೂ ಪೊಲೀಸರು ರಾಜಕೀಯ ಒತ್ತಡಕ್ಕೆ ಮಣಿದು ಸೂರಿಂಜೆಯವರ ಹೆಸರನ್ನು ಸುಮಾರು 3 ತಿಂಗಳ ನಂತರ ಸೇರ್ಪಡೆ ಮಾಡಿ ಅವರನ್ನು ಬಂಧಿಸಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದೂ ಸಂಘಟನೆಗಳ ಕಾರ್ಯಕರ್ತರು ಅಕ್ರಮವಾಗಿ ನಡೆಸುತ್ತಾ ಬಂದಿರುವ ನೈತಿಕ ಪೊಲೀಸ್‌ಗಿರಿ ಪ್ರಕರಣಗಳನ್ನು ತಮ್ಮ ವರದಿಗಳ ಮೂಲಕ ಬಯಲಿಗೆಳೆಯುತ್ತಿದ್ದ ನವೀನ್ ಸೂರಿಂಜೆ ಅವರ ಬಾಯಿ ಮುಚ್ಚಿಸಲು ಅವರನ್ನು ಈ ಪ್ರಕರಣದಲ್ಲಿ ಸೇರಿಸಲಾಗಿತ್ತು. ಸೂರಿಂಜೆ ಅವರಿಗೆ ನ್ಯಾಯಾಲಯ ಜಾಮೀನು ನೀಡಿದ್ದು ಸ್ವಾಗತಾರ್ಹವಾಗಿದೆ. ಸೂರಿಂಜೆ ಅವರನ್ನು ಈ ಪ್ರಕರಣದಲ್ಲಿ ಸೇರ್ಪಡೆ ಮಾಡಲು ಕಾರಣರಾದವರನ್ನು ಬಯಲಿಗೆಳೆಯಲು ಇಡೀ ಪ್ರಕರಣದ ಸಮಗ್ರ ತನಿಖೆ ಆಗಬೇಕಾಗಿದೆ. ಸೂರಿಂಜೆ ವಿರುದ್ಧ ಸಂಚು ರೂಪಿಸಿದ ಪೊಲೀಸರಿಗೆ ಶಿಕ್ಷೆಯಾಗಬೇಕಾಗಿದೆ. ಪೂರ್ಣಪ್ರಮಾಣದ ನ್ಯಾಯ ಪಡೆಯಲು ಹೋರಾಟ ಮುಂದುವರೆಯಬೇಕಾಗಿದೆ. ●

ಅಧಿಕಾರದಾಹೀ ಸರಕಾರ....

ಪುಟ 3 ರಿಂದ

ಅಕ್ರಮ.

ಪಂಚಮಸಾಲಿ ಮಠ, ಬೋವಿ, ಕುರುಬರ ಸಂಘದಂತಹ ಹತ್ತಾರು ಜಾತಿಯ ಸಂಸ್ಥೆಗಳಿಗೆ, ಬೆಂಗಳೂರಿನ ಕೆಂಪೇಗೌಡ ನಗರ, ತೀರ್ಥಹಳ್ಳಿ, ದಾವಣಗೆರೆ, ಹುಬ್ಬಳ್ಳಿ ಮುಂತಾದ ಪ್ರದೇಶಗಳಲ್ಲಿ ಆರೆಸ್ಸೆಸ್ ಸಂಸ್ಥೆಗಳಿಗೆ ಅತ್ಯಂತ ಬೆಲೆ ಬಾಳುವ ಸರಕಾರದ ಜಮೀನನ್ನು ಮನಬಂದಂತೆ ನೀಡಿದೆ. ಇವೆಲ್ಲವು 'ಭೂದಾನ'ದ ಭರ್ಜರಿ ಲಂಚದ ಮೂಲಕ ಜಾತೀಯ ಮತಗಳನ್ನು ಸೆಳೆಯುವ ಆಮಿಷ, ಪ್ರಲೋಭಗಳ ಕೊನೆಯ ಪ್ರಯತ್ನ. ಆದರೆ ಇದೇ ಸರಕಾರ ರಾಜ್ಯದಲ್ಲಿರುವ ಲಕ್ಷಾಂತರ ಭೂಹೀನರು ಜೀವನಾಧಾರಕ್ಕೆ ತುಂಡು ಭೂಮಿ ಕೊಡಿ, ಉಳುಮೆ ಮಾಡಿದ ಬಗರ್ ಹುಕುಂ ಭೂಮಿಗೆ ಪಟ್ಟಾ ನೀಡಿ, ಅರಣ್ಯ ಭೂಮಿಯಿಂದ ಒಕ್ಕಲೆಬ್ಬಿಸಿ ಭೂಮಿ ಕಿತ್ತುಕೊಳ್ಳಬೇಡಿ, ಉದ್ಯಮಗಳ ಹೆಸರಿನಲ್ಲಿ ಕೃಷಿ ಜಮೀನು ಕಿತ್ತುಕೊಂಡು ನಿರ್ಗತಿಕರನ್ನಾಗಿಸಬೇಡಿ ಅಂತಾ ನಿರಂತರ ಮೊರೆ ಇಡುತ್ತಿದ್ದರೂ ಕಿವಿಗೊಡದ ಸರಕಾರ ಇಂದು ಜಾತಿ ಮಠಗಳಿಗೆ ಭೂಮಿ ನೀಡುತ್ತಿದೆಯೆಂದರೆ ಏನರ್ಥ? ಈಗಾಗಲೇ ಸಾಕಷ್ಟು ಬೆಲೆಬಾಳುವ ಭೂಮಿಯನ್ನು ಲಪಟಾಯಿಸಿರುವ ಆರೆಸ್ಸೆಸ್‌ಗೆ ಮತ್ತೂ ಕೊಡುವುದೆಂದರೆ ಅದರ ಭೂ ಕಬಳಿಕೆಯ ದಾಹವಾದರೂ ಎಷ್ಟು? ಕೊನೆಗೆ ಕೊಂಡೂ ಹೋಗುವ ಚಾಳಿಯೇ?

ಇದೆಂತಹ ಔದಾರ್ಯ?

ಮಾತ್ರವಲ್ಲ, ಈ ಸರಕಾರಕ್ಕೆ ಈಗ ಬಡವರ ಹಸಿವಿನ ಬಗ್ಗೆ ದಿಢೀರನೇ ಜ್ಞಾನೋದಯವಾಗಿ ಬಿಟ್ಟಿದೆ. ಈ ಏಪ್ರೀಲ್ ನಿಂದ 2 ರೂಪಾಯಿಗೆ ಕೆ.ಜಿ. ಅಕ್ಕಿಯನ್ನು ನೀಡಲಿದೆಯಂತೆ. ಇವರಿಗೆ ಬೇಕಾದವರಿಗೆ ಇಂಜನೀಯರಿಂಗ್ ಕಾಲೇಜ್ ಉಂಬಳಿಗಳು ಬೇರೆ ! 2009 ರಲ್ಲಿ ನೆರೆ ಹಾವಳಿಯಿಂದಾಗಿ ಜನ ಕೊಚ್ಚಿ ಹೋಗುತ್ತಿದ್ದರೂ ನೆರವಿಗೆ ಬಾರದೇ ಯೋಗಾಭ್ಯಾಸದಲ್ಲೇ ಕಾಲಕಳೆದ ಸರಕಾರ, ನಂತರವೂ ಪರಿಹಾರ, ಪುನರ್ವಸತಿ ಕಲ್ಪಿಸದ ಈ ಸರಕಾರ, 129 ತಾಲೂಕುಗಳ ಜನ ಬರದ ದವಡೆಯಲ್ಲಿ ತತ್ತರಿಸುತ್ತಿರುವಾಗ ತಿರುಗಿ ನೋಡದೇ ರೆಸಾರ್ಟ್ ರಾಜಕೀಯದಲ್ಲಿ ಕಾಲ ಕಳೆದ ಸರಕಾರ, ಈಗ ನೆರೆ ಬರದಂತಹ ಪ್ರಕೃತಿ ವಿಕೋಪಗಳಿಗೆ ಸ್ಪಂದಿಸಲು ಸಂವೇದನಾ ಪಡೆಯೊಂದನ್ನು ರಚಿಸಲು ತೀರ್ಮಾನಿಸಿದೆ!. ಗೊಬ್ಬರ, ಬೀಜ ಕೇಳಿದ, ಫಸಲಿಗೆ ಸರಿಯಾದ ಬೆಲೆ ನೀಡಿ ಬದುಕು ಉಳಿಸಿರೆಂದು ಅಂಗಲಾಚಿ ದಾರಿ ಕಾಣದೇ ಬೀದಿಗಿಳಿದು ಆಗ್ರಹಿಸಿ ಪ್ರತಿಭಟಿಸಿದವರ ಮೇಲೆ ಪೋಲೀಸರು ಗೋಲೀಬಾರ್ ನಡೆಸಿ ರೈತರನ್ನು ಕೊಂದಿದ್ದು, ಲಾಠಿ, ಬೂಟಿನೇಟುಗಳಿಂದ ಹಣಿದು ಕೇಸ್‌ಗಳನ್ನು ಹಾಕಿ ಅಲೆಸಿದ ಈ ಸರಕಾರವೇ ಕೆಲವು ಮೊಕದ್ದಮೆಗಳನ್ನು ಹಿಂತೆಗೆದು ಮಹಾ ಔದಾರ್ಯವನ್ನೀಗ ಮೆರೆಸ ಬಯಸಿದೆ.

ಚರಮ ಗೀತೆಯೇ ?

ಸದಾ ಭಿನ್ನಮತ, ಅಧಿಕಾರ ದಾಹದ ಕಿತ್ತಾಟದಲ್ಲೇ ಕಾಲ ಕಳೆದ ಈ ಸರಕಾರ ತನ್ನ ಘನ ಪ್ರಗತಿ ದಾಖಲಿಸಲು ಪಟ್ಟ ಪಾಡು ಹಾಸ್ಯಾಸ್ಪದ! ಕಳೆದೆರಡು ದಿನ ಹುಬ್ಬಳ್ಳಿ, ಬೆಳಗಾವಿಗಳಲ್ಲಿ ಕಾಮಗಾರಿ ಇ ಪೂರ್ಣಗೊಳ್ಳದಿದ್ದರೂ ಮುಖ್ಯಮಂತ್ರಿ ಶೆಟ್ಟರ್‌ರವರು ಹಗಲಿರುಳು ತಿರು ತಿರುಗಿ ಉದ್ಘಾಟಿಸುತ್ತಾ ಸಮಯ ಸಾಲದೇ ಸುಸ್ತಾಗಿ ಹೋದುದು, ಬಿಜೆಪಿ ಸರಕಾರದ ಚರಮ ಗೀತೆಯೇ?

ಹೇಗಾದರೂ ಮತ್ತೇ ಅಧಿಕಾರಕ್ಕೇರಬೇಕೆಂಬ ಹಪಾ ಹಪಿ ಹಲವಾರು ಒಳ ರಾಜಕೀಯ ತಂತ್ರ ಕುತಂತ್ರಗಳನ್ನು ಹೆಣೆಯುವಂತೆ ಮಾಡಿದೆ. ಜನಾದೇಶ ಇವರ ವಿರುದ್ಧ ಬಂದರೂ ಹೇಗೂ ಅನೈತಿಕ ಮೈತ್ರಿಗಳಿಂದ ಪುನಃ ಅಧಿಕಾರಕ್ಕೆ ಬರಲು ಮಾತುಕತೆಗಳು ಹಲವರೊಂದಿಗೆ ನಡೆದಿರುವ ದಟ್ಟ ಸುದ್ದಿ ಇದೆ. ಮುಂದೆ ಸೆಕ್ಯುಲರಿಸಂ ಎಂದರೆ ಏನರ್ಥ ಹೇಳಿ ಎಂದು ಪುನಃ ಕೇಳುವ ಸಂದರ್ಭಗಳು ಇಲ್ಲದಿಲ್ಲ ಎನ್ನಲಾಗುತ್ತಿದೆ.

ಇಂತಹುವುಗಳನ್ನು ಜನ ಅರಿಯಲಾರರೆಂಬ ದಾಷ್ಟ್ರ್ಯವೇ, ದುಷ್ಟತನವೇ ಇವರಿಗೆ! ●

ಚಿರಾಯು ಚಾವೆಜ್!

ಪ್ರಕಾಶ್ ಕಾರಟ್

ವೆನೆಜುವೇಲಾದ ಅಧ್ಯಕ್ಷರಾಗಿ ನಾಲ್ಕನೇ ಬಾರಿ ಐತಿಹಾಸಿಕವಾಗಿ ಚುನಾಯಿತರಾದ ಆರು ತಿಂಗಳುಗಳೊಳಗೆ ಕ್ರಾಂತಿಕಾರಿ ನಾಯಕ ಹ್ಯುಗೋ ಚಾವೆಜ್ ನಿಧನರಾಗಿದ್ದಾರೆ. 2011ರ ಜೂನ್ ನಿಂದ ಅವರು ಕ್ಯಾನ್ಸರ್ ನಿಂದ ನರಳುತ್ತಿದ್ದರು. ಲ್ಯಾಟಿನ್ ಅಮೆರಿಕದಲ್ಲಿನ ಹೊಸ ಎಡ ಶಕ್ತಿಗಳ ಅಲೆಯ ಸಂಕೇತದಂತಿದ್ದ 58 ವರ್ಷದ ಅವರನ್ನು ಕೊನೆಗೂ ಕ್ಯಾನ್ಸರ್ ಸೆಳೆದುಕೊಂಡು ಹೋಗಿದೆ. ಅವರ ಈ ಸಾವು ವೆನೆಜುವೇಲ ಮತ್ತು ಲ್ಯಾಟಿನ್ ಅಮೆರಿಕವನ್ನು ದುಃಖದ ಮಡುವಿನಲ್ಲಿ ಮುಳುಗಿಸಿದೆ. ಜಗತ್ತಿನಾದ್ಯಂತ ಪ್ರಗತಿಪರ ಶಕ್ತಿಗಳು ಈ ನಷ್ಟದಿಂದ ಸಂತಾಪಗೊಂಡಿದ್ದಾರೆ.

ಚಾವೆಜ್, ಅವರ ಅವಶ್ಯಕತೆ ಈ ಜಗತ್ತಿಗೆ ಅತ್ಯಂತ ಹೆಚ್ಚಾಗಿ ಇರುವಾಗಲೇ ಅವರು ನಿಧನರಾಗಿದ್ದಾರೆ. 2012 ರ ಅಕ್ಟೋಬರ್‌ನಲ್ಲಿ ಶೇ 55 ರಷ್ಟು ಮತಗಳಿಂದ ಗೆದ್ದಿದ್ದ ಅವರು 2013-2019 ರ ಬಹು ಮುಖ್ಯ ಅವಧಿಗೆ ಸೇವೆ ಸಲ್ಲಿಸಬೇಕಾಗಿತ್ತು. ಅವರೇ ಪ್ರಾರಂಭಿಸಿದ ಲ್ಯಾಟಿನ್ ಅಮೆರಿಕವನ್ನು ಪ್ರಾದೇಶಿಕವಾಗಿ ಒಗ್ಗೂಡಿಸುವ ಕ್ರಾಂತಿಕಾರಿ ಪ್ರಕ್ರಿಯೆಯನ್ನು ಮುಂದುವರೆಸುವಲ್ಲಿ ಅವರ ಅವಶ್ಯಕತೆ ಅತ್ಯಂತ ಹೆಚ್ಚಾಗಿ ಇಂದು ಇತ್ತು. ಆದರೆ ಅದಕ್ಕೆ ಅವರು ಉಳಿಯಲಿಲ್ಲ.

ಅವರು ಅಧ್ಯಕ್ಷರಾಗಿ 14 ವರ್ಷಗಳಲ್ಲಿ ಮಾಡಿದ ಸಾಧನೆ ನಿಜಕ್ಕೂ ಅಸಾಮಾನ್ಯವಾದದ್ದು. ಈ ಸಾಧನೆಗೆ ಎರಡು ಆಯಾಮಗಳಿವೆ- ಒಂದು ಆಂತರಿಕವಾದದ್ದು ವೆನೆಜುವೇಲಕ್ಕೆ ಮತ್ತು ಬಾಹ್ಯವಾದದ್ದು ? ಲ್ಯಾಟಿನ್ ಅಮೆರಿಕ ಮತ್ತು ವಿದೇಶ ನೀತಿಗೆ ಸಂಬಂದಿಸಿದ್ದು.

ನವ ಉದಾರವಾದಕ್ಕೆ ಪರ್ಯಾಯ:

ವೆನೆಜುವೇಲದಲ್ಲಿ ನವ ಉದಾರವಾದಿ ಮಾದರಿಗೆ ಒಂದು ಪರ್ಯಾಯ ದಾರಿಯನ್ನು ಮಾಡಲು ಚಾವೆಜ್ ಶ್ರಮಿಸಿದರು. ಅವರು ಈ ಕಾರ್ಯದಲ್ಲಿ ಸಾಧಿಸಿದ ಯಶಸ್ಸು ಅವರನ್ನು ಲ್ಯಾಟಿನ್ ಅಮೆರಿಕದಲ್ಲಿ ಇಡೀ ಎಡ ಶಕ್ತಿಗಳ ಧ್ರುವವನ್ನಾಗಿಸಿತು. ಚಾವೆಜ್ 1999 ರಲ್ಲಿ ಮೊದಲ ಬಾರಿಗೆ ಅಧಿಕಾರ ಹಿಡಿದಾಗ ಅವರು ಹೊಸ ಸಂವಿಧಾನವನ್ನು ಜಾರಿಗೆ ತಂದರು. ಅದು ಜನರಿಗೆ ಅಧಿಕಾರ ಬರುವಂತೆ ಮಾಡಿತು. 2002 ರಲ್ಲಿ ಅವರ ವಿರುದ್ಧದ ದಂಗೆ ಜನ ಬೆಂಬಲದಿಂದಾಗಿ ಸೋತುಹೋದ ಮೇಲೆ ಅವರು ದೇಶದ ತೈಲ ಸಂಪತ್ತಿನ ಮೇಲೆ ಸಾರ್ವಭೌಮತ್ವವನ್ನು ಘೋಷಿಸುತ್ತಾ ಹೋದರು. ಜಗತ್ತಿನಲ್ಲೇ ವೆನೆಜುವೇಲ ಅತ್ಯಂತ ದೊಡ್ಡ ತೈಲ ಸಂಪತ್ತನ್ನು ಹೊಂದಿದೆ. ಚಾವೆಜ್ ದೈತ್ಯ ತೈಲ ಕಂಪನಿಯಾದ ಪಿಡಿವಿ ಎಸ್‌ಎ ಯನ್ನು ಸರ್ಕಾರಿ ಸ್ವಾಮ್ಯದಡಿ ತಂದರಲ್ಲದೆ ಪಾಶ್ಚಿಮಾತ್ಯ ತೈಲ ಕಂಪನಿಗಳು ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸುವಂತೆ ಮಾಡಿದರು. ಅವರು ಸಾಂಪ್ರದಾಯಿಕ ತೈಲ ರಫ್ತು ಕಂಪನಿಗಳು ತಮ್ಮ ಪೆಟ್ರೋ ಡಾಲರುಗಳನ್ನು ಅಮೆರಿಕದ ಅಥವಾ ಪಾಶ್ಚಿಮಾತ್ಯ ಬ್ಯಾಂಕುಗಳಲ್ಲಿ ಜಮಾ ಮಾಡಿಡುವ ಪದ್ಧತಿಯನ್ನು ಧಿಕ್ಕರಿಸಿದರು. ವಿದ್ಯುತ್ ಮತ್ತು ಟೆಲಿಕಾಂ ಉದ್ಯಮಗಳ ರಾಷ್ಟ್ರೀಕರಣ ಮಾಡಿದರು.

ಭೂ ಸುಧಾರಣೆಗಳನ್ನು ಜಾರಿಗೆ ತಂದು ಮೂರು ದಶಲಕ್ಷ ಹೆಕ್ಟೇರುಗಳಷ್ಟು ಭೂಮಿಯನ್ನು (ಸುಮಾರು. 75 ಲಕ್ಷ ಎಕರೆಯಷ್ಟು) ರೈತರಿಗೆ ಹಂಚಿದರು.

ತೈಲದಿಂದ ಬರುವ ಆದಾಯವನ್ನು ಜನಹಿತ ಕಾರ್ಯಕ್ರಮಗಳಿಗೆ ಚಾವೆಜ್ ಬಳಸತೊಡಗಿದರು. ಹಲವು ಸಾಮಾಜಿಕ ಮಿಷನ್‌ಗಳನ್ನು ಸ್ಥಾಪಿಸಲಾಯಿತು. ದಕ್ಷಿಣ ಅಮೆರಿಕದ ವಿಮೋಚನಕಾರರ ಹೆಸರುಗಳನ್ನು ಇವುಗಳಿಗೆ ಇಡಲಾಯಿತು. ರಾಬಿನ್ಸನ್, ಸುಕ್ರೆ ಇತ್ಯಾದಿ ಹೆಸರುಗಳು ಹಾಗೆ ಬಂದಂತಹವು. ಅನಕ್ಷರತೆ ತೊಲಗಿಸುವ, ಶಿಕ್ಷಣ ನೀಡುವ, ಆರೋಗ್ಯ, ಆಹಾರ, ಮನೆ ಸೌಲಭ್ಯ ಇತ್ಯಾದಿಗಳನ್ನು ಜನರಿಗೆ ನೀಡುವ ಘನೋದ್ದೇಶಗಳನ್ನು ಈ ಮಿಷನ್‌ಗಳು ಹೊಂದಿದ್ದವು. ಇಂತಹ ಜನಪರ ನೀತಿಗಳ ಪರಿಣಾಮಗಳು ಗಮನಾರ್ಹವಾದವು. ಈ ಬೊಲಿವಾರಿಯನ್ ಗಣರಾಜ್ಯ ಬಡತನ ವನ್ನು ಅರ್ಧದಷ್ಟಕ್ಕೆ ಇಳಿಸಿತು. ಬಡತನ 1999 ರಲ್ಲಿ ಶೇ 42.5ರಷ್ಟು ಇದ್ದದ್ದು 2011 ರಲ್ಲಿ ಶೇ 26.5 ಕ್ಕೆ ಇಳಿಯಿತು. ಅತಿ ಬಡತನ ಇದೆ ಅವಧಿಯಲ್ಲಿ ಶೇ 70 ರಷ್ಟು ಕಡಿಮೆಯಾಯಿತು. ಅದು ಶೇ 16.6 ರಿಂದ ಶೇ 7 ಕ್ಕೆ ಇಳಿಯಿತು. ಅನಕ್ಷರತೆಯನ್ನು ಪೂರ್ತಿಯಾಗಿ ತೊಡೆದು ಹಾಕಲಾಯಿತು. ಶಿಕ್ಷಕರ ಸಂಖ್ಯೆ 65,000 ದಿಂದ 3,50,000 ಕ್ಕೆ ಹೆಚ್ಚಿತು.

ಆರೋಗ್ಯ ಮಿಷನ್‌ನಡಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಜಾಲವನ್ನು ಬೆಳೆಸಲಾಯಿತು. ಈ ಕೇಂದ್ರಗಳಲ್ಲಿ ಪ್ರಾರಂಭಿಕವಾಗಿ 14,000 ಕ್ಯೂಬಾದ ಡಾಕ್ಟರುಗಳು ಕೆಲಸ ಮಾಡಿ ಉತ್ತಮ ದರ್ಜೆಯ ವೈದ್ಯಕೀಯ ಕಾಳಜಿ ನೀಡತೊಡಗಿದರು.

ವಿಶ್ವ ಸಂಸ್ಥೆಯ ಯುಎನ್‌ಡಿಪಿ ಯ ಪ್ರಕಾರ ತೊಂಬತ್ತರ ದಶಕದಲ್ಲಿ ಅತ್ಯಂತ ಹೆಚ್ಚಿನ ಅಸಮಾನತೆ ಹೊಂದಿದ್ದ ದೇಶ ವೆನೆಜುವೇಲವಾಗಿತ್ತು. ಅದು 2011 ರ ವೇಳೆಗೆ ಅತ್ಯಂತ ಕಡಿಮೆ ಅಸಮಾನತೆಯುಳ್ಳ



ಚಾವೆಜ್ ಜತೆ ಪ್ರಕಾಶ್ ಕಾರಟ್

ಲ್ಯಾಟಿನ್ ಅಮೆರಿಕದ ದೇಶವಾಯಿತು (ಗಿನಿ ಕೋಯಿಫಿಶೆಂಟ್-0.39 ರಷ್ಟು).

ಪ್ರಮುಖ ಸಾಮಾಜಿಕ ಬದಲಾವಣೆಯನ್ನು ಜನತೆಯ ಶಕ್ತಿಯನ್ನು ಬಳಸಿ ಸಾಧಿಸಲಾಯಿತು. ಈ ಬೊಲಿವಾರಿಯನ್ ಕ್ರಾಂತಿ ಪ್ರಕ್ರಿಯೆ 3,500 ಸಮುದಾಯ ಮಂಡಲಿಗಳ ಸ್ಥಾಪನೆಯನ್ನು ಕಂಡಿತು. ಅಲ್ಲದೆ ಬುಡ ಮಟ್ಟದಲ್ಲಿ ಸಮೂಹ ಸಂಘಟನೆಗಳ ಜಾಲವನ್ನು ಇದು ಹುಟ್ಟಿ ಹಾಕಿತು. ರಾಜಕೀಯ ಪಕ್ಷವೊಂದನ್ನು ಸಂಘಟಿಸುವ ಅವಶ್ಯಕತೆಯನ್ನು ಚಾವೆಜ್ ಅರಿತರು. ಐದನೇ ಗಣರಾಜ್ಯಕ್ಕಾಗಿನ ಚಳುವಳಿಯನ್ನು ಅವರು ಒಂದು ರಾಜಕೀಯ ಪಕ್ಷವನ್ನಾಗಿ ಪರಿವರ್ತನೆ ಮಾಡಿದರು- ಯುನೈಟೆಡ್ ಸೋಷಿಯಲಿಸ್ಟ್ ಪಾರ್ಟಿ-(ಪಿ ಎಸ್ ಯು ವಿ).

ಚಾವೆಜ್ ಮತ್ತು ಅವರ ಕ್ರಾಂತಿಕಾರಿ ಪ್ರಕ್ರಿಯೆ ಮಿತಜನತಂತ್ರ, ಶ್ರೀಮಂತ ಭೂ ಒಡೆಯರ ಮತ್ತು ಉನ್ನತ ಅಧಿಕಾರಶಾಹಿಗಳಿಂದ ಬಹಳ ವೈಷಮ್ಯತೆ ಮತ್ತು ನಿರಂತರ ದಾಳಿಯನ್ನು ಎದುರಿಸಬೇಕಾಯಿತು. ಇವರಿಗೆ ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ವಿದೇಶಿ ಬಂಡವಾಳದ ಬೆಂಬಲವಿತ್ತು. ಚಾವೆಜ್ ಸೈನ್ಯವನ್ನು ಜನಪರವಾಗಿ ರಾಷ್ಟ್ರೀಯ ಶಕ್ತಿಯಾಗಿ ರೂಪಿಸಿದ್ದಕ್ಕೆ ಅವರ ಮೇಲಿನ ದ್ವೇಷ ಇನ್ನೂ ಹೆಚ್ಚಿತು. ದುಡಿವ ಜನತೆ ಮತ್ತು ಸೈನ್ಯದ ನೆರವಿನಿಂದ ಚಾವೆಜ್ ಒಂದಾದ ಮೇಲೆ ಒಂದರಂತೆ ಕ್ರಾಂತಿಕಾರಿ ಪ್ರಕ್ರಿಯೆಯನ್ನು ಬುಡಮೇಲು ಮಾಡುವ ಪಿತೂರಿಗಳನ್ನು ವಿಫಲಗೊಳಿಸಿದರು.

ವಿದೇಶಾಂಗ ವಿಷಯದಲ್ಲಿ ಚಾವೆಜ್ ಕ್ಯೂಬಾದೊಡನೆ ಪ್ರಬಲ ಮೈತ್ರಿ ಬೆಳೆಸಿದರು. ಫಿಡೆಲ್ ಕ್ಯಾಸ್ಟ್ರೊ ಅವರ ಕ್ರಾಂತಿಕಾರಿ ಸಿದ್ಧಾಂತವನ್ನು ಅಪ್ಪಿಕೊಂಡು ಅವರು ಅದರ ಯಶಸ್ವಿ ಅನುಷ್ಠಾನಕಾರರಾದರು. ವೆನೆಜುವೇಲದಲ್ಲಿನ ಅವರ ನಾಯಕತ್ವ ಇಡೀ ಲ್ಯಾಟಿನ್ ಅಮೆರಿಕದಲ್ಲಿ ಎಡ ಸಿದ್ಧಾಂತ ಬೆಳೆಯಲು ನೆರವಾಯಿತು. ಅವರ 1998 ರ ಮೊದಲ ಗೆಲುವಿನ ನಂತರ ಬ್ರೆಜಿಲ್, ಬೊಲಿವಿಯ, ಇಕ್ವೆಡೋರ್, ಉರುಗ್ವೆ, ಎಲ್ ಸಾಲ್ವಡೋರ್, ಹೊಂಡುರಾಸ್, ನಿಕಾರಗುವ ಇತ್ಯಾದಿಗಳಲ್ಲಿ ಎಡ ಶಕ್ತಿಗಳಿಗೆ ಚುನಾವಣಾ ಗೆಲುವು ದೊರೆಯತೊಡಗಿತು.

ಲ್ಯಾಟಿನ್ ಅಮೆರಿಕದ ಒಗ್ಗೂಡಿಸುವಿಕೆ

ಲ್ಯಾಟಿನ್ ಅಮೆರಿಕದ ಒಗ್ಗೂಡುವಿಕೆಯ ಬಗೆಗಿನ ಸಾಮ್ರಾಜ್ಯಶಾಹಿ ಪ್ರಾಬಲ್ಯಮುಕ್ತ ಬೊಲಿವಾರಿಯನ್ ಚಿಂತನೆಯನ್ನು ಚಾವೆಜ್ ಪ್ರತಿಪಾದಿಸಿದರು. ಸೈಮನ್ ಬೊಲಿವಾರ್ ದಕ್ಷಿಣ ಅಮೆರಿಕವನ್ನು ಸ್ಪಾನಿಷ್ ಆಳ್ವಿಕೆಯಿಂದ ವಿಮೋಚನೆಗೊಳಿಸಿದ ವಿಮೋಚನಕಾರ. ಆತ ಆಲ್ಬದ ಸ್ಥಾಪನೆಯಲ್ಲಿ ಮುಖ್ಯ ಪಾತ್ರ ವಹಿಸಿದಾತ (ಆಲ್ಬ- ದಿ ಬೊಲಿವಾರಿಯನ್ ಅಲ್ಲಾಯನ್ಸ್ ಆಫ್ ದಿ ಪೀಪಲ್ಸ್ ಆಫ್ ಅಮೆರಿಕ). ಇದರಲ್ಲಿ ವೆನೆಜುವೇಲ, ಕ್ಯೂಬಾ ಬೊಲಿವಿಯ ಸೇರಿದಂತೆ ಎಂಟು ದೇಶಗಳಿವೆ. ಇದರ ನಂತರ ಯುಎನ್‌ಎಎಸ್‌ಯುಆರ್ ಸ್ಥಾಪನೆಯಾಯಿತು. ಅಂತಿಮವಾಗಿ ಅವರ ಕೊನೆಯ ಪ್ರಮುಖ ಹೆಜ್ಜೆಯೆಂದರೆ ಕಮ್ಯೂನಿಟಿ ಆಫ್ ಲ್ಯಾಟಿನ್ ಅಮೆರಿಕನ್ ಅಂಡ್ ಕ್ಯಾರಿಬ್ಬಿಯನ್ ಸ್ಟೇಟ್ಸ್ ನ ಸ್ಥಾಪನೆ ಕ್ಯಾರಕ್ಯಾಸ್ ನಲ್ಲಿ. ಈ ಎಲ್ಲ ಪ್ರಾದೇಶಿಕ ಸಂಸ್ಥೆಗಳು ಉತ್ತರ ಅಮೆರಿಕದ ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಕೆನಡಗಳನ್ನು ಹೊರಗೇ ಇಟ್ಟಿವೆ.

ದಕ್ಷಿಣದ ಬ್ಯಾಂಕಿನ ಸ್ಥಾಪನೆ, ತೆಲಸುರ್ ಎಂಬ ಟಿಲಿವಿಜನ್ ಕೇಂದ್ರದ ಸ್ಥಾಪನೆ ಮತ್ತು ಸುಕ್ರೆ ಎಂಬ ನಾಣ್ಯದ ಚಲಾವಣೆಗಳೆಲ್ಲ ಪ್ರಾದೇಶಿಕ ಸಹಕಾರದ ಸಾಧನಗಳು. ಚಾವೆಜ್ ಪೆಟ್ರೊ ಕರಿಬೆ ಯನ್ನು ಹುಟ್ಟು ಹಾಕಿದರು. ಇದು ಹೈಟಿಯಂತಹ ಬಡ ದೇಶಗಳಿಗೆ ತೈಲವನ್ನು ಸುಲಭ ಶರತ್ತುಗಳಲ್ಲಿ ಲಭ್ಯ ಗೊಳಿಸಿತು.

ಇವೆಲ್ಲದಕ್ಕೂ ಮಿಗಿಲಾಗಿ ಚಾವೆಜ್ ಸೋವಿಯತ್ ಯೂನಿಯನ್ ನ ಪತನದ ನಂತರ ಕ್ಯೂಬಾದ ಜೊತೆಗೆ ಮೈತ್ರಿ ಬೆಳೆಸಿ ಅದು

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಕುಂದಾಪುರ: ಪಡಿತರ ಚೀಟಿ ರದ್ದು ವಿರುದ್ಧ ಬೃಹತ್ ಪ್ರತಿಭಟನೆ

ಕರ್ನಾಟಕ ಸರಕಾರದ ಆಹಾರ, ನಾಗರಿಕ ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ರಾಜ್ಯಾದ್ಯಂತ ಎ.ಪಿ.ಎಲ್., ಬಿ.ಪಿ.ಎಲ್ ಹಾಗೂ ಅಂತ್ಯೋದಯ ಒಳಗೊಂಡಂತೆ ಒಟ್ಟು 47,71,476 ರೇಶನ್ ಕಾರ್ಡುಗಳನ್ನು ಏಕಾಏಕಿ ರದ್ದುಪಡಿಸಿದೆ. ಉಡುಪಿ ಜಿಲ್ಲೆಯೊಂದರಲ್ಲೇ ಸುಮಾರು 26,652 ಪಡಿತರ ಚೀಟಿಗಳನ್ನು ಸರಕಾರ ರದ್ದುಪಡಿಸಿದೆ. ಕುಂದಾಪುರ ತಾಲೂಕಿನಾದ್ಯಂತ ಸುಮಾರು 9,936 ಪಡಿತರ ಚೀಟಿ ರದ್ದುಪಡಿಸಿರುವುದನ್ನು



ವಿರೋಧಿಸಿ ಸಿಪಿಐ(ಎಂ) ಕುಂದಾಪುರ ತಾಲೂಕು ಸಮಿತಿ ನೇತೃತ್ವದಲ್ಲಿ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ, ಕುಂದಾಪುರ ತಾಲೂಕು ಸಮಿತಿಯ ಸಹಭಾಗಿತ್ವದಲ್ಲಿ ಪಡಿತರ ಚೀಟಿ ವಂಚಿತ ಕುಟುಂಬದ ಸದಸ್ಯರ ಕುಂದಾಪುರ ತಹಶೀಲ್ದಾರ್ ಕಚೇರಿ ಮುತ್ತಿಗೆ ಹೋರಾಟ ಯಶಸ್ವಿಯಾಗಿ ಜರುಗಿತು.

ಸರಕಾರವು ನಕಲಿ ಪಡಿತರ ಚೀಟಿ ರದ್ದುಪಡಿಸುವ ನೆಪದಲ್ಲಿ ಬಡವರ ರೇಶನ್ ಕಾರ್ಡನ್ನು ಏಕಾಏಕಿ ರದ್ದುಪಡಿಸಿರುವುದು ಖಂಡನಾರ್ಹವಾಗಿದೆ. ಮನೆ ತೆರಿಗೆ, ಕಟ್ಟಡ ನಂಬ್ರ, ಮನೆ ವಿದ್ಯುತ್ ಮೀಟರ್ ಬಿಲ್‌ನ ಆರ್.ಆರ್. ಸಂಖ್ಯೆ ದಾಖಲೆಗಳೊಂದಿಗೆ ಪಡಿತರ ಚೀಟಿಯ ಪ್ರತಿಯನ್ನು ಸ್ಥಳೀಯ ಪಂಚಾಯತ್‌ಗೆ ಹಾಜರುಪಡಿಸಲು ಸೂಚನೆ ನೀಡಲಾಗಿತ್ತು. ಅಂತೆಯೇ ಗ್ರಾಮಾಂತರ ಪ್ರದೇಶದ ಪಡಿತರ ಚೀಟಿ ಹೊಂದಿದವರೆಲ್ಲರೂ ಸಕಲ ದಾಖಲೆಗಳನ್ನು ಹಾಜರುಪಡಿಸಿದ್ದರೂ ಆಹಾರ, ನಾಗರಿಕ ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಏಕಪಕ್ಷೀಯವಾಗಿ ಸಹಸ್ರಾರು ಪಡಿತರ ಚೀಟಿಯನ್ನು ರದ್ದುಪಡಿಸಿ ಬಡವರ ತುತ್ತಿನ ಚೀಲಕ್ಕೆ ಆತಂಕ ಒಡ್ಡಿದೆ. ಸಮರ್ಪಕ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂಬ ನೆಪ ಹೇಳಿ ಪಡಿತರ ಚೀಟಿಗಳನ್ನು ರದ್ದುಪಡಿಸಿದ್ದಲ್ಲದೇ ಕಳೆದ ಫೆಬ್ರವರಿ ತಿಂಗಳಿಂದ ಪಡಿತರ ಆಹಾರ ಧಾನ್ಯ ನ್ಯಾಯಬೆಲೆ ಅಂಗಡಿ ಮೂಲಕ ವಿತರಣೆ ಮಾಡುವುದನ್ನು ತಡೆಹಿಡಿಯಲಾಗಿದೆ.

ಗ್ರಾಮಾಂತರ ಪ್ರದೇಶದಲ್ಲಿ ಒಂದೇ ಸೂರಿನಡಿ 2–3 ಕುಟುಂಬ ಅನಿವಾರ್ಯ ಪರಿಸ್ಥಿತಿಯಲ್ಲಿ ಬಡತನದಿಂದ ಜೀವನ ಸಾಗಿಸುತ್ತಿದ್ದು, ಒಂದೇ ಮನೆಯ ಕಟ್ಟಡ ನಂಬ್ರ ಹೊಂದಿಕೊಂಡು 2–3 ಕುಟುಂಬ ವಾಸವಾಗಿರುವುದರಿಂದ ಮನೆ ಕಟ್ಟಡ ತೆರಿಗೆ ವಿಂಗಡಿಸಿರದ ಕಾರಣ ಉಳಿದೆರಡು ಕುಟುಂಬದ ಪಡಿತರ ಚೀಟಿಯನ್ನು ರದ್ದುಪಡಿಸಲಾಗಿದೆ. ಒಂದೇ ಮನೆಯ ವಿದ್ಯುತ್ ಸಂಪರ್ಕದಲ್ಲಿ ಒಂದೇ ಸೂರಿನಡಿ 2–3 ಕುಟುಂಬ ವಾಸವಾಗಿರುವುದರಿಂದ ಪ್ರತೀ ಕುಟುಂಬದ ಪಡಿತರ ಚೀಟಿದಾರರಿಗೆ ವಿದ್ಯುತ್ ಬಿಲ್ ಪಾವತಿ ರಶೀದಿ, ಆರ್.ಆರ್. ನಂಬ್ರ ಪ್ರತ್ಯೇಕ ಪ್ರತ್ಯೇಕ ಹಾಜರುಪಡಿಸಲು ಸಾಧ್ಯವಾಗುತ್ತಿಲ್ಲ. ಈ ನೆಪದಲ್ಲಿ ಸಹಸ್ರಾರು ಪಡಿತರ ಚೀಟಿ ರದ್ದು ಮಾಡಿರುವುದು ಸರಿಯಲ್ಲ. ಸಕಲ ದಾಖಲಾತಿಗಳನ್ನು ಪಡಿತರ ಚೀಟಿಯೊಂದಿಗೆ ಗ್ರಾಮ ಪಂಚಾಯತ್ ಕಚೇರಿಗೆ ಕೊಟ್ಟಿದ್ದರೂ ಬಹುತೇಕ ಪಡಿತರ ಚೀಟಿಗಳನ್ನು ಅಕ್ರಮವಾಗಿ ರದ್ದುಪಡಿಸಲಾಗಿದೆ.

ರದ್ದುಪಡಿಸಿದ ಪಡಿತರ ಚೀಟಿಗಳನ್ನು ಈ ಕೂಡಲೇ ಹಿಂದಕ್ಕೆ ಕೊಡಬೇಕು, ನಿಲುಗಡೆಯಾದ ಫೆಬ್ರವರಿ ತಿಂಗಳ ಪಡಿತರ ಆಹಾರ ಧಾನ್ಯ ನ್ಯಾಯಬೆಲೆ ಅಂಗಡಿಗಳ ಮೂಲಕ ವಿತರಣೆ ಮಾಡಲು ಕೂಡಲೇ ಕ್ರಮಕೈಗೊಳ್ಳಬೇಕು. ಪಡಿತರ ಚೀಟಿಯೊಂದಿಗೆ ಮನೆ ತೆರಿಗೆ ಪಾವತಿ ರಶೀದಿ, ವಿದ್ಯುತ್ ಮೀಟರ್ ಬಿಲ್‌ನ ಆರ್. ಆರ್. ನಂಬ್ರ ಇತ್ಯಾದಿ ದಾಖಲೆಗಳನ್ನು ಹಾಜರುಪಡಿಸುವುದಕ್ಕೆ ಕಾಲಾವಕಾಶ ವಿಸ್ತರಣೆ ಮಾಡಬೇಕು. ಎ.ಪಿ.ಎಲ್., ಬಿ.ಪಿ.ಎಲ್., ಎಂಬ ತಾರತಮ್ಯ ಮಾಡದೇ ಪ್ರತೀ ಕುಟುಂಬಕ್ಕೆ ಮಾಸಿಕ ಕೆ.ಜಿ. ಗೆ ರೂ. 2.00 ದರದಲ್ಲಿ 35 ಕೆ.ಜಿ. ಆಹಾರ ಧಾನ್ಯ ವಿತರಣೆ ಮಾಡಬೇಕು ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ಪಡಿತರ ಚೀಟಿ ರದ್ದಾದ ಕುಟುಂಬದ ಸದಸ್ಯರೆಲ್ಲರೂ ಕುಂದಾಪುರ ತಹಶೀಲ್ದಾರ್ ಕಚೇರಿ ಎದುರು ಘೋಷಣೆಗಳನ್ನು ಕೂಗುತ್ತಾ ಆಳುವ ಸರಕಾರದ ವಿರುದ್ಧ ಆಕ್ರೋಶಭರಿತ ಧ್ವನಿ ಎತ್ತಿದರು.



ಬೆಳಿಗ್ಗೆಯಿಂದ ಮಧ್ಯಾಹ್ನದ ತನಕ ನೂರಾರು ಪೋಲೀಸರ ಬಿಗಿ ಬಂದೋಬಸ್ತ್‌ನಲ್ಲಿ ತಹಶೀಲ್ದಾರ್ ಕಚೇರಿ ಮುತ್ತಿಗೆ ಹಾಕಿ, ಉಗ್ರ ಹೋರಾಟ ನಡೆಸಿದ ಪರಿಣಾಮ– ಇಲಾಖಾಧಿಕಾರಿಗಳು ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿ, ಮುಖಂಡರೊಡನೆ ಮಾತುಕತೆ ನಡೆಸಿ ಮುಂದಿನ 15 ದಿನಗಳೊಳಗೆ ರದ್ದುಪಡಿಸಿದ ಪಡಿತರ ಚೀಟಿಗಳನ್ನು ಹಿಂದಕ್ಕೆ ಕೊಡಲು ಕ್ರಮಕೈಗೊಳ್ಳುವುದಾಗಿ ಭರವಸೆ ನೀಡಿದರು.

ಇಲಾಖಾಧಿಕಾರಿಗಳು ನೀಡಿದ ಭರವಸೆಗೆ ತಪ್ಪಿ ನಡೆದಲ್ಲಿ ನಮ್ಮ ತೀವ್ರ ರೀತಿಯ ಹೋರಾಟ ಜಿಲ್ಲಾ ಕೇಂದ್ರದಲ್ಲಿ ನಡೆಯಲಿದೆ ಎಂಬ ಎಚ್ಚರಿಕೆಯೊಂದಿಗೆ ಪ್ರತಿಭಟನೆಯನ್ನು ಹಿಂತೆಗೆದುಕೊಳ್ಳಲಾಯಿತು.

ಚಳುವಳಿಯಲ್ಲಿ ಸಿಪಿಐ(ಎಂ) ಪಕ್ಷದ ತಾಲೂಕು ಕಾರ್ಯದರ್ಶಿ ಮಹಾಬಲ ವಡೇರಹೋಬಳಿ, ಎಚ್. ನರಸಿಂಹ, ನರಸಿಂಹ, ಸುರೇಶ್ ಕಲ್ಲಾಗರ, ಸುಬ್ರಹ್ಮಣ್ಯ ಆಚಾರ್, ಪುರಸಭೆಯಲ್ಲಿ ಸಿಪಿಐ(ಎಂ) ಸದಸ್ಯರಾದ ಗುಣರತ್ನ ಮತ್ತು ಕಲಾವತಿ, ತಾಲೂಕು ಪಂಚಾಯತ್ ಸದಸ್ಯೆ ಶಶಿಕಲಾ ಪೂಜಾರಿ, ಕೃಷಿಕೂಲಿಕಾರರ ಸಂಘದ ಮುಖಂಡರಾದ ರಾಜೀವ ಪಡುಕೋಣೆ, ಕರಿಯ ದೇವಾಡಿಗ, ನಾಗರತ್ನ, ವೆಂಕಟೇಶ ಕೋಣಿ ಹೋರಾಟಕ್ಕೆ ನೇತೃತ್ವ ನೀಡಿದರು.

ವರದಿ: ವೆಂಕಟೇಶ ಕೋಣಿ

ಕೃಷಿ ಬಜೆಟ್ ನಂತರ ಆಹಾರ ಉತ್ಪಾದನೆ ಇಳಿಕೆ!

ಕೃಷಿ ಬೆಳವಣಿಗೆಗಾಗಿ ಪ್ರತ್ಯೇಕ ಕೃಷಿ ಬಜೆಟ್‌ಗಳನ್ನೇ ಬಿಜೆಪಿ ಸರ್ಕಾರ ಮಂಡಿಸಿದರೂ ಅದರಿಂದ ಯಾವುದೇ ಪ್ರಯೋಜನವಾಗಿಲ್ಲ

ಆಹಾರ ಉತ್ಪಾದನೆ ಗುರಿ ಮತ್ತು ಸಾಧನೆ

ವರ್ಷ	ಗುರಿ	ಸಾಧನ(ಲಕ್ಷ ಟನ್)
2007–08	119.70	120.49
2008–09	125.24	111.34
2009–10	118.35	108.04
2010–11	123.70	139.86
2011–12	130.00	120.22
2012–13	136.55	125.00


ಬಾಗೇಪಲ್ಲಿ ಪುರಸಭೆ ವಿಜೇತ ಸಿಪಿಐ(ಎಂ) ಅಭ್ಯರ್ಥಿಗಳು




ವಿ.ವನಜ,
ವಾರ್ಡ್ ನಂ. 13



ಬಿ.ಬಿ.ಜ್ಯೋತಿ
ವಾರ್ಡ್ ನಂ. 17




ಬಿ.ಹೆಚ್. ಆರೀಫ್
ವಾರ್ಡ್ ನಂ. 15



ಪಿ.ಓಬಳರಾಜು
ವಾರ್ಡ್ ನಂ. 8



ಮಹಮ್ಮದ್ ಅಕ್ರಂ
ವಾರ್ಡ್ ನಂ. 9



ಸಿ.ಜುಬೇದುಲ್ಲಾ
ವಾರ್ಡ್ ನಂ. 9

ಜನಶಕ್ತಿ
ಕನ್ನಡ ವಾರಪತ್ರಿಕೆ

ಒಂದು ಉತ್ತಮ ಭಾರತಕ್ಕಾಗಿ ಇನ್ನಷ್ಟು ತೀವ್ರ ಹೋರಾಟಗಳು

ಸೀತಾರಾಂ ಯೆಚೂರಿ

> **ಈಗ ದೇಶಕ್ಕೆ ಬೇಕಾಗಿರುವುದು ಒಂದು ಸರಕಾರ ರಚಿಸಲಿಕ್ಕಾಗಿ ಇರುವ ಕಾಂಗ್ರೆಸ್–ವಿರೋಧಿ, ಬಿಜೆಪಿ–ವಿರೋಧಿ ರಾಜಕೀಯ ಪಕ್ಷಗಳ ಒಂದು ಪರ್ಯಾಯ ಗುಂಪಷ್ಟೇ ಅಲ್ಲ. ದೇಶಕ್ಕೆ ಮತ್ತು ಜನತೆಗೆ ಬೇಕಾಗಿರುವುದು ಒಂದು ಪರ್ಯಾಯ ಧೋರಣೆ–ಯ ದಿಕ್ಕು. ನಮ್ಮ ಧೋರಣೆ–ಯ ದಿಕ್ಕಿನಲ್ಲಿ ಇಂತಹ ಒಂದು ಪಲ್ಲಟವನ್ನು ತರಬಲ್ಲ ರಾಜಕೀಯ ಪರ್ಯಾಯ ಜನತೆಯ ಹೆಚ್ಚುತ್ತಿರುವ ಹೋರಾಟಗಳ ಬಲದ ಮೇಲಷ್ಟೇ ಬರಲು ಸಾಧ್ಯ. ಇಂತಹ ಜನತಾ ಹೋರಾಟಗಳನ್ನು ಮೇಲ್ಮಟ್ಟಗಳಿಗೆ ಮುಂದೊಯ್ಯಲು ಸಿಪಿಐ(ಎಂ)ನ ಮಾರ್ಚ್ 19ರ ರ್‍ಯಾಲಿ ಮೇ 15ರಿಂದ 31ರ ನಡುವೆ ದೇಶಾದ್ಯಂತ ಬ್ಲಾಕ್, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಎಲ್ಲ ಸರಕಾರೀ ಕಚೇರಿಗಳ ಪಿಕೆಟಿಂಗ್ ನಡೆಸಲು ಕರೆ ನೀಡಿದೆ.**

ಸಿಪಿಐ(ಎಂ)ನ ನಾಲ್ಕು 'ಸಂಘರ್ಷ ಸಂದೇಶ ಜಾಥಾ'ಗಳು ಮಾರ್ಚ್ 19ರಂದು ದಿಲ್ಲಿಯ ರಾಮಲೀಲಾ ಮೈದಾನದಲ್ಲಿ ಒಂದು ಚಾರಿತ್ರಿಕ ರ್‍ಯಾಲಿಯೊಂದಿಗೆ ಸಂಪನ್ನಗೊಂಡಿವೆ. ಇದು ಸಿಪಿಐ(ಎಂ) ಕರೆಯ ಮೇರೆಗೆ ನಡೆದ ಅತಿ ದೊಡ್ಡ ಸಭೆಗಳಲ್ಲಿ ಒಂದು. ದೇಶದಲ್ಲಿ ಭ್ರಷ್ಟಾಚಾರ ಮತ್ತು ಜನ–ವಿರೋಧಿ ಧೋರಣೆಗಳೆಂಬ ಅವಳಿ ರಕ್ಕಸರ ವಿರುದ್ಧ ಹೊಸದೊಂದು ರಾಜಕೀಯ 'ರಾಮಲೀಲಾ' ಆರಂಭವಾಗಿದೆ ಎಂಬ ಸಮರಘೋಷ ಅಲ್ಲಿ ಮೊಳಗಿದೆ.

ಒಂದು ಉತ್ತಮ ಭಾರತವನ್ನು ನಿರ್ಮಿಸಲು ಸಾಧ್ಯ, ಇಲ್ಲಿರುವ ಎಲ್ಲ ಜನಗಳಿಗೆ ಒಂದು ...ಭ್ಯ ಬದುಕಿನ ಮೂಲಭೂತ ಹಕ್ಕುಗಳನ್ನು ನೀಡಲು ಸಾಧ್ಯ, ಅದಕ್ಕೆ ಬೇಕಾದಷ್ಟು ಸಂಪನ್ಮೂಲಗಳು ದೇಶದಲ್ಲಿವೆ ಎಂಬುದು ಈ ರ್‍ಯಾಲಿಯ ಕೇಂದ್ರ ವಿಷಯ. ಈ ಸಂಪನ್ಮೂಲಗಳನ್ನು ಸದ್ಯಕ್ಕೆ, ಒಂದೋ ಮಹಾ ಭ್ರಷ್ಟಾಚಾರದ ಹಗರಣಗಳ ಮೂಲಕ ಲೂಟಿ ಹೊಡೆಯಲಾಗುತ್ತಿದೆ, ಇಲ್ಲವೇ ದೇಶದ ಬೆರಳೆಣಿಕೆಯಷ್ಟು ಮಂದಿಗೆ ಸೂಪರ್ ಲಾಭಗಳನ್ನು ಮತ್ತು ಭೋಗವಸ್ತುಗಳನ್ನು ಒದಗಿಸಲು ಬಳಸಲಾಗುತ್ತಿದೆ. ಅದೇ ವೇಳೆಗೆ, ನಮ್ಮ ಬಹುಪಾಲು ಜನತೆಯ ಮೇಲಿನ ಆರ್ಥಿಕ ಹೊರೆಗಳನ್ನು ಹೆಚ್ಚಿಸಿ, ಒಂದು ಗೌರವಯುತ ಬದುಕಿನ ಮೂಲಭೂತ ಹಕ್ಕುಗಳನ್ನು ವಂಚಿಸಿ ಸಂಕಟಗಳ ಕೂಪದೊಳಕ್ಕೆ ಇನ್ನಷ್ಟು ತಳ್ಳಲಾಗುತ್ತಿದೆ. ಈ ಧೋರಣೆಗಳನ್ನು ಬದಲಿಸಿದರೆ ಮಾತ್ರವೇ ನಮ್ಮೆಲ್ಲ ಜನಗಳಿಗೆ ಒಂದು ಉತ್ತಮ ಭಾರತವನ್ನು ನಿರ್ಮಿಸಲು ಸಾಧ್ಯ. ಎರಡು ...ರತಗಳ ನಡುವಿನ ಕಂದರವನ್ನು ಇನ್ನಷ್ಟು ಅಗಲಗೊಳಿಸುವ ದಿಕ್ಕನ್ನು ಒಪ್ಪಲು ಸಾಧ್ಯವಿಲ್ಲ.

ಧೋರಣೆಗಳು ಬದಲಾಗಬೇಕು

ಒಂದು ಉತ್ತಮ ಭಾರತವನ್ನು ನಿರ್ಮಿಸಲು, ಜನಗಳಿಗೆ ಈ ಕೆಳಗಿನ ಮೂಲಭೂತ ಹಕ್ಕುಗಳು ಲಭ್ಯವಾಗಲೇ ಬೇಕು. ಇದ–ಕ್ಕೆ ನಮ್ಮ ದೇಶದ ಧೋರಣೆಗಳ ದಿಕ್ಕು ಬದಲಾಗಬೇಕು.

1. ಭೂಮಿ ಮತ್ತು ಮನೆ ನಿವೇಶನದ ಹಕ್ಕು: ಭೂಹೀನರಿಗೆ ಮಿಗುತೆ ಭೂಮಿಯನ್ನು ಹಂಚಿ ಭೂಸುಧಾರಣೆ ಧೋರಣೆಗಳನ್ನು ಜಾರಿಗೊಳಿಸಬೇಕು. ಪ್ರತಿಯೊಂದು ಭೂಹೀನ ಕುಟುಂಬಕ್ಕೆ ಮನೆ–ನಿವೇಶನಗಳ ಖಾತ್ರಿ

2. ಬೆಲೆಯೇರಿಕೆಗೆ ಕಡಿವಾಣ ಮತ್ತು ಆಹಾರದ ಹಕ್ಕು: ಹೆಚ್ಚೆಂದರೆ ಕೆ.ಜಿ.ಗೆ 2ರೂ. ದರದಲ್ಲಿ 35 ಕೆ.ಜಿ. ಆಹಾರಧಾನ್ಯಗಳ ...ರ್ವತ್ರಿಕ ಹಕ್ಕು. ಎಪಿಎಲ್/ಬಿಪಿಎಲ್ ಆದ–...ರಿತ ಬಡತನದ ಮೋಸದ ಲೆಕ್ಕಾಚಾರಗಳು

ಆವಶ್ಯಕ ಸಾಮಗ್ರಿಗಳಲ್ಲಿ ವಾಯಿದಾ ವ್ಯಾಪಾರ(ಫಾರ್ವರ್ಡ್ ಟ್ರೇಡಿಂಗ್) ನಿಲ್ಲಬೇಕು.

3. ಶಿಕ್ಷಣ ಮತ್ತು ಆರೋಗ್ಯದ ಹಕ್ಕು: ಶಿಕ್ಷಣ ಮತ್ತು ಆರೋಗ್ಯ ಸೇವೆಗಳ ಖಾಸಗೀಕರಣ ನಿಲ್ಲಬೇಕು. ಶಿಕ್ಷಣ ಮತ್ತು ಆರೋಗ್ಯಕ್ಕೆ ಹೆಚ್ಚಿನ ಹಣ ಒದಗಿಸಬೇಕು. ಶಿಕ್ಷಣದ ಹಕ್ಕಿನ ಕಾನೂನಿನ ಜಾರಿಯ ಭರವಸೆ ನೀಡಬೇಕು. ಆರೋಗ್ಯದಲ್ಲಿ ಸಾರ್ವಜನಿಕ ಸೇವೆಗಳನ್ನು ಬಲಪಡಿಸಬೇಕು, ಖಾಸಗಿ ವಲಯದ ಕಟ್ಟುನಿಟ್ಟಿನ ನಿಯಂತ್ರಣ ಇರುವಂತೆ ಮಾಡಬೇಕು.

4. ಉದ್ಯೋಗದ ಹಕ್ಕು: ಉದ್ಯೋಗ ನಿರ್ಮಾಣಕ್ಕೆ ಸಾರ್ವಜನಿಕ ಹೂಡಿಕೆಗಳನ್ನು ಹೆಚ್ಚಿಸಬೇಕು; ನೇಮಕಾತಿಯ ಮೇಲಿನ ನಿಷೇಧ ರದ್ದಾಗಬೇಕು ಮತ್ತು ಎಲ್ಲ ಖಾಲಿ ಹುದ್ದೆಗಳಿಗೆ, ನಿರ್ದಿಷ್ಟವಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಬುಡಕಟ್ಟುಗಳು/ ಒಬಿಸಿ ಬಾಕಿ ಹುದ್ದೆಗಳಿಗೆ ಸಮಯ–ಬದ್ಧ ನೇಮಕಾತಿ ನಡೆಯಬೇಕು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕೆಲಸದ ದಿನಗಳನ್ನು ಹೆಚ್ಚಿಸಬೇಕು, ಕನಿಷ್ಟ ಕೂಲಿಯನ್ನು ಬೆಲೆ ಸೂಚ್ಯಂಕದೊಂದಿಗೆ ತಳುಕು ಹಾಕಬೇಕು ಮತ್ತು ಅದನ್ನು ವಿಸ್ತರಿಸಿ ನಗರ ಪ್ರದೇಶಗಳಲ್ಲಿ ಕೆಲಸದ ದಿನಗಳ ಖಾತ್ರಿ



ಒದಗಿಸಬೇಕು.

5. ಸಾಮಾಜಿಕ ನ್ಯಾಯ ಮತ್ತು ಮಹಿಳೆಯರ ಹಕ್ಕುಗಳು: ಮಹಿಳೆಯರ ವಿರುದ್ಧ ಹಿಂಸಾಚಾರವನ್ನು ದಮನಗೊಳಿಸಬೇಕು ಮತ್ತು ಮಹಿಳೆಯರಿಗೆ ಶಾಸನಸಭೆಗಳು ಹಾಗೂ ಸಂಸತ್ತಿನಲ್ಲಿ ಮೂರನೇ ಒಂದು ಮೀಸಲಾತಿ ಒದಗಿಸಬೇಕು; ಅಸ್ಪೃಶ್ಯತೆ ಮತ್ತು ದಲಿತರ ವಿರುದ್ಧ ಪಕ್ಷಪಾತದ ಸಾಮಾಜಿಕ ಆಚರಣೆಗಳನ್ನು ಕೊನೆಗೊಳಿಸಬೇಕು; ಆದಿವಾಸಿಗಳ ಭೂಮಿ ಮತ್ತು ಅರಣ್ಯ ಹಕ್ಕುಗಳನ್ನು ರಕ್ಷಿಸಬೇಕು; ಮುಸ್ಲಿಂ ಸಮುದಾಯಕ್ಕೆ ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಸಮಾನ ಅವಕಾಶಗಳನ್ನು ಒದಗಿಸಬೇಕು.



6. ಭ್ರಷ್ಟಾಚಾರಕ್ಕೆ ಕೊನೆ: ಸ್ವತಂತ್ರ ತನಿಖಾ ಅಧಿಕಾರಗಳಿರುವ ಲೋಕಪಾಲ ಶಾಸನ ತರಬೇಕು; ವಿದೇಶಿ ಬ್ಯಾಂಕುಗಳಲ್ಲಿ ಪೇರಿಸಿಟ್ಟ ಕಪ್ಪು ಹಣವನ್ನು ವಾಪಾಸು ತರಬೇಕು; ನಷ್ಟಗಳಿಗೆ ಜವಾಬ್ದಾರರಾದ ಕಾರ್ಪೊರೇಟ್‌ಗಳಿಂದ ನಷ್ಟಗಳ ವಸೂಲಿ ನಡೆಸಬೇಕು; ಭ್ರಷ್ಟರನ್ನು ಜೈಲಿಗೆ ಕಳಿಸಬೇಕು.

ಹೊರೆ ಹೇರುವ ಆಳುವವರ ತರ್ಕ

ನಮ್ಮ ಪ್ರಧಾನ ಮಂತ್ರಿಗಳು ಇತ್ತೀಚೆಗೆ ಹೇಳಿರುವಂತೆ "ಹಣ ಮರಗಳಲ್ಲಿ ಬೆಳೆಯುವುದಿಲ್ಲ" ಎಂದು ಆಳುವ ವರ್ಗಗಳು ತರ್ಕ ಹೂಡುತ್ತವೆ. ಇದೇ ತರ್ಕವನ್ನು ಬಳಸಿ ಆವಶ್ಯಕ ಸರಕುಗಳ ಬೆಲೆಗಳನ್ನು ಹೆಚ್ಚಿಸಿ, ಬಡವರಿಗೆಂದಿರುವ ಸಬ್ಸಿಡಿಗಳನ್ನು ಕಡಿತ ಮಾಡಿ ಜನಗಳ ಮೇಲೆ ಹೆಚ್ಚೆಚ್ಚು ಹೊರೆಗಳನ್ನು ಹೇರಲಾಗುತ್ತಿದೆ. ಇತ್ತೀಚೆಗೆ ಸಂಸತ್ತಿನಲ್ಲಿ ಮಂಡಿಸಿದ 2013–14ರ ಬಜೆಟ್ ಸುಮಾರು 5.21ಲಕ್ಷ ಕೋಟಿ ರೂ.ಗಳ ಹಣಕಾಸು ಕೊರತೆಯನ್ನು ತೋರಿಸಿದೆ. ಅದೇ ವರ್ಷ ಸರಕಾರ–ಕ್ಕೆ ನ್ಯಾಯವಾಗಿ ಬರಬೇಕಾಗಿದ್ದ 5/73 ಲಕ್ಷ ಕೋಟಿ ರೂ.ಗಳಿಗಿಂತಲೂ ಹೆಚ್ಚು ತೆರಿಗೆಗಳನ್ನು ಸರಕಾರ ಬಿಟ್ಟು ಕೊಟ್ಟಿದೆ. ಅಂ–ದರೆ ಹಣಕಾಸು ಕೊರತೆಗಿಂತಲೂ 52,000 ಕೋಟಿ ರೂ. ಹೆಚ್ಚು. ಈ ತೆರಿಗೆಗಳನ್ನು ವಸೂಲಿ ಮಾಡಿದ್ದರೆ ಹಣಕಾಸು ಕೊರತೆ–ಯೇ ಇರುತ್ತಿರಲಿಲ್ಲ. ಆದರೆ ಈ ಹಣಕಾಸು ಕೊರತೆಯನ್ನು ಇಳಿಸುವ ಹೆಸರಿನಲ್ಲೇ ನಮ್ಮ ಬಹುಪಾಲು ಜನತೆಯ ಮೇಲೆ ಹೆಚ್ಚಿನ ಹೊರೆಗಳನ್ನು ಹಾಕಲಾಗುತ್ತಿದೆ, ಕೋಟ್ಯಂತರ ಜನಗಳನ್ನು ಬಡತನಕ್ಕೆ ತಳ್ಳಲಾಗುತ್ತಿದೆ. ಇಂತಹ ಅನ್ಯಾಯವನ್ನು ಖಂಡಿತ ಒಪ್ಪಲು ಸಾಧ್ಯವಿಲ್ಲ.

ಇದಲ್ಲದೆ, ಈ ತೆರಿಗೆಗಳನ್ನು ವಸೂಲಿ ಮಾಡಿ ನಮ್ಮ ಬಹು ಅಗತ್ಯವಾದ ಮೂಲರಚನೆಗಳನ್ನು ಕಟ್ಟಲು, ನಿರ್ದಿಷ್ಟವಾಗಿ ನೀರಾವರಿ ಸೌಲಭ್ಯಗಳಿಗೆ ಸಾರ್ವಜನಿಕ ಹೂಡಿಕೆಗಳಾಗಿ ಬಳಸಿದ್ದರೆ, ನಮ್ಮ ಕೃಷಿ ವಲಯ ಉತ್ತಮಗೊಳ್ಳುತ್ತಿತ್ತು, ನಮ್ಮ ರೈತರು ಹತಾಶೆಯಿಂದ ಆತ್ಮಹತ್ಯೆಗಿಳಿಯುವುದು ತಪ್ಪುತ್ತಿತ್ತು, ಜತೆಗೆ ಲಕ್ಷಾಂತರ ಹೊಸ ಉದ್ಯೋಗಾವಕಾಶಗಳು ನಿರ್ಮಾಣವಾಗುತ್ತಿದ್ದವು. ಇದು ಆಂತರಿಕ ಬೇಡಿಕೆ–ಯ ಮಟ್ಟದಲ್ಲೂ ಗಮನಾರ್ಹ ಹೆಚ್ಚಳ ತಂದು ಸರಕು ತಯಾರಿಕೆ ಮತ್ತು ಕೈಗಾರಿಕಾ ಬೆಳವಣಿಗೆಗೆ ಉತ್ತೇಜನೆ ನೀಡಿ, ಆಮೂಲಕ ನಮ್ಮ ಆರ್ಥಿಕದ ಒಟ್ಟಾರೆ ಬೆಳವಣಿಗೆಯಾಗುತ್ತಿತ್ತು. ಇಂತಹ ಒಂದು ಪರ್ಯಾಯ ಧೋರಣೆಯ ದಿಕ್ಕಿಗೆ ತಿರುಗುವಂತೆ ಹೆಚ್ಚೆಚ್ಚು ಜನತಾ ಹೋರಾಟಗಳ

ಪುಟ 15 ಕ್ಕೆ

ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ – 2013

ಸಿಪಿಐ(ಎಂ) ಪಕ್ಷದ ಸಾಧನೆ

ನಿತ್ಯಾನಂದ ಸ್ವಾಮಿ

ಚಿಕ್ಕಬಳ್ಳಾಪುರ ಜಿಲ್ಲೆ – ಬಾಗೇಪಲ್ಲಿ ಪುರಸಭೆ :

ಎಲ್ಲ 23 ವಾರ್ಡ್‌ಗಳಿಂದಲೂ ಸಿಪಿಐ(ಎಂ) ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಾಗಿತ್ತು. ಅವರ ಪೈಕಿ 6 ಮಂದಿ ಜಯಗಳಿಸಿದ್ದಾರೆ.

8 ನೇ ವಾರ್ಡ್‌ನಿಂದ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಪಿ. ಒಬಳರಾಜು 244 ಮತಗಳನ್ನು ಪಡೆದು ವಿಜೇತರಾಗಿದ್ದಾರೆ. ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸಿನ ಅಭ್ಯರ್ಥಿಯನ್ನು 69 ಮತಗಳ ಅಂತರದಿಂದ ಸೋಲಿಸಿದ್ದಾರೆ.

9 ನೇ ವಾರ್ಡ್‌ನಿಂದ ಸ್ಪರ್ಧಿಸಿದ್ದ ಪಕ್ಷದ ಅಭ್ಯರ್ಥಿ ಮಹಮ್ಮದ್ ಅಕ್ರಂ 175 ಮತಗಳನ್ನು ಪಡೆದು ಜಯಗಳಿಸಿದ್ದಾರೆ. ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಪಕ್ಷೇತರ ಅಭ್ಯರ್ಥಿಯನ್ನು 7 ಮತಗಳ ಅಂತರದಿಂದ ಪರಾಭವಗೊಳಿಸಿದ್ದಾರೆ.

10 ನೇ ವಾರ್ಡ್‌ನಿಂದ ಸ್ಪರ್ಧಿಸಿದ್ದ ಪಕ್ಷದ ಅಭ್ಯರ್ಥಿ ಸಿ. ಜಬೀವುಲ್ಲಾ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಕೆಜೆಪಿಯ ಅಭ್ಯರ್ಥಿಯನ್ನು 9 ಮತಗಳ ಅಂತರದಿಂದ ಸೋಲಿಸಿ ವಿಜೇತರಾಗಿದ್ದಾರೆ.

13 ನೇ ವಾರ್ಡ್‌ನಿಂದ ಸ್ಪರ್ಧಿಸಿದ್ದ ಪಕ್ಷದ ಅಭ್ಯರ್ಥಿ ವಿ. ವನಜಾ 204 ಮತಗಳನ್ನು ಪಡೆದು ವಿಜೇತರಾಗಿದ್ದಾರೆ. ಅವರ ಸಮೀಪದ ಪ್ರತಿಸ್ಪರ್ಧಿ ಪಕ್ಷೇತರ ಅಭ್ಯರ್ಥಿ 201 ಮತಗಳನ್ನು ಪಡೆದು ಸೋತಿದ್ದಾರೆ.


ಗಾಂಧಿನಗರ ನಾರಾಯಣ ಸ್ವಾಮಿ


ಜಯದೇವಿ ಟಿ.ಎಸ್. ಮಣಿ

15 ನೇ ವಾರ್ಡ್‌ನಿಂದ ಸ್ಪರ್ಧಿಸಿದ್ದ ಪಕ್ಷದ ಅಭ್ಯರ್ಥಿ ಬಿ. ಹೆಚ್. ಆರೀಫ್ 329 ಮತಗಳನ್ನು ಗಳಿಸಿ ವಿಜೇತರಾಗಿದ್ದಾರೆ. ಅವರ ಸಮೀಪದ ಪ್ರತಿಸ್ಪರ್ಧಿ ಜೆಡಿಎಸ್‌ನ ಅಭ್ಯರ್ಥಿ 112 ಮತಗಳನ್ನು ಪಡೆದು ಪರಾಜಿತರಾಗಿದ್ದಾರೆ.

17 ನೇ ವಾರ್ಡ್‌ನಿಂದ ಸ್ಪರ್ಧಿಸಿದ್ದ ಪಕ್ಷದ ಅಭ್ಯರ್ಥಿ ಬಿ.ಬಿ. ಜ್ಯೋತಿ ಅವರು 302 ಮತಗಳನ್ನು ಪಡೆದು ವಿಜೇತರಾದ್ದಾರೆ. ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸಿನ ಅಭ್ಯರ್ಥಿಯನ್ನು 88 ರ ಮತಗಳ ಅಂತರದಿಂದ ಪರಾಜಿತಗೊಳಿಸಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ನಗರ ಸಭೆ, ಗೌರಿಬಿದನೂರು ಪುರಸಭೆ ಮತ್ತು ಗುಡಿಬಂಡೆ ಪಟ್ಟಣ ಪಂಚಾಯತಿಯಿಂದ ಸ್ಪರ್ಧಿಸಿದ್ದ ಪಕ್ಷದ ಅಭ್ಯರ್ಥಿಗಳಿಗೆ ಜಯಗಳಿಸಲು ಸಾಧ್ಯವಾಗಿಲ್ಲ.

ಕೋಲಾರ ಜಿಲ್ಲೆ :

ಕೋಲಾರ ಜಿಲ್ಲೆಯ ಕೋಲಾರ ನಗರಸಭೆಯಲ್ಲಿ ಗಾಂಧಿನಗರ ವಾರ್ಡ್‌ನಿಂದ ಸ್ಪರ್ಧಿಸಿದ್ದ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಗಾಂಧಿನಗರ ನಾರಾಯಣ ಸ್ವಾಮಿ ಯವರು 1268 ಮತಗಳನ್ನು ಗಳಿಸಿ ಗೆದ್ದಿದ್ದಾರೆ. ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ವರ್ತೂರು ಪ್ರಕಾಶ್ ಬೆಂಬಲಿತ ಅಭ್ಯರ್ಥಿ ರಾಜೇಶ್ ಅವರನ್ನು 649 ಮತಗಳ ಅಂತರದಿಂದ ಸೋಲಿಸಿದ್ದಾರೆ.

ಅದೇ ರೀತಿ ಕೆ.ಜಿ.ಎಫ್ ಪುರಸಭೆಯ ಎಡ್ಗರ್ಸ್ ವಾರ್ಡ್‌ನಲ್ಲಿ ಸಿಪಿಐ(ಎಂ) ಪಕ್ಷದ ಅಭ್ಯರ್ಥಿ ಜಯದೇವಿ ಟಿ.ಎಸ್. ಮಣಿಯವರು 878 ಮತಗಳನ್ನು ಗಳಿಸಿ ಗೆಲುವು ಸಾಧಿಸಿದ್ದಾರೆ. ಅವರು ತಮ್ಮ ಸಮೀಪದ ಸ್ಪರ್ಧಿ ಜೆಡಿ(ಎಸ್)ನ ಭಕ್ತವತ್ಸಲ ಬೆಂಬಲಿತ ಸ್ವತಂತ್ರ ಅಭ್ಯರ್ಥಿಯನ್ನು 248 ಮತಗಳ ಅಂತರದಿಂದ ಸೋಲಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆ :

(1) ಮಂಗಳೂರು ಮಹಾನಗರ ಪಾಲಿಕೆ.

ಒಟ್ಟು 14 ವಾರ್ಡ್‌ಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಾಗಿತ್ತು.

ಪಂಜಿಮೊಗರು ವಾರ್ಡ್‌ನಿಂದ ಸ್ಪರ್ಧಿಸಿದ್ದ ಪಕ್ಷದ ಅಭ್ಯರ್ಥಿ ದಯಾನಂದ ಶೆಟ್ಟಿ 1239 ಮತಗಳನ್ನು ಪಡೆದು ಗೆಲುವು ಸಾಧಿಸಿದ್ದಾರೆ. ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಅಭ್ಯರ್ಥಿಯನ್ನು 271 ಮತಗಳ ಅಂತರದಿಂದ ಸೋಲಿಸಿದ್ದಾರೆ.

ಬಜಾಲ್ ವಾರ್ಡ್‌ನಿಂದ ಸ್ಪರ್ಧಿಸಿದ್ದ ಪಕ್ಷದ ಅಭ್ಯರ್ಥಿ ಜಯಂತಿ ಬಿ. ಶೆಟ್ಟಿ ಅವರು 1126 ಮತಗಳನ್ನು ಪಡೆದು ದ್ವಿತಿಯ ಸ್ಥಾನದಲ್ಲಿದ್ದಾರೆ. ಇವರ ವಿರುದ್ಧ ಸ್ಪರ್ಧಿಸಿದ್ದ ಬಿಜೆಪಿ ಅಭ್ಯರ್ಥಿ 690 ಮತಗಳ ಅಂತರದಿಂದ ಜಯಗಳಿಸಿದ್ದಾರೆ. ಕಾಮ್ರೆಡ್ ಜಯಂತಿ ಶೆಟ್ಟಿ ಹಿಂದಿನ ಬಾರಿ ಪಕ್ಷದ ಅಭ್ಯರ್ಥಿಯಾಗಿ ಜಯಗಳಿಸಿದ್ದರು.

ಜಪ್ಪಿನ ಮೊಗರು ವಾರ್ಡ್‌ನಿಂದ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಉದಯ ಚಂದ್ರ ರೈ ಅವರು ಕೇವಲ 67 ಮತಗಳ ಅಂತದಿಂದ ಸೋಲನ್ನು ಅನುಭವಿಸಿದ್ದಾರೆ. ಇವರ ಪ್ರತಿಸ್ಪರ್ಧಿ ಬಿಜೆಪಿಯ ಅಭ್ಯರ್ಥಿ 1403 ಮತಗಳನ್ನು ಪಡೆದು ಗೆದ್ದಿದ್ದಾರೆ.

(2) ಮೂಡಬಿದ್ರೆ ಪುರಸಭೆ.

ಒಟ್ಟು 4 ವಾರ್ಡ್‌ಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಾಗಿತ್ತು.

ಕೋಟೆಬಾಗಿಲು ವಾರ್ಡ್‌ನಿಂದ ಸ್ಪರ್ಧಿಸಿದ್ದ ಪಕ್ಷದ ಅಭ್ಯರ್ಥಿ ರಮಣಿ 207 ಮತಗಳನ್ನು ಪಡೆದು ಸತತ ಎರಡನೇ ಬಾರಿ ಮೂಡಬಿದ್ರೆ ಪುರಭೆಯ ಸದಸ್ಯರಾಗಿ ಆಯ್ಕೆಯಾಗಿದ್ದರೆ. ಇವರ ಸಮೀಪದ ಪ್ರತಿಸ್ಪರ್ಧಿ ಜೆಡಿಎಸ್‌ನ ಅಭ್ಯರ್ಥಿ 186 ಮತಗಳನ್ನು ಪಡೆದು ಸೋತಿದ್ದಾರೆ.

(3)ಬಂಟ್ವಾಳ್ ಪುರಸಭೆ :

ಇಲ್ಲ ವಾರ್ಡ್ ನಂ.2 ರಿಂದ ಸಿಪಿಐ(ಎಂ) ಅಭ್ಯರ್ಥಿ ಮತ್ತು ವಾರ್ಡ್ ನಂ.5 ರಿಂದ ಸಿಪಿಐ(ಎಂ) ಬೆಂಬಲಿತ ಅಭ್ಯರ್ಥಿ ಸ್ಪರ್ಧಿಸಿದ್ದರು. ವಾರ್ಡ್ ನಂ5 (ಜಕ್ರಿಬೆಟ್ಟು) ರಿಂದ ಸಿಪಿಐ(ಎಂ) ಬೆಂಬಲದೊಂದಿಗೆ ಸ್ಪರ್ಧಿಸಿದ್ದ ಬಿ.ಪ್ರವೀಣ್ ಅವರು 614 ಮತಗಳನ್ನು ಪಡೆದು ಜಯಗಳಿಸಿದ್ದಾರೆ. ಇವರ ನಿಕಟ ಪ್ರತಿಸ್ಪರ್ಧಿ ಬಿಜೆಪಿಯ ಅಭ್ಯರ್ಥಿ 503 ಮತಗಳನ್ನು ಪಡೆದು ಪರಾಭವಗೊಂಡಿದ್ದಾರೆ.


ಕಲಾವತಿ.ಯು.ಎಸ್.


ಗುಣರತ್ನ

(4) ಉಳ್ಳಾಲ ಪುರಸಭೆ :

ಇಲ್ಲಿ ಒಟ್ಟು 7 ವಾರ್ಡ್‌ಗಳಿಂದ ಸ್ಪರ್ಧೆಮಾಡಲಾಗಿತ್ತು. ಯಾರಿಗೂ ಜಯಗಳಿಸಲು ಸಾಧ್ಯವಾಗಲಿಲ್ಲ. ಕಳೆದ ಬಾರಿ ಉಳ್ಳಾಲ ಪುರಸಭೆಯಲ್ಲಿ ಸಿಪಿಐ(ಎಂ) ಪಕ್ಷ

ಜನಶಕ್ತಿ ಶುಭಾಶಯಗಳು.

ದುಡಿಯುವ ಜನರ ಪರವಾಗಿ ಸಿಪಿಐ(ಎಂ) ಪಕ್ಷದ ಅಭ್ಯರ್ಥಿಗಳಾಗಿ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸಿ ವಿಜೇತರಾಗಿರುವ 13 ಜನ ಅಭ್ಯರ್ಥಿಗಳಿಗೆ 'ಜನಶಕ್ತಿ ಕನ್ನಡ ವಾರಪತ್ರಿಕೆ'ಯ ಶುಭಾಶಯಗಳು.

ಹಿಂದಿನ ಅವಧಿಯಲ್ಲಿ ಬಹುತೇಕ ನಗರ ಸ್ಥಳೀಯ ಸಂಸ್ಥೆಗಳು ಭ್ರಷ್ಟಾಚಾರದ ಕೂಪಗಳಾಗಿಬಿಟ್ಟಿದ್ದವು. ಆಳುವ ಪಕ್ಷ ಮತ್ತು ಪ್ರಮುಖ ವಿರೋಧ ಪಕ್ಷಗಳು ಪರಸ್ಪರ ಕೈ ಜೋಡಿಸಿ ಸಾರ್ವಜನಿಕ ಹಣವನ್ನು ಲೂಟಿಮಾಡಿದ್ದವು. ಪರ್ಯಾಯ ರಾಜಕೀಯ ಶಕ್ತಿಗಳನ್ನು ಗುರುತಿಸಲಾಗದ ಮತದಾರರು ಮತ್ತೆ ಅದೇ ಭ್ರಷ್ಟ ರಾಜಕೀಯ ಪಕ್ಷಗಳ ಅಭ್ಯರ್ಥಿಗಳನ್ನೇ ಆಯ್ಕೆ ಮಾಡಿದ್ದಾರೆ. ಬಿಜೆಪಿ ರಾಜ್ಯ ಸರ್ಕಾರದ ವೈಫಲ್ಯದ ಲಾಭ ಅನಾಯಾಸವಾಗಿ ಕಾಂಗ್ರೆಸ್ ಪಕ್ಷಕ್ಕೆ ದೊರೆತಿದೆ.

ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಪಕ್ಷದಿಂದ ಆಯ್ಕೆಯಾದ ಅಭ್ಯರ್ಥಿಗಳು ಹೆಚ್ಚಿನ ಹೊಣೆ ಹೊತ್ತು ಕಾರ್ಯನಿರ್ವಹಿಸಬೇಕಾಗುತ್ತದೆ. ರಾಜ್ಯ ಸರ್ಕಾರದಿಂದ ಅಗತ್ಯ ಅನುದಾನ ಪಡೆಯಲು, ಪಡೆದ ಅನುಧಾನದ ಸಮರ್ಪಕ ಬಳಕೆಯಾಗುವಂತೆ ನೋಡಿಕೊಳ್ಳಲು, ನಗರದ ಜನತೆಯ ತುರ್ತು ಸಮಸ್ಯೆಗಳ ಇತ್ಯರ್ಥಕ್ಕೆ ಆದ್ಯತೆ ನೀಡಲು, ತಾವು ಆಯ್ಕೆಯಾದ ವಾರ್ಡ್‌ಗಳ ನೈಜ ಅಭಿವೃದ್ಧಿ ಸಾಧ್ಯವಾಗುವಂತೆ ಮಾಡಲು ಸಿಪಿಐ(ಎಂ) ಅಭ್ಯರ್ಥಿಗಳು ಜನರನ್ನು ಸಂಘಟಿಸಿ ಹೋರಾಟಗಳನ್ನು ನಡೆಸಲು ನಿರಂತರ ಗಮನಕೊಡಬೇಕು. ವಿವಿಧ ಜನವಿಭಾಗಗಳ ಸಾಮೂಹಿಕ ಸಂಘಟನೆಗಳನ್ನು ಕಟ್ಟಲು ಗಮನ ನೀಡಬೇಕು. ಜನರ ಹೋರಾಟಗಳಿಗೆ ನೇತೃತ್ವ ನೀಡಲು ಸದಾ ಲಭ್ಯವಾಗಬೇಕು. ಈ ದಿಶೆಯಲ್ಲಿ ವಿಜೇತರಾದ ಸಿಪಿಐ(ಎಂ) ಅಭ್ಯರ್ಥಿಗಳ ಶ್ರಮಕ್ಕೆ ಯಶಸ್ಸು ದೊರೆಯಲಿ ಎಂದು 'ಜನಶಕ್ತಿ' ಹಾರೈಸುತ್ತದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಇಬ್ಬರು ಸದಸ್ಯರಿದ್ದರು.

ಪುತ್ತೂರು ಪುರಸಭೆಯಲ್ಲಿ ಸ್ಪರ್ಧೆಯಲ್ಲಿದ್ದ ಪಕ್ಷದ ಒಬ್ಬ ಅಭ್ಯರ್ಥಿ, ಬೆಳ್ತಂಗಡಿ ಪಟ್ಟಣ ಪಂಚಾಯತಿಯಿಂದ ಸ್ಪರ್ಧಿಸಿದ್ದ 6 ಅಭ್ಯರ್ಥಿಗಳು ಮತ್ತು ಸುಳ್ಯ ಪಟ್ಟಣ ಪಂಚಾಯಿತಿಯಿಂದ ಸ್ಪರ್ಧಿಸಿದ್ದ ಒಬ್ಬ ಅಭ್ಯರ್ಥಿ ಪರಾಭವಗೊಂಡಿದ್ದಾರೆ.


ರಮಣಿ

ಉಡುಪಿ ಜಿಲ್ಲೆ : ಕುಂದಾಪುರ ಪುರಸಭೆ :

ಒಟ್ಟು 7 ವಾರ್ಡ್‌ಗಳಿಂದ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಾಗಿತ್ತು. ಅವರ ಪೈಕಿ ಇಬ್ಬರು ಆಯ್ಕೆಯಾಗಿದ್ದಾರೆ. ಇನ್ನಿಬ್ಬರು ಅಭ್ಯರ್ಥಿಗಳು ಅತಿ ಕಡಿಮೆ ಅಂತರದಿಂದ ಸೋತಿದ್ದಾರೆ.


ಎಂ.ಎಸ್. ಹಡಪದ

ಜೆ.ಎಲ್.ಬಿ ವಾರ್ಡ್‌ನಿಂದ ಸ್ಪರ್ಧಿಸಿದ್ದ ಪಕ್ಷದ ಅಭ್ಯರ್ಥಿ ಕಲಾವತಿ ಎಚ್.ಎಸ್. 408 ಮತಗಳನ್ನು ಪಡೆದು ಮರುಆಯ್ಕೆಯಾಗಿದ್ದಾರೆ. ಇವರ ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಅಭ್ಯರ್ಥಿ 389 ಮತಗಳನ್ನು ಪಡೆದು ಸೋತಿದ್ದಾರೆ.

ಹುಂಚಾರುಬೆಟ್ಟು ವಾರ್ಡ್‌ನಿಂದ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಗುಣರತ್ನ ಅವರು ಸಹ 408 ಮತಗಳನ್ನು ಪಡೆದು ಪುನರಾಯ್ಕೆಯಾಗಿದ್ದಾರೆ. ಇವರ ನಿಕಟ ಪ್ರತಿಸ್ಪರ್ಧಿ ಬಿಜೆಪಿ ಅಭ್ಯರ್ಥಿ 404 ಮತಗಳನ್ನು ಪಡೆದು ಎರಡನೇ ಸ್ಥಾನದಲ್ಲಿದ್ದಾರೆ.

ಕುಂದೇಶ್ವರ ವಾರ್ಡ್‌ನಿಂದ ಸ್ಪರ್ಧಿಸಿದ್ದ ಪಕ್ಷದ ಅಭ್ಯರ್ಥಿ ವಿ. ಮಿನಾಕ್ಷಿ ಅವರು 372 ಮತಗಳನ್ನು ಪಡೆದು ಕೇವಲ 3 ಮತಗಳ ಅಂತರದಿಂದ ಸೋಲನ್ನು ಅನುಭವಿಸಿದ್ದಾರೆ. ಇವರ ವಿರುದ್ಧ ಸ್ಪರ್ಧಿಸಿ ಗೆದ್ದಿರುವ ಬಿಜೆಪಿ ಅಭ್ಯರ್ಥಿ 375 ಮತಗಳನ್ನು ಪಡೆದಿದ್ದಾರೆ

ಕಲ್ಲಾಗರ ವಾರ್ಡ್‌ನಿಂದ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಜೋನ್ ಮೇರಿ ಅವರು 371 ಮತಗಳನ್ನು ಪಡೆದು ಕೇವಲ 14 ಮತಗಳ ಅಂತರದಿಂದ ಸೋಲು ಅನುಭವಿಸಿದ್ದಾರೆ. ಇವರ ಪ್ರತಿಸ್ಪರ್ಧಿ ಬಿಜೆಪಿಯ ಅಭ್ಯರ್ಥಿ 385 ಮತಗಳನ್ನು ಪಡೆದು ಗೆದ್ದಿದ್ದಾರೆ.

ಗದಗ ಜಿಲ್ಲೆ : ಗಜೇಂದ್ರಗಡ ಪುರಸಭೆ.

ಇಲ್ಲಿ ಒಟ್ಟು 8 ವಾರ್ಡ್‌ಗಳಿಂದ ಸಿಪಿಐ(ಎಂ) ಅಭ್ಯರ್ಥಿಗಳನ್ನು ಕಣ-ಕ್ಕೆ ಇಳಿಸಲಾಗಿತ್ತು. ಒಂದು ವಾರ್ಡ್‌ನಿಂದ ಮಾತ್ರ ಮೊದಲಬಾರಿ ಗೆಲುವು ಸಾಧಿಸಲು ಸಾಧ್ಯವಾಗಿದೆ.

2 ನೇ ವಾರ್ಡ್‌ನಿಂದ ಸ್ಪರ್ಧಿಸಿದ್ದ ಪಕ್ಷದ ಅಭ್ಯರ್ಥಿ ಮಲ್ಲಿಕಾರ್ಜುನ ಎಸ್. ಹಡಪದ 522 ಮತಗಳನ್ನು ಪಡೆದು ಜಯಗಳಿಸಿದ್ದಾರೆ. ಅವರ ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಅಭ್ಯರ್ಥಿ 306 ಮತಗಳನ್ನು ಪಡೆದು ಸೋತಿದ್ದಾರೆ.

3 ನೇ ವಾರ್ಡ್‌ನಿಂದ ಸ್ಪರ್ಧಿಸಿದ್ದ ಪಕ್ಷದ ಅಭ್ಯರ್ಥಿ ಲೀಲಾವತಿ ಚಿಟಗಿ ಅವರು 185 ಮತಗಳನ್ನು ಪಡೆದು ದ್ವಿತೀಯ ಸ್ಥಾನದಲ್ಲಿದ್ದಾರೆ. ಬಿಜೆಪಿ ಅಭ್ಯರ್ಥಿ 336 ಮತಗಳನ್ನು ಪಡೆದು ಗೆದ್ದಿದ್ದಾರೆ.


ದಯಾನಂದ ಬಿ. ಶೆಟ್ಟಿ ವಿಜಯೋತ್ಸವ



ಎಡ ಪರ್ಯಾಯವನ್ನು ದೇಶದ ಮುಂದಿಟ್ಟ ಸಿಪಿಐ(ಎಂ)ನ ನೇತೃತ್ವದ ಸಂಘರ್ಷ ಸಂದೇಶ ಜಾಥಾಗಳ ಸಮಾಗಮ ಮಾರ್ಚ್ 19, 2013.

ಮೇ 15ರಿಂದ 31ರ ನಡುವೆ ದೇಶಾದ್ಯಂತ ಬ್ಲಾಕ್, ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಎಲ್ಲ ಸರಕಾರೀ ಕಚೇರಿಗಳ ಪಿಕೆಟಿಂಗ್‌ಗೆ ಬೃಹತ್ ರ್ಯಾಲಿ ಕರೆ






ಜಾಥಾ ಮಾರ್ಗದಲ್ಲಿ ಜನಸ್ಪಂದನ

ಕಾರ್ಮಿಕ ಚಳುವಳಿಗಳಲ್ಲಿ ಸಕ್ರಿಯವಾಗುತ್ತಿರುವ ಮಹಿಳಾ ಕಾರ್ಮಿಕರು

“ನವ ಉದಾರೀಕರಣದ ನೀತಿಗಳ ಶೋಷಣೆಯ ವಿರುದ್ಧ ಹೋರಾಡುತ್ತಿರುವ ಮಹಿಳಾ ಶ್ರಮಜೀವಿಗಳು”

ಎಸ್. ವರಲಕ್ಷ್ಮಿ

ಮಾರ್ಚ್ 3ರಂದು ಪಾವಗಡದಿಂದ ಬೆಂಗಳೂರಿಗೆ ವಾಪಾಸಾಗುತ್ತಿದ್ದಾಗ ಬಿಜಾಪುರದಿಂದ ಒಬ್ಬರು ಪೋನ್ ಮಾಡಿ 'ನನಗೆ ಅಂಗನವಾಡಿ ಕಾಯಕರ್ತೆಯೊಬ್ಬರು ನಿಮ್ಮ ನಂಬರ್ ಕೊಟ್ಟರು, ಅದಕ್ಕೆ ಪೋನ್ ಮಾಡಿದೆ. ಬೆಳಗಾವಿಯಲ್ಲಿ ಒಬ್ಬ ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ ಆಗಿದೆ. ಯಾರೂ ಅದಕ್ಕಾಗಿ ಪ್ರತಿಭಟನೆ ನಡೆಸುತ್ತಿಲ್ಲ. ಆ ಹುಡುಗಿ ಬದುಕುಳಿಯುವ ಅಂದಾಜಿಲ್ಲ! ನೀವು ಸಹಾಯ ಮಾಡಿ' ಎಂದರು. ಸರಿ ಅದಕ್ಕೆ ನಮ್ಮ ಕೈಲಾದ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದೆ.

ನಂತರ ಆ ಕಾರ್ಯಕರ್ತೆ ಪೋನ್ ಮಾಡಿ 'ಮೇಡಂ, ಅಗಲೆ ಪೋನ್ ಮಾಡಿದ್ದು ನಮ್ಮ ಗೌಡ್ರು! ಅವರೇ ನಮ್ಮ ಮಾಲೀಕರು' ಎಂದರು. ನಾನು ಗಾಬರಿಯಾದೆ. 'ನಮ್ಮ ಮಾಲೀಕರು' ಎಂದರೆ ಯಾರು, ಹೇಗೆ? ಎಂದು ಅರ್ಥವಾಗದೆ ಪುನಃ ಕೇಳಿದೆ. ಅಗ ನನಗೆ ಅರ್ಥವಾಗಿದ್ದು, ಗಂಡನಿಗೆ ಮಾಲೀಕ, ಗೌಡ, ಯಜಮಾನ್ರು... ಎನ್ನುತ್ತಾರೆ ಎಂದು. ತುಂಬಾ ಯೋಚನೆ ಮಾಡಿದೆ. ಸ್ವಾತಂತ್ರ್ಯ ಸಿಕ್ಕಿ 63 ವರ್ಷ ಆಗಿದೆ. ವೈಜ್ಞಾನಿಕತೆ, ವೈಚಾರಿಕತೆ, ಬೆಳೆದಿದ್ದರೂ ಸಮಾನತೆ ಎಂಬುದು ಕೆಲವು ವಿಚಾರಗಳಲ್ಲಿ ಕೆಲವರಿಗೆ ದೊರಕಿದ್ದರೂ ಹಲವರಿಗೆ ಇನ್ನು ಅದು ಗೊತ್ತಿಲ್ಲ ಎಂದು. ಈ ಅಸಮಾನತೆ ಕುಟುಂಬದೊಳಗೆ, ಸಮಾಜದೊಳಗೆ ಮತ್ತು ದುಡಿಯುವ ಸ್ಥಳಗಳಲ್ಲಿಯೂ ಇದೆ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಎಂದ ಕೂಡಲೇ ಕುಟುಂಬ ಮತ್ತು ಸಮಾಜದಲ್ಲಿ ಮಹಿಳೆಯರ ಮೇಲಿನ ಅತ್ಯಾಚಾರ, ವರದಕ್ಷಿಣೆ, ಬಾಲ್ಯ ವಿವಾಹ, ಸ್ತ್ರೀ ಭ್ರೂಣಹತ್ಯೆ, ಲೈಂಗಿಕ ದೌರ್ಜನ್ಯಗಳು ಹೆಚ್ಚು ಚರ್ಚೆಯಾಗುತ್ತಿವೆ? ಇವು ಚರ್ಚೆಯಾಗಲೇ ಬೇಕು. ಅದೇ ಸಮಯದಲ್ಲಿ ಮಹಿಳೆಯ ಶ್ರಮ ಶಕ್ತಿಯನ್ನು ಅಗಾಧವಾಗಿ ಅಂದಿನಿಂದ ಇಂದಿನವರೆಗೆ ಶೋಷಿಸಲಾಗುತ್ತಿದೆ. ಈ ಶ್ರಮ ಶಕ್ತಿಯ ಶೋಷಣೆ ಹೆಚ್ಚು ಚರ್ಚೆಯಾಗದಿರುವುದು, ನೂರಾರು ವರ್ಷಗಳಿಂದ ಪಡೆದುಕೊಂಡು ಬಂದಿರು ಕೆಲವು ಹಕ್ಕುಗಳು ತಮ್ಮಿಂದ ದೂರವಾಗುತ್ತಿರುವುದು ಇಂದು ಹೆಚ್ಚು ಚರ್ಚೆಯಾಗಬೇಕಾದ ಅಗತ್ಯವೂ ಇದೆ. ಇಂದಿನ ಮಾಧ್ಯಮಗಳು, ಹಲವು ಮಹಿಳಾ ಪರ ಮಾತಾನಾಡುವ ತಜ್ಞರು, ಮಹಿಳಾ ಸಂಘಟನೆಗಳು ಈ ವಿಚಾರಗಳ ಬಗ್ಗೆ ಚರ್ಚೆ ಮಾಡಬೇಕಾದ ಅಗತ್ಯವೂ ಇದೆ.

ಲಿಂಗಾಧಾರಿತ ಅಸಮಾನತೆಯನ್ನು ಹೆಚ್ಚಾಗಿ ಸಾಮಾಜಿಕ ಪ್ರಶ್ನೆಯನ್ನಾಗಿ ನೋಡಲಾಗುತ್ತಿದೆ. ಆದರೆ ಮಹಿಳೆ–ಪುರುಷರ ಸಾಮಾಜಿಕ ಸಮಾನತೆಗೆ ಆರ್ಥಿಕ ಸಮಾನತೆಯ ಬುನಾದಿ ಇರಲೇಬೇಕು ಎಂಬುದನ್ನು ನಾವು ಅರ್ಥ ಮಾಡಿ ಕೊಳ್ಳಲೇಬೇಕಾಗಿದೆ. ಇಂದಿನ ಆರ್ಥಿಕ ವ್ಯವಸ್ಥೆಯಲ್ಲಿ ಎಲ್ಲ ವಿಭಾಗಗಳಲ್ಲಿಯೂ ಕೂಡಾ ಮಹಿಳೆ ಸಮಾನವಾಗಿ ಶ್ರಮದಲ್ಲಿ ಮುನ್ನುಗ್ಗುತ್ತಿದ್ದಾಳೆ. ಮಾತ್ರವಲ್ಲ ಪುರುಷರಿಗಿಂತ ಕಡಿಮೆಯಿಲ್ಲದೆ ಕಾಣಿಕೆಯನ್ನು ನೀಡುತ್ತಿದ್ದಾಳೆ.

ರಕ್ಷಣಾ ವಲಯದಿಂದ ಹಿಡಿದು, ಕಸಗುಡಿಸುವ ತನಕ ಎಲ್ಲಾ ವಿಭಾಗಗಳಲ್ಲಿಯೂ ಕೂಡಾ ಮಹಿಳೆ ದುಡಿಯುತ್ತಿದ್ದು ಸಾಮಾಜಿಕವಾಗಿ ಅರ್ಥಿಕವಾಗಿ ದುಡಿಯುತ್ತಿರುವಾಗಲೇ ಪ್ರಭುತ್ವಗಳು ತರುತ್ತಿರುವ ಜನವಿರೋಧಿ ಮತ್ತು ದುಡಿಯುವ ವರ್ಗದ ವಿರೋಧಿ ನೀತಿಗಳ ವಿರುದ್ಧವಾಗಿ ಹೋರಾಟಗಳನ್ನು ನಡೆಸುತ್ತಿದ್ದಾಳೆ.

ಕಾರ್ಮಿಕ ಚಳುವಳಿಯ ಭಾಗ

ಅಂತರಾಷ್ಟ್ರೀಯ ಮಹಿಳಾದಿನ ಹುಟ್ಟಿದ್ದೆ ಇಂತಹ ದುಡಿಯುವ ಮಹಿಳೆಯರ ಹೋರಾಟದಿಂದ. 1903 ರಲ್ಲಿ ಅಮೇರಿಕಾದಲ್ಲಿ ಮತದಾನದ ಹಕ್ಕಿಗಾಗಿ ಹೋರಾಟ ನಡೆಸಿದ್ದ ಮಹಿಳಾ ಕಾರ್ಮಿಕ ಸಂಘಟನೆಗಳು ಮತ್ತು ಉದಾರವಾದಿ ವೃತ್ತಿ ನಿರತ ಮಹಿಳೆಯರು. ಮಹಿಳೆಯರು 'ಮಹಿಳೆಯರ ಟ್ರೆಡ್ ಯೂನಿಯನ್ ಲೀಗ್'ಅನ್ನು ಸ್ಥಾಪಿಸಿ ರಾಜಕೀಯ ಮತ್ತು ಅರ್ಥಿಕ ಕಲ್ಯಾಣವನ್ನು ತಮ್ಮ ಸಂಘಟನೆಯ ಮುಖ್ಯ ಧ್ಯೇಯವಾಗಿಸಿಕೊಂಡರು. 1908 ರಲ್ಲಿ ಫೆಬ್ರವರಿ ಕೊನೆಯ ವಾರದಲ್ಲಿ ಅಮೇರಿಕಾದಲ್ಲಿ ಮತದಾನದ ಹಕ್ಕಿಗಾಗಿ ಬೃಹತ್ ಪ್ರತಿಭಟನಾ ಪ್ರದರ್ಶನಗಳು ನಡೆದವು. 1909 ರಲ್ಲಿ ಸಿದ್ಧ ಉಡುಪುಗಳ ಕಾರ್ಖಾನೆಗಳ ಮಹಿಳಾ ಕಾರ್ಮಿಕರು 20 ರಿಂದ 30 ಸಾವಿರ ಮಹಿಳೆಯರು ಚಳಿಗಾಲದ 13 ವಾರಗಳ ಕಾಲ ಮುಷ್ಕರ ನಡೆಸಿ ದಸ್ತಗಿರಿಯಾದರು. ನಂತರ ಅವರನ್ನು ಕಾರ್ಮಿಕ ಸಂಘಟನೆಗಳು ಜಾಮೀನಿನ ಮೇಲೆ ಬಿಡಿಸಿದರು.

ಈ ಹೋರಾಟಗಳಿಂದ ಸ್ಫೂರ್ತಿ ಪಡೆದು 1910ರಲ್ಲಿ ಡೆನ್ಮಾರ್ಕ್‌ನ ಕೂಪನ್ ಹೇಗನ್‌ನಲ್ಲಿ 17 ದೇಶಗಳ ಪ್ರತಿನಿಧಿಗಳು ಮತ್ತು ಹಲವಾರು ಕಾರ್ಮಿಕ ಸಂಘಟನೆಗಳ ನಾಯಕಿಯರು ಸಾರ್ವತ್ರಿಕ ಮತದಾನದ ಹಕ್ಕು, 8 ಗಂಟೆಗಳ ದುಡಿಮೆ, ಹೆರಿಗೆ ರಜೆ ಮತ್ತು ಆರೋಗ್ಯ ವಿಮೆಯನ್ನು ಮುಂತಾದ ಬೇಡಿಕೆಗಳನ್ನು ನಿರ್ಣಯ ರೂಪದಲ್ಲಿ ಮಂಡಿಸಲಾಯಿತು.

ಅಧಿಕೃತವಾಗಿ 1911 ಮಾರ್ಚ್ 8 ರಂದು ಮಹಿಳೆಯರ ಹಕ್ಕಿನ ದಿನವಾಗಿ ಆಚರಿಸಲ್ಪಡುತ್ತದೆ.

ಶ್ರಮಿಕ ಮಹಿಳೆಯರಿಂದಲೇ ಮೊದಲ ಹೋರಾಟ ಪ್ರಾರಂಭವಾಗಿದೆ. ಆದರೆ ಅಂದಿನಿಂದ ಇಂದಿನವರೆಗೂ ಇಂತಹ ಶ್ರಮಿಕ ಮಹಿಳೆಯರು ಕಾರ್ಮಿಕ ಸಂಘಟನೆಗಳನ್ನು ಕಟ್ಟಿಕೊಂಡು ಹೋರಾಟ ನಡೆಸುತ್ತಲೇ ಇದ್ದಾರೆ.

ನವ ಉದಾರೀಕರಣ ನೀತಿಗಳಿಂದಾಗಿ ದೊರಕಿದ್ದಂತಹ ಹಲವು ಸಂವಿಧಾನಾತ್ಮಕ ಹಕ್ಕುಗಳು ಕೂಡ ದೂರವಾಗುತ್ತಿರುವುದನ್ನು ಗಮನಿಸಬೇಕಾಗಿದೆ.

ಇಂದು ದೇಶದಲ್ಲಿ 46 ಕೋಟಿ ಜನರು ಸಂಘಟಿತ ಮತ್ತು ಅಸಂಘಟಿತ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾರೆ.

ದೇಶದ ಒಟ್ಟು ಅಂತರಿಕ ಉತ್ಪನ್ನಕ್ಕೆ 60% ರಷ್ಟು ಕೊಡುಗೆಯನ್ನು ಅಸಂಘಟಿತ ಕ್ಷೇತ್ರ ನೀಡುತ್ತಿದೆ. ಇಂತಹ ಅಸಂಘಟಿತ ಕ್ಷೇತ್ರದಲ್ಲಿ 90% ಭಾಗ ಮಹಿಳೆಯರೇ ದುಡಿಯುತ್ತಿದ್ದಾರೆ.

ಇವರ ಶೋಷಣೆ ಅತ್ಯಂತ ತೀವ್ರವಾಗಿದೆ. 10 ರಿಂದ 12 ಗಂಟೆಗಳ ಕೆಲಸ, ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನವಿಲ್ಲ. ಇಎಸ್‌ಐ–ಪಿಎಫ್ ಸೌಲಭ್ಯವಿಲ್ಲ, ಇಂದಿಗೂ 500 ರೂಗಳಿಂದ 5000 ರೂ. ವೇತನ ಮಾತ್ರ, ಕೆಲಸದ ಸ್ಥಳದಲ್ಲಿ ರಕ್ಷಣೆಯಿಲ್ಲ. ಕೆಲಸದ ಭದ್ರತೆಯಿಲ್ಲ, ಖಾಯಂ ಸ್ವರೂಪದ ಮತ್ತು ಸಂಘಟಿತವಾಗಿ ಮಾಡಬೇಕಾದ ಕೆಲಸವನ್ನು ವಿಭಜಿಸಿ ಗುತ್ತಿಗೆ, ಹೊರಗುತ್ತಿಗೆ, ಪೀಸ್‌ವರ್ಕ್ (ತುಂಡು ಕೆಲಸ), ಟ್ರೈನಿ, ಅಪ್ರೆಂಟೀಸ್, ಗೌರವ ಧನ, ಸಂಭಾವನೆ, ಪ್ರೋತ್ಸಾಹಧನ, ಸ್ಕೀಂ ವರ್ಕರ್ಸ್, ಸಹಾಯಕರು, ಸ್ವಯಂ ಸೇವಕರು ಎಂಬ ಹೆಸರುಗಳಲ್ಲಿ ದುಡಿಸಿ ನಿರಂತರ ಶೋಷಣೆಯನ್ನು ಕೇಂದ್ರ–ರಾಜ್ಯ ಸರ್ಕಾರಗಳು ಪೈಪೋಟಿಗೆ ಬಿದ್ದಂತೆ ಮಾಡುತ್ತಿವೆ.

ಕೆಲಸದ ಸಮಯ, ಕೂಲಿ, ಕೆಲಸ್‌ನ ಭದ್ರತೆಯೇ ಇಲ್ಲದಿರುವುದರಿಂದ ಹೆರಿಗೆ ಭತ್ಯೆ, ಸಮಾನ ಕೆಲಸಕ್ಕೆ ಸಮಾನ ಕೂಲಿ, ಶಿಶುಪಾಲನಾ ಕೇಂದ್ರಗಳು, ರಾತ್ರಿಪಾಳಿ ಕೆಲಸ ಕಡ್ಡಾಯ, ವರ್ಗಾವಣೆ ಮತ್ತು ಬಡ್ತಿಗಳಲ್ಲಿ ಅಸಮಾನತೆಗಳು ಸಂಪೂರ್ಣವಾಗಿ ದುಡಿಯುವ ಮಹಿಳೆಯರ ಹಕ್ಕುಗಳಿಂದ ದೂರವಾಗುತ್ತಿದೆ.

ಶೋಷಣೆ ಇಷ್ಟು ತೀವ್ರವಾಗಿದ್ದರೂ ಕೂಡಾ ಭಾರತದ ಕಾರ್ಮಿಕ ಚಳುವಳಿ ಹಿಂದೆಗೆಯದೇ ಮುನ್ನಡೆಯುತ್ತಿದೆ. ಇಂತಹ ಕಾರ್ಮಿಕ ಚಳುವಳಿಗಳಲ್ಲಿ ಪುರಷರಷ್ಟೇ ಅಲ್ಲದೇ ಮಹಿಳಾ ವರ್ಗವೂ ಕೂಡಾ ಈ ಚಳುವಳಿಗಳಲ್ಲಿ ಸಮಾನವಾಗಿ ಹೆಜ್ಜೆಯಿರಿಸುತ್ತಿದೆ. ನವ ಉದಾರೀಕರಣ ನೀತಿಗಳಿಂದ, ಮಹಿಳೆಯರು ಕುಟುಂಬದ ನಿರ್ವಹಣ, ಉದ್ಯೋಗ, ಉದ್ಯೋಗವನ್ನು ಉಳಿಸಿಕೊಳ್ಳಲು ಸಂಘಟನೆ ಹೀಗೆ ಇಂದು 3 ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ. ಇವರ ಅನುಭವ ಬಹಳ ರೋಮಾಂಚನ ಗೊಳ್ಳುವಂತಾದ್ದು.

ಫೆಬ್ರವರಿ 20–21ರ ಮುಷ್ಕರ ಇಡೀ ದೇಶವ್ಯಾಪಿಯಾಗಿ ನಡೆದಿದೆ. ಈ ಮುಷ್ಕರ ಕರ್ನಾಟಕದಲ್ಲಿಯೂ ಹೆಚ್ಚು ಯಶಸ್ವಿಯಾಗಿದೆ. ಈ ಯಶಸ್ವಿಗೆ ಈ ಅಸಂಘಟಿತ ಮಹಿಳಾ ನಾಯಕಿಯ ಪಾತ್ರ ಬಹಳ ಧೀರೋದಾತ್ತವಾಗಿದೆ.

ತಿಪಟೂರಿನಲ್ಲಿ ಫೆಬ್ರವರಿ 19ರ ಮಧ್ಯಾಹ್ನವಾದರೂ ತಾಲೂಕು ಆಡಳಿತ ಮೆರವಣಿಗೆ ತೆಗೆಯಲು ಅನುಮತಿ ಕೊಡಲಿಲ್ಲ. ಅನುಮತಿಗಾಗಿ ಒತ್ತಾಯಿಸಿದಾಗ ನೀವು ಏನೂ ಅನಾಹುತ ಆಗುವುದಿಲ್ಲ ಎಂದು ಬಾಂಡ್‌ನಲ್ಲಿ ಬರೆದು ಕೊಟ್ಟರೆ ಮಾತ್ರ ಅನುಮತಿ ಕೊಡುತ್ತೇವೆ ಎಂದಿದ್ದಾರೆ. ಅಲ್ಲಿ ಹೋಗಿದ್ದ ಅನುಸುಯಾ ಮತ್ತು ಇತರೆ ಅಂಗನವಾಡಿ ಸಂಘದ ನಾಯಕಿಯರು ಒಂದು ಕ್ಷಣವೂ ಯೋಚಿಸದೆ ಬಾಂಡ್‌ನಲ್ಲಿ ಸಹಿ ಮಾಡಿ ಕೊಟ್ಟೇ ಬಿಟ್ಟರು!

ಚಿತ್ತಾಪುರ ತಾಲೂಕಿನಲ್ಲಿ ಅನುಮತಿಗಾಗಿ ತಹಶೀಲ್ದಾರವರ ಬಳಿಗೆ ಹೋದರೆ ನೀವು ಮುಷ್ಕರ ಮಾಡಿದರೆ ಎಲ್ಲರನ್ನು ಕೆಲಸದಿಂದ ವಜಾ ಮಾಡುತ್ತೇವೆ ಎಂದು ಬೆದರಿಸಿದ್ದಾರೆ. ಆ ಬೆದರಿಕೆಗೆ ಹೆದರದೇ ಮರುದಿವಸ ಸುಮಾರು ನೂರಾರು ಅಂಗನವಾಡಿ–ಬಿಸಿಯೂಟ ಮಹಿಳೆಯರು ಸೇರಿ ರಸ್ತೆತಡೆ ನಡೆಸಿಯೇ ಬಿಟ್ಟರು.

ಯಾದಗಿರಿಯಲ್ಲಿ ಜಿಲ್ಲಾಧಿಕಾರಿಗಳ ಕಾರು ತಡೆದರೆಂದೂ ಕೋಪಗೊಂಡ ಜಿಲ್ಲಾಧಿಕಾರಿಗಳು ಅಂಗನವಾಡಿ ಸಂಘದ ತಾಲೂಕು ಮತ್ತು ಜಿಲ್ಲಾ ನಾಯಕತ್ವ

ಪೋಲೀಸರ ಮುಖಾಂತರ ಹೆದರಿಸಿದರು.

ಬಸವ ಕಲ್ಯಾಣದಲ್ಲಿ ಮುಷ್ಕರದ ದಿನ ಬೆಳಗಿನ ಜಾವ 5 ಘಂಟೆಗೆ ಬಸ್ ಡಿಪೋ ಬಳಿ ಸುಮಾರು 180 ಜನ ಅಂಗನವಾಡಿ, ಬಿಸಿಯೂಟ, ಪ್ಲಾಂಟೇಷನ್, ಬೀಡಿ, ಆಶಾ, ಮಹಿಳಾ ಹಮಾಲಿ ಕಾರ್ಮಿಕರು, ಕಾರ್ಖಾನೆಗಳ ಕಾರ್ಮಿಕರು, ಎಲ್ಐಸಿ-ಬ್ಯಾಂಕ್ ಮಹಿಳಾ ನೌಕರರು ಈ ಮುಷ್ಕರದಲ್ಲಿ ಪಾಲ್ಗೊಂಡಿದ್ದೇ ಅಲ್ಲದೆ ಪ್ರಚಾರಗಳ ಕಾರ್ಯದಲ್ಲಿ ರಾತ್ರಿ-ಹಗಲು ದುಡಿದಿದ್ದಾರೆ. ಬಹಿರಂಗ ಸಭೆಗಳಲ್ಲಿ ಮಾತನಾಡಿದ್ದಾರೆ.

ಹೀಗೆ ಭಾಗವಹಿಸುವಾಗಲೇ ಅವರ ಸಂಘಟನೆಗಳನ್ನು ಕಟ್ಟುವುದರಲ್ಲಿಯೂ ಮುಂಚೂಣಿಯಲ್ಲಿದ್ದಾರೆ. ಅಂಗನವಾಡಿ ನೌಕರರ ಸಂಘ ಕಟ್ಟುವಾಗ ಅದರಲ್ಲಿರುವ ಸುಧಾರಣಾವಾದಿ ಸಂಘಗಳ ವಿರುದ್ಧ ನಿರಂತರ ಪ್ರಚಾರ ನಡೆಸಿ ಸಿಐಟಿಯುಗೆ ಬಂದಿದ್ದಾರೆ.

ಪಿರಿಯಾ ಪಟ್ಟಣ, ಬಾಗೇಪಲ್ಲಿಯಲ್ಲಿ ಅಸ್ಪೃಶ್ಯತ್ವ ವಾಡಿಸುವ ಸಂದರ್ಭದಲ್ಲಿ ಆದ ಘರ್ಷಣೆಗಳಿಗೆ ಜಾತಿನಿಂದನೆ ಬಣ್ಣ ಕೊಟ್ಟು ದೂರುಗಳನ್ನು ಕೊಟ್ಟು, ಅಲ್ಲಿಯ ಸಂಗಾತಿಗಳು 1 1/2 ತಿಂಗಳು ಜಾಮೀನಿಗಾಗಿ ಹೋರಾಟ ನಡೆಸುವಂತಹ ಪರಿಸ್ಥಿತಿಯನ್ನು ಜಾತಿವಾದಿಗಳು ಸೃಷ್ಟಿಸಿದರು. ಶಿಡ್ಲಘಟ್ಟದಲ್ಲಿ ಕನ್ನಡ ಪರ ಎಂದು ಹೇಳಿಕೊಳ್ಳುವ ಸಂಘದ ಮಾನ ನಷ್ಟ ಮೊಕದ್ದಮೆ ದೂರುಗಳು. ಇದೆಲ್ಲವನ್ನು ಮಹಿಳೆಯರು ದಿಟ್ಟವಾಗಿ ಎದುರಿಸಿದರು.

ಸಂಘಟನೆಯ ಕೆಲಸಕ್ಕೆ ರಜೆ ಪಡೆಯುವುದೇನು ಕಾನೂನು ವಿರೋಧಿ ಅಲ್ಲ. ಕಾರ್ಮಿಕ ಕಾನೂನಿನಲ್ಲಿ ಅವಕಾಶ ಇದೆ. ಆದರೆ ಸಿಡಿಪಿಓಗಳು ಸಂಘಟನೆಯ ಕೆಲಸಕ್ಕೆ ಅನುಮತಿ ಕೊಡುವುದಿಲ್ಲ. ಹೀಗಾಗಿ ಸಂಘಟನೆಯ ಕೆಲಸಕ್ಕಾಗಿ ರಜೆ ಹಾಕುವುದು, ರಜೆ ಇಲ್ಲದಿದ್ದರೆ ಸಂಬಳರಹಿತ ರಜೆ ಹಾಕುವುದು ಇವರಿಗೆ ಮಾಮುಲು ಆಗಿದೆ. ಬೇರೆ ತಮ್ಮ ಸಂಘಟನೆ ಅಲ್ಲದೇ ಬೇರೆ ಸಂಘಟನೆಗಳಿಗೂ ಇಂದು ನಾಯಕತ್ವ ನೀಡುವ ಮಟ್ಟಕ್ಕೆ ಹಲವು ಸಂಗಾತಿಗಳು ಬೆಳೆದಿದ್ದಾರೆ.

ಸಿಐಟಿಯುವಿನ ರಾಜ್ಯ ಸಮ್ಮೇಳನ ಶಿರಸಿಯಲ್ಲಿ ನಡೆದಾಗ ಬಿಜೆಪಿಯವರು, ಅಕ್ರಮ ಹಣ ವಸೂಲಿ ಮಾಡುತ್ತಿದ್ದಾರೆಂದೂ ಈ ಕಾರ್ಯಕರ್ತೆಯರ ಬಗ್ಗೆ ಆರೋಪಮಾಡಿ ಪತ್ರಿಕೆಯಲ್ಲಿ ಇಲ್ಲಸಲ್ಲದ್ದು ಬರುವಂತಾದಾಗ ಪರಿಸ್ಥಿತಿಯನ್ನು ದಿಟ್ಟವಾಗಿಯೇ ಎದುರಿಸಿದರು. ಇಲಾಖೆ ಅಧಿಕಾರಿಗಳ ಕಟ್ಟು ನಿಟ್ಟಿನ ಅಜ್ಞೆ ಹೇಳಿದರೂ ನೌಕರರು ತಮ್ಮ ಸಂವಿಧಾನ ಬದ್ಧ ಹಕ್ಕು ಚಲಾಯಿಸಿದ್ದಾರೆ. ಸಮ್ಮೇಳನದ ಯಶಸ್ಸಿಗೆ ದುಡಿದಿದ್ದಾರೆ.

ಅದೇ ರೀತಿ ಬಿಸಿಯೂಟ ಸಂಘಟನೆಯಲ್ಲಿ ಕೊಪ್ಪಳದಲ್ಲಿದ್ದಂತಹ ಸಂಗಾತಿ ಪುಷ್ಪಲತಾ, (ಇಂದು ಅವರು ತೀರಿ ಕೊಂಡಿದ್ದಾರೆ.) 300 ರೂಗಳಿಗೆ ದುಡಿಯುವ ಒಬ್ಬ ಬಿಸಿಯೂಟ ಮಹಿಳೆ ನಾಯಕತ್ವವನ್ನು ತೆಗೆದು ಕೊಂಡು ತಾಲೂಕು, ಜಿಲ್ಲೆಯಲ್ಲಿ ಅಷ್ಟೇ ಅಲ್ಲದೇ ಗದಗ, ಬಾಗಲಕೋಟೆ ಮತ್ತು ಬಿಜಾಪುರಗಳಲ್ಲಿ ಸಂಘಟನೆ ಕಟ್ಟಿದ್ದು! ನಿಜಕ್ಕೂ ಮೆಚ್ಚಬೇಕಾದ ವಿಚಾರ. ಹಾಗೆಯೇ ಮಂಡ್ಯದಲ್ಲಿ ಒಬ್ಬ ಬಿಸಿಯೂಟ ಸಂಗಾತಿ ಕೆಲಸ ಬಿಟ್ಟು ಸಿಐಟಿಯು ಸಂಘಟನೆಯ ಪೂರ್ಣ ಕಾಲದ ಕಾರ್ಯಕರ್ತೆಯಾಗಿದ್ದಾರೆ.

ಸಿಐಟಿಯೂ 10 ಸಾವಿರ ಕನಿಷ್ಠ ಕೂಲಿ ಮತ್ತು ಇತರ ಬೇಡಿಕೆಗಳ ಆಧಾರದಲ್ಲಿ ಹೋರಾಟ ನಡೆಸುತ್ತಿದ್ದಾಗ ಪ್ಲಾಂಟೇಶನ್‌ನಲ್ಲಿ ಒಬ್ಬ ಚಿಕ್ಕ ವಯಸ್ಸಿನ ಹುಡುಗಿ, ಆಕೆಗೆ 'ನಾನು ಗುತ್ತಿಗೆಯಲ್ಲಿ ದುಡಿಯುತ್ತಿದ್ದೇನೆ. ನನ್ನ ಕೆಲಸ ಖಾಯಂ ಅಗಬೇಕು? ಖಾಯಂ ಆಗಬೇಕಾದರೆ ಸಂಘಟನೆ ವಿಸ್ತರಿಸಬೇಕು.' ಎಂಬ ಪ್ರಬುದ್ಧ ತಿಳುವಳಿಕೆ. ಸಂಘಟನೆ ತೀರ್ಮಾನಿಸಿದರೆ ಸಾಕು ಕೆಲಸಕ್ಕೆ ರಜೆ ಹಾಕಿ ಅಟೋ ಹತ್ತಿ ಮೈಕ್ ಹಿಡಿದೇ ಕಾಡಿನಲ್ಲಿರುವ ಹತ್ತಾರು ಪ್ಯಾಂಟೇಶನ್‌ಗಳಲ್ಲಿ ಭಾಷಣ ಮಾಡುತ್ತಾಳೆ. ಕಿತ್ತು ತಿನ್ನುವ ಬಡತನವಿದ್ದರೂ ಸಂಘಟನೆ



ಮತ್ತು ಹೋರಾಟಗಳಲ್ಲಿ ಯಾವಾಗಲೂ ಮುಂದೆ.

ಬೆಳ್ತಂಗಡಿಯಲ್ಲಿರುವ ಬೀಡಿ ಕಾರ್ಮಿಕ ಸಂಘಟನೆಯಲ್ಲಿರುವ ಪುಟ್ಟ ಸಂಗಾತಿಗಳು ಈಶ್ವರಿ, ರೋಹಿಣಿ ವಸತಿ ರಹಿತರಿಗೆ ವಸತಿ ನಿವೇಶನ-ವಸತಿ ಕೊಡಬೇಕೆಂದೂ ಒತ್ತಾಯಿಸಿ ಪ್ರತಿಭಟನೆ ಮಾಡುತ್ತಿದ್ದಾಗ ಆರ್‌ಎಸ್‌ಎಸ್ ಗೂಂಡಾಗಳು ಅಲ್ಲಿಯ ನಾಯಕಿ ರೋಹಿಣಿಗೆ ಹೊಡೆದಿದ್ದಾರೆ. ಆದರೆ ಈಕೆ ಹೆದರಿದಳಾ ? ಇಲ್ಲ. ಹೋರಾಟ ಇನ್ನೂ ಜೋರಾಗಿದೆ.

ಹೋರಾಟಗಳಲ್ಲಿ ಮುಂಚೂಣಿ ಪಾತ್ರ :

ತಮ್ಮ ಬೇಡಿಕೆಗಳಿಗಾಗಿ ಸಿಐಟಿಯು ರೂಪಿಸಿದ ಹೋರಾಟಗಳಲ್ಲಿ ಇಂದು ಹೆಚ್ಚು ದುಡಿಯುವ ಮಹಿಳೆಯರು ಪಾಲ್ಗೊಳ್ಳುತ್ತಿದ್ದಾರೆ. ಇವರು ಕೇವಲ ಮೆರವಣಿಗೆಯಲ್ಲಿ ಬರುವವರಷ್ಟೇ ಅಲ್ಲ!

ಅಂಗನವಾಡಿ ನೌಕರರಿಗೆ ಹೊಸ ನಿವೃತ್ತಿ ಯೋಜನೆಯನ್ನು ರಾಜ್ಯ ಸರ್ಕಾರ ಜಾರಿ ಮಾಡಿತು. ತಾರತಮ್ಯದಿಂದ ಕೂಡಿದ ಮತ್ತು ನೌಕರರ ಬದುಕನ್ನು ಅಭದ್ರತೆಗೆ ನೂಕುವ ಈ ಯೋಜನೆ ಬೇಡವೆಂದೂ ಮತ್ತು ಮುಷ್ಕರದ ಹಕ್ಕು ಅಂಗನವಾಡಿ ನೌಕರರಿಗೆ ಇಲ್ಲ ಎಂದೂ ರಾಜ್ಯದ ಬಿಜೆಪಿ ಸರ್ಕಾರ ತೆಗೆದುಕೊಂಡ ತೀರ್ಮಾನದ ವಿರುದ್ಧ ಮುಖ್ಯಮಂತ್ರಿ ಮನೆಗೆ ಮುತ್ತಿಗೆ ಹಾಕಲಾಯಿತು.

ಈ ಹೋರಾಟದಲ್ಲಿ ಸಾವಿರಾರು ಜನರು ಮುಖ್ಯಮಂತ್ರಿಗಳ ಮನೆ ಎದುರು ನೆರೆದರು. ಅದರಲ್ಲಿ ಮಾಲೂರಿನ ಸಂಗಾತಿ ಲೋಕೇಶ್ವರಿಯನ್ನು ಪೊಲೀಸರು ಜೀಪಿನೊಳಗೆ ತಳ್ಳಿ ಹಿಗ್ಗಾ-ಮುಗ್ಗಾ ಥಳಿಸಿದರು! ಅದೇ ಲೋಕೇಶ್ವರಿ ಇಂದು ಇನ್ನಷ್ಟು ಗಟ್ಟಿಯಾದ ಸಂಘಟನೆಯ ಕಾರ್ಯಕರ್ತೆಯಾದಳು.

2009 ರಲ್ಲಿ ಗುಲ್ಬರ್ಗಾದಲ್ಲಿ ಕನಿಷ್ಠ ಕೂಲಿಗಾಗಿ ನಡೆದ ಹೋರಾಟದಲ್ಲಿ ಮಹಿಳೆಯರಿಗೆ ಪೊಲೀಸರು ಹಿಗ್ಗಾಮುಗ್ಗ ಹೊಡೆದರು. ಸೀರೆ ಅಸ್ತವ್ಯಸ್ತವಾಗಿದ್ದರೂ ಕೂಡಾ ಅದನ್ನು ಸರಿಮಾಡಿಕೊಳ್ಳಲು ಬಿಡದೆ ಕಾರಾಗೃಹಕ್ಕೆ ಹಾಕಿದ್ದರು. ಸುಮಾರು 14 ಅಂಗನವಾಡಿ ಸಂಗಾತಿಗಳು ಇಂದಿಗೂ ಕೋರ್ಟಿಗೆ ಹೋಗಿ ಬರುತ್ತಿದ್ದಾರೆ. ಅವರು ಜಗ್ಗಲಿಲ್ಲ. ಬೆಂಗಳೂರಿನ ಕೊನೆಗಾ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಕೆಲಸದಿಂದ ವಜಾ ಮಾಡಿದ್ದನ್ನು ವಿರೋಧಿಸಿ 2-3 ತಿಂಗಳು ಕಾಲ ಮನೆ-ಮಾರು ಬಿಟ್ಟು ಮಹಿಳಾ ಕಾರ್ಮಿಕರು ಕಾರ್ಖಾನೆ ಬಳಿ ಕುಳಿತು ಹೋರಾಟ ನಡೆಸಿದರು.

ಬಿಸಿಯೂಟ ಮಹಿಳೆಯರು ತಮಗೆ 300 ರೂ ಸಾಕಾಗುವುದಿಲ್ಲ, ಕೂಲಿ ಹೆಚ್ಚಳ ಮಾಡಬೇಕೆಂದು 5-6 ದಿನಗಳ ಕಾಲ ಹೋರಾಟ ಮಾಡಿದರು. ಈ ಹೋರಾಟಕ್ಕೆ ಹಣವಿರಲಿಲ್ಲ. 5-6 ದಿನಗಳ ಕಾಲ ಕೆಲಸಕ್ಕೆ ಹೋಗದಿದ್ದರೆ ಕೆಲಸದಿಂದ ತೆಗೆಯುವ ಭೀತಿ. ಇವು ಏನೇ ಇದ್ದರೂ, ಅವರು ಪ್ರತಿ ದಿನ ಬೆಂಗಳೂರಿನಲ್ಲಿ ಡಬ್ಬ ಹಿಡಿದು ಹಣ ಸಂಗ್ರಹಿಸಿ, ದಿನಕ್ಕೆ ಒಂದು ಬಾರಿ ಅಡುಗೆ ಮಾಡಿ, ರಾತ್ರಿಯಿಡೀ ಬನಪ್ಪಪಾರ್ಕ್‌ನಲ್ಲಿಯೇ ಮಲಗಿದರು. ಇಂಥ ದಿಟ್ಟ ಹೋರಾಟ ನಡೆಸುವುದು ಸಾಮಾನ್ಯ ವಿಷಯವೇ !!

ಇದೇ ಮಹಿಳೆಯರು ಕೇಂದ್ರ ಸರ್ಕಾರದ ನೀತಿಗಳನ್ನು ಪ್ರತಿಭಟಿಸಲು ದೆಹಲಿಯ ಹೋರಾಟಗಳಿಗೆ ಹೋಗುವಾಗ ಪಡುವ ಪಾಡೇನು ? ಬೆಂಗಳೂರಿನಿಂದ 48 ಗಂಟೆಗಳ ಪ್ರಯಾಣ, ಕುಳಿತುಕೊಳ್ಳಲು ಸ್ಥಳವಿಲ್ಲ. ಊಟ ಮಾಡಿದರೆ, ನೀರು ಕುಡಿದರೆ ಶೌಚಾಲಯಕ್ಕೆ ಹೋಗಬೇಕು. ಶೌಚಾಲಯದ ತನಕ ಹೋಗಲು ಸಾಧ್ಯವಿಲ್ಲ. ಅಷ್ಟರ ಮಟ್ಟಿಗೆ ರೈಲಿನಲ್ಲಿ ಜನ ತುಂಬಿರುತ್ತಾರೆ. ಆದ್ದರಿಂದ ಜೀವ ಹಿಡಿದು ಕೊಳ್ಳುವಷ್ಟೇ ಆಹಾರ ತೆಗೆದು ಕೊಳ್ಳುವುದು. ಇಷ್ಟು ಬಗೆಯ ಕಷ್ಟಗಳು. ಅದರೂ ಕೂಡಾ ಅದನ್ನ ಎದುರಿಸಿ ಇವರು ದೆಹಲಿಯಲ್ಲಿ ಮಾಡುವ ಹೋರಾಟ ಕಾರ್ಮಿಕ ಚಳುವಳಿಯಲ್ಲಿಯೇ ದಾಖಲು ಮಾಡಬೇಕಾದ್ದು!.

ಹಾಡು, ಕುಣಿತ, ಭಾಷಣಗಳಲ್ಲಿ ಮುಂದೆ!

ಈ ಮಹಿಳೆಯರು ಒಳ್ಳೆಯ ಹಾಡುಗಾರರು, ಅಲ್ಲಿಂದಲ್ಲಿಯೇ ಸಮಸ್ಯೆ-ಸಂದರ್ಭಗಳ ಮೇಲೆಯೇ ಕವಿತೆಯನ್ನು ಕಟ್ಟುತ್ತಾರೆ, ಹಾಡುತ್ತಾರೆ. ನಾಗಮಂಗಲ ಮತ್ತು ಉ.ಕನ್ನಡ ಜಿಲ್ಲೆಗಳಲ್ಲಿ ಪೌರಾಣಿಕ ನಾಟಕ ಮತ್ತು ಯಕ್ಷಗಾನಗಳು ಪುರುಷರಿಗಷ್ಟೇ ಸೀಮಿತವಲ್ಲ ಎಂದು ಅಲ್ಲಿಯವರು 'ವೀರ ಅಭಿಮನ್ಯು' ಎಂಬ ಪೌರಾಣಿಕ ನಾಟಕವನ್ನು ಅಂಗನವಾಡಿ ಮಹಿಳೆಯರೇ ನಾಯಕತ್ವ ತೆಗೆದುಕೊಂಡು ಯಶಸ್ವಿಯಾಗಿ 3-4 ಪ್ರದರ್ಶನಗಳನ್ನು ಕೊಟ್ಟಿದ್ದಾರೆ. ಅವರು ಕೇವಲ ತಮ್ಮ ಸಂಘಟನೆಗಳನ್ನು ಕಟ್ಟುವುದಷ್ಟೇ ಅಲ್ಲದೇ ಸಿಐಟಿಯು ವಿನ ನಾಯಕರಾಗಿ ಎಲ್ಲ ವೇದಿಕೆಗಳಲ್ಲಿ ಪ್ರತಿನಿಧಿಸಿ ಪಾಲ್ಗೊಳ್ಳುತ್ತಾರೆ. ಮಾತಾನಾಡುತ್ತಾರೆ.

ಕುಂದಾಪುರದ ಸುಶೀಲ ಅಂಗನವಾಡಿ ಕಾರ್ಯಕರ್ತೆಯಾಗಿದ್ದುಕೊಂಡೇ ಕೊರಗ ಜನಾಂಗ (ಆದಿವಾಸಿ) ನಾಯಕಿಯಾಗಿ ದುಡಿಯುತ್ತಿದ್ದಾರೆ. 103ನೇ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಮಂಗಳೂರಿನಲ್ಲಿ. ಪ್ರಖ್ಯಾತ ಸಾಹಿತಿಗಳು, ಹೋರಾಟಗಾರ್ತಿಯರು ಪಾಲ್ಗೊಂಡ ಕಾರ್ಯಕ್ರಮ. ಅದರ ಉದ್ಘಾಟನೆ ಸುಶೀಲರದ್ದು.

ಹೀಗೆ ಇದು ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲದೇ ದೇಶದ ಹಲವಾರು ರಾಜ್ಯಗಳಲ್ಲಿಯೂ ಕೂಡಾ ಈ ಅಸಂಘಟಿತ ವಿಭಾಗದ ಮಹಿಳೆಯರು ಮತ್ತು ಕೆಲವೆಡೆ ಸಂಘಟಿತ ಕ್ಷೇತ್ರಗಳಾದ ಬ್ಯಾಂಕ್ ನೌಕರರ ಸಂಘ, ಎಲ್ಐಸಿ ನೌಕರರ ಸಂಘ, ಅಂಚೆ ಇಲಾಖೆ ನೌಕರರ ಸಂಘ, ರಕ್ಷಣಾ ಸಾಧನಗಳ ಉತ್ಪಾದನೆಯ ವಲಯದ ಕಾರ್ಮಿಕರ ಸಂಘದಲ್ಲಿ, ಸರ್ವೆ ಇಲಾಖೆಯ ನೌಕರರ ಸಂಘ ಹಮಾಲಿ ಸಂಘ ಮುಂತಾದವುಗಳಲ್ಲಿ ಕರ್ನಾಟಕದಲ್ಲಿ ಇಂದಿಗೂ ಮಹಿಳೆಯರೇ ಇದರ ಮುಖ್ಯ ನಾಯಕಿಯರು ಆಗಿದ್ದಾರೆ.

ಮಹಿಳೆಯರು ಕೆಲವು ಸ್ವಯಂ-ಸೇವಾ ಸಂಘಟನೆಗಳಲ್ಲಿ ಮಾತ್ರವೇ ನಾಯಕಿಯರು ಅಥವಾ ಕಾರ್ಯಕರ್ತರು ಆಗಿರುವುದಲ್ಲ. ಇಂದಿನ ಕಾರ್ಮಿಕ ಚಳುವಳಿಯಲ್ಲಿ ಮಹಿಳಾ ಚಳುವಳಿ ಮತ್ತು ಪ್ರಜಾಸತ್ತಾತ್ಮಕ ಚಳುವಳಿಗಳಲ್ಲಿ ದಾಖಲು ಆಗಲೇಬೇಕಾಗಿದೆ.

ನವ ಉದಾರೀಕರಣದ ನೀತಿಗಳ ಪರಿಣಾಮವಾಗಿ ಕಣ್ಮರೆಯಾಗುತ್ತಿರುವ ಮಹಿಳಾ ಸವಲತ್ತುಗಳನ್ನು ಮತ್ತೆ ಪಡೆಯಲು ಮತ್ತು ಸಮಾನತೆಯ ಬದುಕಿಗಾಗಿ ಮತ್ತಷ್ಟು ಈ ಪ್ರಕ್ರಿಯೆ ಇನ್ನಷ್ಟು ಬಲಗೊಳ್ಳಬೇಕಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

'ಪೂರ್ಣ ಸಂತೃಪ್ತಿಗೆ ನಮ್ಮಲ್ಲಿ ಜಾಗವಿಲ್ಲ....' ಮಾಣಿಕ್

ಪುಟ 2 ರಿಂದ

ಉದ್ಯಮಿಗಳು ಗುರುತಿಸುತ್ತಿದ್ದಾರೆ.

ನಾವು ದೇಶದ ಹಲವಾರು ಕಡೆ ವ್ಯಾಪಕವಾಗಿ ಭ್ರಷ್ಟಚಾರದ ಹಗರಣಗಳನ್ನು ಕಾಣುತ್ತೇವೆ. ರಾಜಕೀಯ ಕ್ಷೇತ್ರ ಮತ್ತು ಆಡಳಿತ ಯಂತ್ರ ಭ್ರಷ್ಟಗೊಂಡಿವೆ. ಇಲ್ಲಿ ಪರಿಸ್ಥಿತಿ ಹೇಗಿದೆ? ಭ್ರಷ್ಟಾಚಾರವನ್ನು ಎದುರಿಸುವಲ್ಲಿ ಕೈಗೊಂಡಿರುವ ಕ್ರಮಗಳೇನು?ಯಾವುದಾದರೂ ಸಂಸ್ಥೆ ಇದೆಯೇ? ಉದಾ: ನಮ್ಮಲ್ಲಿ ಲೋಕಾಯುಕ್ತ ಇದೆ......

ನಮ್ಮಲ್ಲಿಯೂ ಲೋಕಾಯುಕ್ತ ಇದೆ. ಆದರೆ ಭ್ರಷ್ಟಾಚಾರ ತಡೆಯಲು ಅದಷ್ಟೇ ಮುಖ್ಯವಾಗೋಲ್ಲ. ಮುಖ್ಯವಾಗಿ, ರಾಜಕೀಯ ಸಂಸ್ಕೃತಿ, ಪಾರದರ್ಶಕ ವ್ಯವಸ್ಥೆ, ಅಂತಹ ಒಂದು ವಾತಾವರಣ ಬೇಕು. ಯಾರು ಸರ್ಕಾರವನ್ನು ನಡೆಸುತ್ತಾರೋ ಅವರು ಶುದ್ದರಾಗಿರಬೇಕು, ನುಡಿ ನಡೆ ಪ್ರಾಮಾಣಿಕ ಹಾಗೂ ಪಾರದರ್ಶಕವಾಗಿರಬೇಕು. ಆಡಳಿತದಲ್ಲಿನ ಭ್ರಷ್ಟಾಚಾರ ಮೇಲಿನಿಂದ ಕೆಳಗೆ ಹರಿಯುತ್ತದೆ. ನಾವು ಅಧಿಕಾರ ನಡೆಸುವವರು ಶುದ್ಧವಾಗಿದ್ದಲ್ಲಿ ಪ್ರಾಮಾಣಿಕವಾಗಿದ್ದಲ್ಲಿ ಅಧಿಕಾರಶಾಹಿಯೂ ಅದನ್ನೇ ಅನುಸರಿಸಬೇಕಾಗುವುದು. ಒಂದು ವೇಳೆ ಅಂತಹ ಯಾವುದಾದರೂ ಭ್ರಷ್ಟಾಚಾರದ ದೂರುಗಳು ಬಂದರೆ ಅದನ್ನು ನಾವು ಗಂಭೀರವಾಗಿ ಪರಿಗಣಿಸಿ ತಕ್ಷಣ ವಿಚಾರಣೆ ನಡೆಸಿ ನಿಷ್ಟುರ ಕ್ರಮ ಕೈಗೊಳ್ಳುತ್ತೇವೆ. ಭ್ರಷ್ಟಾಚಾರದೊಂದಿಗೆ ಯಾವುದೇ ರಾಜಿ ಪ್ರಶ್ನೆಯೇ ಇಲ್ಲ. ಇದು ನಮ್ಮ ರಾಜಕೀಯ ಸಂಸ್ಕೃತಿಯೂ ಹೌದು. ಈ ಸಂಗತಿ ಇಡೀ ದೇಶಕ್ಕೆ ಗೊತ್ತು. ತ್ರಿಪುರಾ ಭ್ರಷ್ಟಾಚಾರ ರಹಿತವಾದ, ಪಾರದರ್ಶಕತೆಯುಳ್ಳ ರಾಜ್ಯ ಎಂದು.

ತ್ರಿಪುರಾದ ಸುತ್ತಲಿನ ರಾಜ್ಯಗಳಲ್ಲಿಯೂ, ಇದರ ಗಡಿಗೆ ಹೊಂದಿಕೊಂಡಿರುವ ದೇಶಗಳಲ್ಲಿಯೂ ಭಯೋತ್ಪಾದನೆ, ಉಗ್ರಗಾಮಿಗಳ ಹಾವಳಿ ಇದೆ. ಇದರ ಪರಿಣಾಮ ತ್ರಿಪುರಾದ ಮೇಲೆ ಹೇಗಾಗಿದೆ?.

ಹೌದು! ಇದೆ. ಇಂದು ಭಯೋತ್ಪಾದನೆ, ಉಗ್ರಗಾಮಿಗಳ ಹಾವಳಿ ಜಾಗತಿಕ ಕಾರಣಗಳಿರುವ ಸಮಸ್ಯೆ ಕೂಡ. ಇದರ ಎಲ್ಲಾ ಆಯಾಮಗಳನ್ನು ಜನತೆಗೆ ವಿವರಿಸಿ ಜಾಗೃತಗೊಳಿಸಿದ್ದೇವೆ. ಆ ಬಗ್ಗೆ ವ್ಯಾಪಕವಾಗಿ ಪ್ರಚಾರಾಂದೋಲನ ನಡೆಸಿದ್ದೇವೆ. ಉಗ್ರಗಾಮಿತ್ವವನ್ನು ಎದುರಿಸಲು ಸೈದ್ಧಾಂತಿಕವಾಗಿ, ರಾಜಕೀಯವಾಗಿ ಮತ್ತು ಆಡಳಿತಾತ್ಮಕವಾಗಿಯೂ ಕ್ರಮಗಳನ್ನು ಕೈಗೊಂಡಿದ್ದೇವೆ. ಇದರಲ್ಲಿ ಜನಸಮೂಹಗಳನ್ನು ತೊಡಗಿಸಿ, ಹಿಮ್ಮೆಟ್ಟಿಸಿದ್ದೇವೆ.

ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಪ್ರಚಾರವೇನಿತ್ತು?

ಕಾಂಗ್ರೆಸ್ ಪಕ್ಷ 'ಮನಿ, ಮಸಲ್ ಅಂಡ್ ಮೀಡಿಯಾ' (ಹಣ, ತೋಳ್ಬಲ ಮತ್ತು ಮಾಧ್ಯಮ) ಶಕ್ತಿಯನ್ನು ಎಡರಂಗ ಮತ್ತು ಸರ್ಕಾರದ ವಿರುದ್ದ ಬಳಸಿತು. ಹತ್ತಾರು ಸುಳ್ಳುಗಳ ಪ್ರಚಾರ ಧಾಳಿ ನಡೆಸಿತು. ಆದರೆ ನಾವು ನಿಜ ಸಂಗತಿಗಳನ್ನು ಜನರ ನಡುವೆ ವಿವರಿಸಿ ಬಯಲಿಗೆಳೆದೆವು. ಪ್ರಜಾಸತ್ತಾತ್ಮಕ ಜನ ವಿಭಾಗಗಳನ್ನು ಒಂದಾಗಿಸಿದೆವು. ನಮ್ಮ ಸೈದ್ಯಾಂತಿಕ, ರಾಜಕೀಯ ನಿಲುವುಗಳ ಆಧಾರದಲ್ಲಿ ಪ್ರತ್ಯುತ್ತರ ನೀಡಿದೆವು. ಹೀಗಾಗಿ ಮತದಾರರನ್ನು ಹೆಚ್ಚು ಮರುಳು ಮಾಡಲಾಗಲಿಲ್ಲ.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಜಾರಿಯಲ್ಲಿ ತ್ರಿಪುರಾ ಅನುಭವ ಅತ್ಯುತ್ತಮವಾಗಿದೆಯೆಂದು ಪ್ರಶಂಸೆ ವ್ಯಕ್ತವಾಗಿದೆ. ಹಾಗೆಯೇ ವಸತಿ ಪ್ರಶ್ನೆಯನ್ನು ಪರಿಹರಿಸಲು ಹೇಗೆ ಕ್ರಮ ವಹಿಸಿದ್ದೀರಿ? ನಮ್ಮಲ್ಲಿ ಇದು ಗಂಭೀರ ಪ್ರಶ್ನೆಯಾಗಿದೆ. ಚಳುವಳಿಯೂ ನಡೆದಿದೆ...

ನಮ್ಮಲ್ಲಿ ವಸತಿ ವ್ಯವಸ್ಥೆ ಉತ್ತಮವಿದೆ. ಆದರೂ ಸಮಸ್ಯೆ ಇನ್ನೂ ಇದೆ. ನಮಗೆ ಕೇಂದ್ರದಿಂದ ಹೆಚ್ಚಿನ ನೆರವು ಬೇಕು. ಕೇಂದ್ರ ಸರ್ಕಾರದ ಯೋಜನೆಗಳನ್ನು ಸದ್ಬಳಕೆ ಮಾಡಿದ್ದೇವೆ. ಅವರು ಇಲ್ಲಿ ಕೋಟಾ ನಿಗದಿ ಮಾಡಿರುವುದು ಒಂದು ತೊಂದರೆ.

ನಿವೇಶನ ಮತ್ತು ಮನೆ ಕಟ್ಟಿ ಕೊಡಲು ರಾಜ್ಯ ಸರಕಾರ ಏನಾದರೂ ಕ್ರಮ ವಹಿಸಿದೆಯೇ?

ಬಿ.ಪಿ.ಎಲ್. ಕುಟುಂಬಗಳಿಗೆ ರಾಜ್ಯ ಸರ್ಕಾರ ಉಚಿತವಾಗಿ ನಿವೇಶನ ನೀಡಿದೆ. ಮನೆ ಕಟ್ಟಲು ಸರಕಾರದ ನೆರವು ಇದೆ. ಇಂದಿರಾ ಆವಾಸ್ ಯೋಜನೆ, ಇತ್ಯಾದಿಗಳನ್ನು ಬಳಸುತ್ತಿದ್ದೇವೆ.

ಪ್ರಶ್ನೆ : ಸರ್ಕಾರದ ಆಯ–ವ್ಯಯಕ್ಕಾಗಿ ಹಣ ಸಂಪನ್ಮೂಲ ಸಂಗ್ರಹ, ನಿರ್ವಹಣೆ ಹೇಗಿದೆ?

ನಾವು ಗ್ರಾಮೀಣ ಕೃಷಿಕರ ಮೇಲೆ ಭೂ ಕಂದಾಯ, ತೆರಿಗೆ ವಿಧಿಸುವುದಿಲ್ಲ ಉಳಿದಂತೆ ತೆರಿಗೆ ಸಂಗ್ರಹ ನಮ್ಮ ಪ್ರಮುಖ ಆದಾಯ. ನಾವು ವೆಚ್ಚಗಳನ್ನು ಕಡಿತಮಾಡುವ ಕ್ರಮಗಳನ್ನು (Austerity Measures) ಆರಂಭದಿಂದಲೂ ಕೈ ಗೊಂಡಿದ್ದೇವೆ. ಬಂದ ಹಣದಲ್ಲಿ ಪ್ರತಿಯೊಂದು ಪೈಸೆಯನ್ನು ಜನರಿಗಾಗಿ ವಿನಿಯೋಗಿಸುತ್ತೇವೆ. ನಾವು ಆದ್ಯತೆಗಳಾಧಾರದಲ್ಲಿ ಜಾಗ್ರತಿಯಿಂದ, ಗಂಭೀರವಾಗಿ ಖರ್ಚು ಮಾಡುತ್ತೇವೆ. ನಮಗೆ ಹಲವಾರು ಮಿತಿಗಳಿವೆ. ನಾವೀಗ ಆದಾಯದ ಜಾಲವನ್ನು ವಿಸ್ತರಿಸಲು ಪ್ರಯತ್ನಿಸುತ್ತಿದ್ದೇವೆ.

ಒಂದು ರಾಜಕೀಯ ಪ್ರಶ್ನೆ: ಇಷ್ಟು ವರುಷಗಳು ನಿರಂತರವಾಗಿ ರಾಜ್ಯದಲ್ಲಿ ಎಡರಂಗದ ಸರ್ಕಾರವಿರುವಾಗ ಈಗಲೂ ಕಾಂಗ್ರೆಸ್ ರಾಜ್ಯದಲ್ಲಿ ಶೇ. 47% ರಷ್ಟು ಜನ ಬೆಂಬಲವನ್ನು ಕಾಯ್ದುಕೊಂಡಿದೆ. ಈ ಸ್ಥಿತಿಗೆ ಕಾರಣವಾದ ಅಂಶಗಳೇನು? ನೆಲೆ ವಿಸ್ತರಣೆಗೆ ಕ್ರಮಗಳೇನು?

ಇದು ಅಸಹಜವಾದದ್ದೇನಲ್ಲ. ಕಾಂಗ್ರೆಸ್‌ಗೆ ದೇಶದಲ್ಲಿ ಇರುವಂತೆ ಇಲ್ಲೂ ಬೆಂಬಲವಿದೆ. ಕೇಂದ್ರದಲ್ಲಿ ಅದು ಅಧಿಕಾರದಲ್ಲಿದೆ, ಸಾಕಷ್ಟು ಬಲವಿದೆ, ಅಪಾರ ಸಂಪನ್ಮೂಲಗಳಿವೆ. ಹಣ, ಮಾಧ್ಯಮಗಳ ಮೇಲೆ ಅದರ ಹಿಡಿತವಿದೆ. ಮುಖ್ಯವಾಗಿ ವರ್ಗ ಸಮಾಜದಲ್ಲಿ ಇದು ಸಹಜವೂ ಹೌದು. ಆದರೆ ನಾವು ಈ ಸವಾಲುಗಳ ವಿರುದ್ದ ಹೋರಾಡುತ್ತಾ ಅವರನ್ನು ಹಂತ ಹಂತವಾಗಿ ಸೋಲಿಸುತ್ತ ನಮ್ಮ ಬೆಂಬಲದ ನೆಲೆಯನ್ನು ವಿಸ್ತರಿಸುತ್ತಾ ಹೋಗಬೇಕು. ಈಗ ಅದರ ವಿಸ್ತರಣೆ–ಯಾಗುತ್ತಿದೆ. ಮುನ್ನಡೆಯಲು ನಾವು ಇನ್ನಷ್ಟು ಕ್ರಮ ವಹಿಸುತ್ತೇವೆ.

ಈ ಕಾಲಘಟ್ಟದಲ್ಲಿ ಯುವಜನರ ಸಂ–ಖ್ಯೆ ಹೆಚ್ಚುತ್ತಿದೆ. ಮಧ್ಯಮ ವರ್ಗದ ಬೆಳವಣಿಗೆಯೂ ಆಗುತ್ತಿದೆ. ಅಂ–ದರೆ ಅವರ ನಿರೀಕ್ಷೆಗಳೂ ಬೆಳೆಯುತ್ತಿವೆ. ತ್ರಿಪುರಾದ ಸನ್ನಿವೇಶದಲ್ಲಿಯೂ ಈ ಹೊಸ ಬೆಳವಣಿಗೆಗಳಾಗುತ್ತಿವೆ. ಈ ಹೊಸ ಸನ್ನಿವೇಶವನ್ನು ಹೇಗೆ ಎದುರಿಸುತ್ತೀರಿ? ಇದು ಸವಾಲು ಅಲ್ಲವೇ?

ಚುನಾವಣೆಯ ಸಂದರ್ಭದಲ್ಲಿ ಯುವಜನರು ಉತ್ಸಾಹವಾಗಿ ಕಾರ್ಯನಿರ್ವಹಿಸಿದ್ದಾರೆ. ನಾವು ಯುವಜನರು ಹಾಗೂ ಮಧ್ಯಮವರ್ಗದ ಜನರ ನಡುವೆ ನಿರಂತರ ಕೆಲಸ ಮಾಡುತ್ತಿದ್ದೇವೆ. ಅವರ ಪ್ರಜಾಸತ್ತಾತ್ಮಕ ಸಂಘಟನೆಗಳ ಮೂಲಕ ಅವರನ್ನು ತಲುಪಲು ಪ್ರಯತ್ನಿಸಲಾಗುತ್ತಿದೆ. ಯಶಸ್ಸನ್ನೂ ಕಂಡಿದ್ದೇವೆ. ಆದರೆ ಇದು ಅತ್ಯಂತ ಕಠಿಣವಾದ ಕೆಲಸ. ನಾವು ಸೂಕ್ತ ಗಮನ, ಎಚ್ಚರ ವಹಿಸದಿದ್ದಲ್ಲಿ ಹೆಚ್ಚಿನ ಸಮಸ್ಯೆ ಎದುರಾಗಬಹುದು. ಆದ್ದರಿಂದಲೇ ತಾಳ್ಮೆ, ಶ್ರದ್ದೆಯಿಂದ ಈ ವಿಭಾಗಗಳ ನಡುವೆ ಕೆಲಸ ಮಾಡುತ್ತಿದ್ದೇವೆ.

ರಾಜ್ಯದಲ್ಲಿ ಕೈಗಾರಿಕೆಗಳ ಸ್ಥಿತಿಯೇನು ಮತ್ತು ಉದ್ಯೋಗದ ಸ್ಥಿತಿ ಹೇಗಿದೆ?

ಜನರ ಜೀವನಮಟ್ಟವನ್ನು ಮತ್ತಷ್ಟು ಸುಧಾರಿಸುವುದು ನಮ್ಮ ಆದ್ಯತೆ. ಚುನಾವಣಾ ಪ್ರಣಾಳಿಕೆಯಲ್ಲಿ ಪ್ರಸ್ತಾಪಿತವಾದ ಎಲ್ಲಾ ಅಂಶಗಳೂ ನಮಗೆ ಅಷ್ಟೆ ಸಮಾನವಾಗಿ ಮುಖ್ಯವಾಗಿವೆ. ಇದರಲ್ಲಿ ನಾವು ಉದ್ಯೋಗಗಳ ಹೆಚ್ಚಳಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಿದ್ದೇವೆ. ಎಲ್ಲಾ ಪ್ರದೇಶಗಳ ನಡುವಿನ ಸಂಪರ್ಕ ಸುಲಲಿತವಾಗಲು ರಸ್ತೆಗಳ ನಿರ್ಮಾಣ, ವಿದ್ಯುತ್ ಉತ್ಪಾದನೆ ಮತ್ತು ಅದರ ಸೂಕ್ತ ಬಳಕೆಗೆ ಗಮನ ನೀಡಿದ್ದೇವೆ. ಇನ್ನಷ್ಟು ಅದನ್ನು ಹೆಚ್ಚಿಸುವೆವು. ಈ ಹಿನ್ನೆಲೆಯಲ್ಲಿಯೂ ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆಯನ್ನು ನಿರೀಕ್ಷಿಸುತ್ತೇವೆ.

ಕೈಗಾರಿಕೆ ಎನ್ನುವಾಗ ಬೃಹತ್ ಉದ್ಯಮಗಳೆ ಎಂದರ್ಥವಲ್ಲ. ಸಣ್ಣ ಪುಟ್ಟ ಕೈಗಾರಿಕೆ ಗ್ರಾಮೀಣ, ಗುಡಿ ಕೈಗಾರಿಕೆಗಳಂತಹವಕೂ ಗಮನ ಹರಿಸುತ್ತಿದ್ದೇವೆ. ಅಲ್ಲದೇ ನಮ್ಮಲ್ಲಿ ಪೆಟ್ರೋಲಿಯಂ ಗ್ಯಾಸ್ ಸಂಪನ್ಮೂಲವಿದ ಅದರ ಆಧಾರಿತವಾಗಿ ವಿದ್ಯುತ್ ಉತ್ಪಾದನಾ ಸ್ಥಾವರಗಳ ನಿರ್ಮಾಣ ಕಾರ್ಯ ನಡೆದಿದ ಇದನ್ನು ಹೊಂದಿಕೊಂಡು ಹಲವಾರು ಉದ್ದಿಮೆಗಳೂ ಬೆಳೆಯುತ್ತವೆ. ರಬ್ಬರ್ ಉತ್ಪಾದ ಉದ್ದಿಮೆ ಇನ್ನೊಂದು ಸಾಧ್ಯತೆಯಿರುವ ಕ್ಷೇತ್ರ, ಅಲ್ಲದೇ ಹಣ್ಣು, ಕೃಷಿ ತೋಟಗಾರಿಕಾ ಸಂಸ್ಕರಣೆಗಳು ಸಹ. ಇವಲ್ಲದೇ ಮುಖ್ಯವಾ ಪ್ರವಾಸೋದ್ಯಮವು ಹೆಚ್ಚಿನ ಸಾಧ್ಯತೆಗಳನ್ನು ಹೊಂದಿದೆ.

ಶಿಕ್ಷಣದ ಸ್ಥಿತಿಯೇನು?

ಕೆಳಹಂತದಿಂದ ಕಾಲೇಜ್ ಮಟ್ಟದವರೆಗೂ ಶಿಕ್ಷಣ ಉಚಿತವಿದೆ. ಅದನ್ನು ಪೂರ್ಣವಾ ಸಾರ್ವತ್ರಿಕಗೊಳಿಸುವ ಪ್ರಯತ್ನವಿದೆ. ಗು ತಲುಪಲು ತೀರಾ ಹತ್ತಿರದಲ್ಲಿದ್ದೇವೆ.

ಭಾಷಾ ನೀತಿಯೇನು?

ಎಲ್ಲಾ ಭಾಷೆಗಳಿಗೂ ನಾವು ಸಮಾನ ಸ್ಥಾ ಅವಕಾಶ ನೀಡಿದ್ದೇವೆ. ಮುಖ್ಯವಾಗಿ ಬಂಗಾ ಹಾಗೂ ಕೋಕ್ ಬರೋಕ್ ಭಾಷೆಗಳನ್ನು ಹೆಚ್ಚಿನ ಜನ ಮಾತನಾಡುತ್ತಾರೆ. ಇದಲ್ಲದೆ ರಾಜ್ಯದಲ್ಲಿರುವ ಇತರೆ ಭಾಷೆಗಳನ್ನಾಡು ಹಲವು ಸಣ್ಣ ಸಣ್ಣ ಜನಾಂಗಗಳಿವೆ. ಅವೆಲ್ಲವನ್ನ ಸಂರಕ್ಷಿಸಿ, ಬೆಳೆಸಲು ಒಂದು ಪತ್ಯೇಕವಾ ನಿರ್ದೇಶನಾಲಯವನ್ನು ರಚಿಸಲಾಗಿದೆ.

ಬುಡಕಟ್ಟು ಜನರ ಅಭಿವೃದ್ಧಿಯತ್ತ ಎಡರಂಗ ಗಮನವೇನು?

ಅತೀ ಹೆಚ್ಚಿನ ಗಮನ ನೀಡುತ್ತಿದ್ದೇ ಬುಡಕಟ್ಟು ಜನ ನಮ್ಮ ಬೆಂಬಲದ ಬೆನ್ನೆಲುಬ ಈ ವಿಭಾಗಗಳ ಶಿಕ್ಷಣ, ಸಾಮಾಜಿಕ, ಆರ್ಥಿ ಸ್ಥಾನಮಾನದ ಉನ್ನತೀಕರಣಕ್ಕೆ ನಿರಂತ ಶ್ರಮಿಸುತ್ತಿದ್ದೇವೆ. ಆದ್ದರಿಂದಲೇ ಅವರೆ ಸದಾ ನಮ್ಮೊಂದಿಗೆ ಇದ್ದಾರೆ.

ಹೀಗೆ ಹೇಳುತ್ತಲೇ 'ಆಗಬಹುದೇ' ಎಂ ನಿರ್ಗಮನದ ಸೂಚನೆ ನೀಡಿದರು. ಅವ ಮಾರ್ಚ್ 6 ರ ಸಂಪುಟ ಪ್ರಮಾಣ ವಚ 7 ರ ವಿಜಯೋತ್ಸವದ ಸಿದ್ದತೆಯಲ್ಲಿದ್ದರ ಅವರಿಗೆ ಧನ್ಯವಾದ ಹೇಳಿ ಬೀಳ್ಕೊಂಡೆ.

(ಸಂದರ್ಶ

ಮಾರ್ಚ್ 4– 2013 ಅಗರ್ತಲ

ಬೇಲೆ ಕೇರಿಯ ಸುದ್ದಿ

ಕಳ್ಳ ಗಣಿ ಧಣಿಗಳನ್ನು ಕಾಪಾಡಲೆಂದು
ಬಿ.ಜೆ.ಪಿ ಆಡಳಿತ ಬಂದಿತ್ತು ಮುಂದು
ನ್ಯಾಯ ದೇವತೆಯ ಕಣ್ಣು ಕಟ್ಟಲಿಕೆ
ಬಂದು
ಮುಗ್ಗರಿಸಿ ಬಿದ್ದರೋ ಮಾನ
ಕಳಕೊಂಡು

– ವಿಡಂಬ

ಮಹಿಳೆಯರಿಗೆ ಸಮಗ್ರ ನ್ಯಾಯ ಒದಗಿಸದ ಅತ್ಯಾಚಾರ-ನಿರೋಧಕ ಮಸೂದೆ

ದಿಲ್ಲಿಯ ಜಘನ್ಯ ಅತ್ಯಾಚಾರಕ್ಕೆ ದೇಶಾದ್ಯಂತ ಆಕ್ರೋಶ ವ್ಯಕ್ತಗೊಂಡ ಹಿನ್ನೆಲೆಯಲ್ಲಿ ಯುಪಿಎ-2 ಸರಕಾರ ಒಂದು ಸುಗ್ರೀವಾಜ್ಞೆಯನ್ನೇನೋ ತಂದಿತು. ಆದರೆ ಅದು ಈ ಜ್ವಲಂತ ಪ್ರಶ್ನೆಯನ್ನು ಸಮಗ್ರವಾಗಿ ಎದುರಿಸುವ ಸಾಮರ್ಥ್ಯವನ್ನು ಹೊಂದಿರಲಿಲ್ಲ, ನ್ಯಾಯಮೂರ್ತಿ ವರ್ಮಾ ಸಮಿತಿ ಈ ಕುರಿತು ಸಮಗ್ರ ಅಧ್ಯಯನ ನಡೆಸಿ ತಯಾರಿಸಿದ ಒಂದು ಉತ್ತಮ ವರದಿ ಇದ್ದರೂ ಸಮಾಜದಲ್ಲಿ ಬೇರೂರಿರುವ ಪಿತೃಪ್ರಧಾನ ಮೌಲ್ಯಗಳನ್ನು ಬದಲಿಸುವ ರಾಜಕೀಯ ಇಚ್ಛಾಶಕ್ತಿ ತೋರದ ಆ ಸುಗ್ರೀವಾಜ್ಞೆಯ ಬಗ್ಗೆ ದೇಶದ ಮಹಿಳಾ ಸಂಘಟನೆಗಳು ಮತ್ತು ಪ್ರಜಾಪ್ರಭುತ್ವವಾದಿಗಳು ತೀವ್ರ ಅಸಮಾಧಾನ ವ್ಯಕ್ತ ಪಡಿಸಿದಾಗ, ಸಂಸತ್ತಿನಲ್ಲಿ ಈ ಕುರಿತ ಮಸೂದೆಯನ್ನು ತಂದಾಗ ಇವನ್ನೆಲ್ಲ ಗಮನಿಸಲಾಗುವುದು ಎಂದು ಯುಪಿಎ-2 ಪ್ರಮುಖರು ಭರವಸೆ ನೀಡಿದ್ದರು. ಆದರೆ ಕಳೆದ ವಾರ ಲೋಕಸಭೆಯಲ್ಲಿ ಮಂಡಿಸಿ ಪಾಸು ಮಾಡಿಸಿಕೊಂಡ ಕ್ರಿಮಿನಲ್ ಕಾನೂನು ತಿದ್ದುಪಡಿ,2013 ಕೂಡ ರಾಜಕೀಯ ಇಚ್ಛಾಶಕ್ತಿಯ ಅದೇ ಕೊರತೆಯನ್ನು ಮತ್ತೆ ಪ್ರದರ್ಶಿಸಿದೆ.

ಈ ಬಗ್ಗೆ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಇದು ಮಹಿಳೆಯರಿಗೆ ಸಾಕಷ್ಟು ನ್ಯಾಯವನ್ನು ಒದಗಿಸಿಲ್ಲ ಎಂದಿದೆ. ಮಹಿಳಾ ಸಂಘಟನೆಗಳು ಎತ್ತಿದ ಆಕ್ಷೇಪಣೆಗಳನ್ನು, ಪ್ರಶ್ನೆಗಳನ್ನು ಯುಪಿಎ-2 ಸರಕಾರ ಪರಿಶೀಲಿಸಿಲ್ಲ. ಮುಖ್ಯವಾಗಿ ಅದು ಈ ಕೆಳಗಿನ ಅಂಶಗಳ ಬಗ್ಗೆ ಮತ್ತೊಮ್ಮೆ ಸರಕಾರದ ಗಮನ ಸೆಳೆದಿದೆ:

? ಲೈಂಗಿಕ ಆಕ್ರಮಣಗಳಿಗೆ ಸಂಬಂಧಪಟ್ಟ ಕಾನೂನುಗಳಲ್ಲಿನ ಪಿತೃಪ್ರಧಾನ ವ್ಯವಸ್ಥೆಯನ್ನು ಬಿಂಬಿಸುವ ಮತ್ತು ಮಹಿಳಾ-ವಿರೋಧಿ ಅಂಶಗಳ ಬಗ್ಗೆ ವರ್ಮಾ ಸಮಿತಿ ಸಮಗ್ರ ಸೂಚನೆಗಳನ್ನು ನೀಡಿದ್ದರೂ ಅವನ್ನು ಗಮನಕ್ಕೆ ತಗೊಂಡಿಲ್ಲ. ಉದಾಹರಣೆಗೆ ಐಪಿಸಿಯ ಓಬೀರಾಯನ ಕಾಲದ ಸೆಕ್ಷನ್ 354 ಮತ್ತು ಎಸ್ 509.

? ವರ್ಮಾ ಸಮಿತಿ ವೈವಾಹಿಕ ಅತ್ಯಾಚಾರವನ್ನು ಕಾನೂನಿನಲ್ಲಿ ಸೇರಿಸದಿರುವುದು "ಹೆಂಡಂದಿರು ಅವರ ಗಂಡಂದಿರ ಆಸ್ತಿಗಳಿಗಿಂತ ಹೆಚ್ಚೇನೂ ಅಲ್ಲ ಎಂಬ ಮದುವೆ ಕುರಿತ ಹಳಸಲು ಭಾವನೆಯಿಂದ ಹೊಮ್ಮಿರುವಂತದ್ದು" ಎಂದು ಖಾರವಾಗಿ ಹೇಳಿದ್ದರೂ ಈ ತಿದ್ದುಪಡಿಯಲ್ಲಿಯೂ ಅದಕ್ಕೆ ವಿನಾಯ್ತಿ ಮುಂದುವರೆದಿದೆ.


? 2010 ರ ಸರಕಾರದ ಮಸೂದೆಯಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪ್ರಾಬಲ್ಯದ ಸ್ಥಾನದಲ್ಲಿರುವ ವ್ಯಕ್ತಿ ನಡೆಸುವ ಅತ್ಯಾಚಾರವನ್ನು ಈ ಅಪರಾಧದ ಗಂಭೀರ ಸ್ವರೂಪ ಎಂದು ಪರಿಗಣಿಸಬೇಕು ಎಂದಿತ್ತು. ಆದರೆ ಈ ತಿದ್ದುಪಡಿಯಲ್ಲಿ ಅದನ್ನು ಕೈಬಿಡಲಾಗಿದೆ.

? ಈಗಿನ ಸಾಮಾಜಿಕ ವಾಸ್ತವಗಳನ್ನು ಗಮನಿಸಿ ಪರಸ್ಪರ ಒಪ್ಪಿಗೆಯ ಲೈಂಗಿಕ ಸಂಬಂಧದ ವಯಸ್ಸು ಕನಿಷ್ಟ ವಯಸ್ಸು 16 ಇರಬೇಕು, 16ರಿಂದ 18 ವರ್ಷಗಳ ನಡುವಿನ ಇಂತಹ ಒಪ್ಪಿಗೆಯ ಸಂಬಂಧಗಳನ್ನು, ಆಪಾದಿತ ವ್ಯಕ್ತಿಯ ವಯಸ್ಸು ಸಂಬಂಧಪಟ್ಟ ಹುಡುಗಿಗಿಂತ 5 ವರ್ಷ ಹೆಚ್ಚಿರದಿದ್ದರೆ ಅತ್ಯಾಚಾರದ ವ್ಯಾಪ್ತಿಗೆ ಒಳಪಡಿಸಬಾರದು ಎಂದು ರಾಷ್ಟ್ರೀಯ ಮಹಿಳಾ ಸಂಘಟನೆಗಳು ಸೂಚಿಸಿದ್ದವು. ಆದರೆ ಇದನ್ನು ತಿದ್ದುಪಡಿ ಮಸೂದೆಯಲ್ಲಿ ಸೇರಿಸಲಾಗಿಲ್ಲ. ಇದರಲ್ಲಿ ಸಂಪ್ರದಾಯಶರಣ ರಾಜಕೀಯ ಪಕ್ಷಗಳ ಒತ್ತಡಗಳಿಗೆ ತಲೆಬಾಗಲು ಯುಪಿಎ-2 ಸರಕಾರ ಸಿದ್ಧವಾಗಿತ್ತು.

? ಅತ್ಯಾಚಾರದ ಪ್ರಕರಣಗಳಲ್ಲಿ ಮೇಲಿನಿಂದ ಹೊಣೆಗಾರಿಕೆಯ ವ್ಯವಸ್ಥೆಯಿರಬೇಕು ಎಂಬ ವರ್ಮಾ ಸಮಿತಿಯ ಶಿಫಾರಸನ್ನಾಗಲೀ, ಇತರ ವೈಧಾನಿಕ ಬದಲಾವಣೆಗಳನ್ನಾಗಲೀ ಕೂಡ ಈ ತಿದ್ದುಪಡಿಯಲ್ಲಿ ಅಳವಡಿಸಲಾಗಿಲ್ಲ.

ಮಹಿಳೆಯರಿಗೆ ಸಾಕಷ್ಟು ಪ್ರಮಾಣದಲ್ಲಿ ನ್ಯಾಯ ಒದಗಿಸಬೇಕಾದರೆ ಇದನ್ನು ಅಂತಿಮ ಕಾನೂನಾಗಿ ಮಾಡುವ ಮೊದಲು ಈ ಬದಲಾವಣೆಗಳನ್ನು ಅಳವಡಿಸಬೇಕು ಎಂದು ಆಗ್ರಹಿಸಿರುವ ಎಐಡಿಡಬ್ಲ್ಯುಎ ಲೈಂಗಿಕ ಹಿಂಸಾಚಾರಕ್ಕೆ ಒಳಗಾಗಿರುವ ಮಹಿಳೆಯರಿಗೆ ಸಮಗ್ರ ನ್ಯಾಯ ಒದಗಿಸುವ ಅವಕಾಶ ಕಳೆದು ಹೋಗಬಾರದು ಎಂದಿದೆ. ಆದರೆ ಯುಪಿಎ-2 ಸರಕಾರ ಇಂತಹ ಸಮಗ್ರತೆಯನ್ನಾಗಲೀ, ಸಂಪ್ರದಾಯಶರಣರನ್ನು ಎದುರಿಸುವ ಧೈರ್ಯವನ್ನಾಗಲೀ ತೋರಿಸಬಲ್ಲುದೇ?

ಯುಪಿಎ ದರ್ಬಾರ್




ವೇದರಾಜ ಎನ್.ಕೆ.

ಡಿಎಂಕೆ ನಿರ್ಗಮನ, ನಂತರ ಎಸ್‌ಪಿ ಒತ್ತಾಯ: ಯುಪಿಎ-2 ಸ್ಥಿರತೆಗೆ ಧಕ್ಕೆಯಿಲ್ಲವಂತೆ

ಡಿಎಂಕೆ ಅಧಿಕೃತವಾಗಿ ಯುಪಿಎ-2 ಸರಕಾರದಿಂದ ಹೊರಬಂದಿದೆ. ಅದರ ಐದು ಮಂತ್ರಿಗಳು ರಾಜೀನಾಮೆ ನೀಡಿದ್ದಾರೆ. ಆದರೆ ಇದರಿಂದ ತಮ್ಮ ಸರಕಾರದ ಸ್ಥಿರತೆಗೇನೂ ಧಕ್ಕೆಯಿಲ್ಲ ಎಂದು ಬೆಂಬಲ ಹಿಂತೆಗೆದುಕೊಳ್ಳದಂತೆ ಡಿಎಂಕೆ ಮುಖ್ಯಸ್ಥರ ಮನವೊಲಿಸಲು ಹೋದ ಮೂವರು ಮಂತ್ರಿಗಳ ತಂಡದಲ್ಲಿದ್ದ ಹಣಕಾಸು ಮಂತ್ರಿಗಳು ಹೇಳಿದ್ದಾರೆ. ಇದು ಅವರು ನವ-ಉದಾರೀಕರಣದ ಫಲಾನುಭವಿಗಳಾದ ಕಾರ್ಪೊರೇಟ್ ಜಗತ್ತಿಗೆ ನೀಡಿದ ಭರವಸೆಯೂ ಕೂಡ.

ಶ್ರೀಲಂಕಾದಲ್ಲಿ ತಮಿಳರ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ, ಈ ಬಗ್ಗೆ ಯುಪಿಎ-2 ಸರಕಾರ ಏನೂ ಮಾಡುತ್ತಿಲ್ಲ, ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಆಯೋಗದ ಶ್ರೀಲಂಕ ವಿರುದ್ಧದ ನಿರ್ಣಯವನ್ನು ದುರ್ಬಲಗೊಳಿಸಲು ಮನಮೋಹನ್‌ಸಿಂಗ್ ಸರಕಾರ ಮುಂದಾಗಿದೆ ಎಂಬುದು ಡಿಎಂಕೆ ನೀಡಿರುವ ಕಾರಣ. "ಈಳಂ ತಮಿಳರಿಗೆ ಪ್ರಯೋಜನಕಾರಿಯಲ್ಲದ ಒಂದು ಸನ್ನಿವೇಶ ಸೃಷ್ಟಿಯಾಗಿರುವಾಗ ಡಿಎಂಕೆ ಸರಕಾರದಲ್ಲಿ ಮುಂದುವರೆಯುವುದು ತಮಿಳು ಜನಾಂಗಕ್ಕೆ ದೊಡ್ಡ ಕೇಡು ಉಂಟು ಮಾಡುತ್ತದೆಯಾದ್ದರಿಂದ ಡಿಎಂಕೆ ಮಂತ್ರಿಮಂಡಳದಿಂದ ಮತ್ತು ಮೈತ್ರಿಕೂಟದಿಂದ ಹೊರಬರಲು ನಿರ್ಧರಿಸಿದೆ" ಎಂದು ಡಿಎಂಕೆ ಮುಖ್ಯಸ್ಥರು ಹೇಳಿದ್ದಾರೆ.



ಡಿಎಂಕೆಯ ನಿರ್ಗಮನದಿಂದ ಬೆಂಬಲದ ಸಂಖ್ಯೆಯಲ್ಲಿ 18 ಇಳಿಕೆಯಾದರೂ, ಹೊರಗಿನಿಂದ ಬಿಎಸ್‌ಪಿಯ 21 ಮತ್ತು ಸಮಾಜವಾದಿ ಪಕ್ಷದ 22 ಸೇರುವುದರಿಂದ ಸರಕಾರಕ್ಕೇನೂ ಧಕ್ಕೆಯಿಲ್ಲ ಎಂಬುದು ಯುಪಿಎ ಪ್ರಮುಖರ ಲೆಕ್ಕಾಚಾರ.

ಆದರೆ ಇದಾದ ಎರಡು-ಮೂರು ದಿನಗಳಲ್ಲೇ ಸಮಾಜವಾದಿ ಪಕ್ಷದ ಮುಖ್ಯಸ್ಥರ ಬಗ್ಗೆ ಯುಪಿಎ-2 ಸರಕಾರದ ಒಬ್ಬ ಕಾಂಗ್ರೆಸ್ ಮಂತ್ರಿಯ ಟಿಪ್ಪಣಿ ಸಮಾಜವಾದಿ ಪಕ್ಷದಲ್ಲಿ ಆಕ್ರೋಶ ಎಬ್ಬಿಸಿದೆ. ಆ ಮಂತ್ರಿ ನಂತರ ಖೇದ ವ್ಯಕ್ತಪಡಿಸಿದ್ದಾರಷ್ಟೇ, ಕ್ಷಮೆ ಕೇಳಿಲ್ಲ, ಆತ ರಾಜೀನಾಮೆ ಕೊಡಬೇಕೆಂಬುದು ಎಸ್‌ಪಿ ಒತ್ತಾಯ. ಈ ಹಿನ್ನೆಲೆಯಲ್ಲಿ ದಿಲ್ಲಿಯಲ್ಲಿ ಅಂಕೆ-ಸಂಖ್ಯೆಗಳ ಲೆಕ್ಕಾಚಾರ ಆರಂಭವಾಗಿದೆ, ಸರಕಾರಕ್ಕೆ ಹೊರಗಿನಿಂದ ಬೆಂಬಲವನ್ನು ಮುಂದುವರೆಸುವ ಬಗ್ಗೆ ತಮ್ಮ ಮುಖ್ಯಸ್ಥರು ಪಕ್ಷದ ಇತರ ಕೇಂದ್ರ ಮುಖಂಡರು ನಿರ್ಧರಿಸುತ್ತಾರೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿಗಳು ಹೇಳಿದ್ದಾರೆ. ಎಸ್‌ಪಿ ಮುಖ್ಯಸ್ಥರು ಎನ್‌ಸಿಪಿ ಮುಖ್ಯಸ್ಥರನ್ನು ಭೇಟಿಯಾಗಿರುವುದು, ಲೋಕಸಭೆಯಲ್ಲಿ ಬಿಜೆಪಿ ಮುಖ್ಯಸ್ಥ ಒಬ್ಬ ಹಿರಿಯ ಸದಸ್ಯರ ಬಗ್ಗೆ ಅವರಿಗೆ ಭಯೋತ್ಪಾದಕರೊಂದಿಗೆ ಸಂಪರ್ಕ ಇದೆಯೆಂದಲ್ಲ ಟಿಪ್ಪಣಿ ಮಾಡುವುದು, ಅಕ್ಷಮ್ಯ, ಆ ಮಂತ್ರಿ ರಾಜೀನಾಮೆ ನೀಡಬೇಕು ಎಂದಿರುವುದು ಯುಪಿಎ-2 ಮುಖಂಡರಲ್ಲಿ ನಡುಕ ಹುಟ್ಟಿಸಿದಂತೆ ಕಾಣುತ್ತದೆ.

2ಜಿ ಹಗರಣ: ಪ್ರಧಾನಿ ಕಚೇರಿಯ ಪಾತ್ರವೇನು?

2ಜಿ ಹಗರಣ ಎಂಬುದು ಹಗರಣವೇ ಅಲ್ಲ ಎಂದು ಆರಂಭದಲ್ಲಿ ಹೇಳುತ್ತಿದ್ದ ಮುಖಂಡರು, ಅದರ ವಿವರಗಳು ಹೆಚ್ಚೆಚ್ಚು ಬಯಲಾಗುತ್ತಿದ್ದಂತೆ, ಅದು ಮುಖ್ಯವಾಗಿ ಆಗಿನ ಡಿಎಂಕೆ ದೂರಸಂಪರ್ಕ ಮಂತ್ರಿಯ ಕುಕೃತ್ಯ ಎನ್ನುವಂತೆ ಬಿಂಬಿಸಲಾರಂಭಿಸಿದರು. ಆದರೆ ಕಳೆದ ವಾರ ಇಂಗ್ಲಿಷ್ ದೈನಿಕವೊಂದರಲ್ಲಿ ಪ್ರಕಟವಾದ ದಸ್ತಾವೇಜುಗಳು ಮತ್ತು ಕಡತ ಟಿಪ್ಪಣಿಗಳು ಪ್ರಧಾನ ಮಂತ್ರಿ ಕಚೇರಿ ಕೂಡ ಆಗಿನ ದೂರಸಂಪರ್ಕ ಮಂತ್ರಿಯ ಕಾನೂನುಬಾಹಿರ ಮತ್ತು ಸ್ವೇಚ್ಛಾಚಾರದ ಕೃತ್ಯಗಳಲ್ಲಿ ಶಾಮೀಲಾಗಿರಬಹುದು ಎಂಬ ಸಂದೇಹವನ್ನು ಬಲಪಡಿಸಿವೆ. ಆದರೆ ಪ್ರಧಾನ ಮಂತ್ರಿ ಕಚೇರಿಯ ಮೇಲೆ ಇಂತಹ ಸಂದೇಹದ ನೆರಳು ಬೀಳದಂತೆ ನೋಡಿಕೊಳ್ಳಬೇಕೆಂಬ ಪ್ರಯತ್ನವೂ ನಡೆದಿರುವ ಸಂಕೇತವೂ ಈ ಕಡತ ಟಿಪ್ಪಣಿಗಳಲ್ಲಿ ಕಾಣುತ್ತಿದೆ.

ಪ್ರಧಾನ ಮಂತ್ರಿಗಳಿಗೆ ಆಗಿನ ದೂರಸಂಪರ್ಕ ಮಂತ್ರಿಗಳ ಧೋರಣೆ ಸರಿ ಕಂಡಿರಲಿಲ್ಲ, ಆ ಬಗ್ಗೆ ಎಚ್ಚರಿಸುವ ಸ್ವಲ್ಪ ಪ್ರಯತ್ನವನ್ನೂ ನಡೆಸಿದರು, ಆದರೆ ಪ್ರಯೋಜನವಾಗಲಿಲ್ಲ, ಮೈತ್ರಿಕೂಟ ರಾಜಕೀಯದಿಂದಾಗಿ ಸುಮ್ಮನಾಗಬೇಕಾಯಿತು ಎಂಬಂತೆ ಚಿತ್ರಿಸುವ ಪ್ರಯತ್ನ ನಡೆದಿತ್ತು. ಆದರೆ ಈಗ ಪ್ರಕಟವಾಗಿರುವ ಕಡತಗಳ ಟಿಪ್ಪಣಿಗಳಲ್ಲಿ ಪ್ರಧಾನ ಮಂತ್ರಿಯ ಕಚೇರಿ 2ಜಿ ಹಗರಣ ಬಯಲಾಗುವ ಎಷ್ಟೋ ಮೊದಲು ಆಗಿನ ದೂರಸಂಪರ್ಕ ಮಂತ್ರಿಗಳ ಧೋರಣೆಯ ಹಲವು ಅಂಶಗಳನ್ನು ಬೆಂಬಲಿಸಿತ್ತು ಎಂದು ಕಾಣಬಂದಿದೆ. ದೂರಸಂಪರ್ಕ ಮಂತ್ರಿಗಳು 2ಜಿ ತರಂಗಾಂತರ ಹಂಚಿಕೆಯಲ್ಲಿ 'ಮೊದಲು ಬಂದವರಿಗೆ ಮೊದಲು ಆದ್ಯತೆ' ವ್ಯವಸ್ಥೆಯನ್ನು ಬದಲಿಸುವ(ವಾಸ್ತವವಾಗಿ ತಿರುಚುವ) ಯೋಜನೆಯ ಬಗ್ಗೆ ಕಳಿಸಿದ ಪತ್ರವನ್ನು ತುರ್ತಾಗಿ ಪರೀಕ್ಷಿಸಬೇಕು ಎಂಬ ಪ್ರಧಾನಿಗಳ ಆದೇಶದ ಮೇರೆಗೆ ಅದನ್ನು ವಿಶ್ಲೇಷಿಸಿದ ಪ್ರಧಾನ ಮಂತ್ರಿಗಳ ಕಚೇರಿಯ ಹಿರಿಯ ಅಧಿಕಾರಿಗಳು, ನಂತರ ಸುಪ್ರಿಂ ಕೋರ್ಟ್ "ಸಂಪೂರ್ಣ ಸ್ವೇಚ್ಛಾಚಾರಿ, ತಿಕ್ಕಲುತನದ ಮತ್ತು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾದ, ಅಲ್ಲದೆ ಸಮಾನತೆಯ ತತ್ವವನ್ನು ಉಲ್ಲಂಘಿಸಿದ" ನಿರ್ಣಯಗಳು ಎಂದು ವರ್ಣಿಸಿದ ಹೆಚ್ಚಿನ ನಿರ್ಣಯಗಳನ್ನು ಬೆಂಬಲಿಸಿದ್ದರು ಎಂಬುದು ಈ ಟಿಪ್ಪಣಿಗಳಲ್ಲಿ ಕಾಣಬರುತ್ತದೆ.

ಪ್ರಧಾನ ಮಂತ್ರಿಗಳ ಕಚೇರಿ ಇದಕ್ಕೆ ಪ್ರತಿಕ್ರಿಯಿಸುತ್ತ, ಆ ವರದಿ ಸರಿಯಾಗಿಲ್ಲ, ಇವಕ್ಕೆಲ್ಲ ಮೊದಲೇ ಪ್ರಧಾನ ಮಂತ್ರಿಗಳ ಕಚೇರಿ, ಮತ್ತು ಸ್ವತಃ ಪ್ರಧಾನ ಮಂತ್ರಿಗಳು ಸಂಸತ್ತಿನಲ್ಲಿ ಹೇಳಿಕೆಗಳಲ್ಲಿ ಈ ಬಗ್ಗೆ ಸ್ಪಷ್ಟೀಕರಣ ನೀಡಿದ್ದಾರೆ ಎಂದಿದೆ. ಆದರೆ ಪ್ರಧಾನ ಮಂತ್ರಿಗಳ ಕಚೇರಿಗೆ ಈ ವರದಿಯನ್ನು ಪ್ರಕಟಿಸುವ ಮೊದಲು ಒಂದು ಇ-ಮೇಲ್ ಕಳಿಸಲಾಗಿತ್ತು, ಆಗ ಅದಕ್ಕೆ ಪ್ರತಿಕ್ರಿಯಿಸಿರಲಿಲ್ಲ ಎಂದಿರುವ ವರದಿಗಾರರು, ಪ್ರಧಾನ ಮಂತ್ರಿಗಳ ಕಚೇರಿ ಒಂದು ಹೋಲಿಕೆಗಳ ತಖ್ತೆ ತಯಾರಿಸಿತ್ತು, ಅದರಲ್ಲಿ ಪ್ರಧಾನ ಮಂತ್ರಿಗಳ ಕಚೇರಿ ಮತ್ತು ಆಗಿನ ದೂರಸಂಪರ್ಕ ಮಂತ್ರಿಗಳ, ಮುಂದೆ ಸಿಬಿಐ ಕಾನೂನುಬಾಹಿರ ಎಂದು ಆಪಾದಿಸಿದ ಆಶಯಗಳ ನಡುವೆ ಸಂಪೂರ್ಣ ಒಮ್ಮತ ಇತ್ತು ಎಂಬ ಅಂಶದ ಬಗ್ಗೆ ಈಗ ನೀಡಿರುವ ಪ್ರತಿಕ್ರಿಯೆಯಲ್ಲಿ ಏನೂ ಹೇಳಿಲ್ಲ ಎಂದು ಪ್ರತ್ಯುತ್ತರ ನೀಡಿದ್ದಾರೆ.

ಅದೇನೇ ಇರಲಿ, ಸಿಬಿಐ ಈ ಅಂಶದ ಬಗ್ಗೆ ತನಿಖೆ ನಡೆಸಿಲ್ಲ, ಅಲ್ಲದೆ ಆಗಿನ ದೂರಸಂಪರ್ಕ ಮಂತ್ರಿಗಳು ಜಂಟಿ ಸಂಸದೀಯ ಸಮಿತಿಯ ಮುಂದೆ ಹಾಜರಾಗಲು ಸಿದ್ಧ ಎಂದರೂ ಅವರನ್ನಾಗಲೀ, ಪ್ರಧಾನ ಮಂತ್ರಿಗಳನ್ನಾಗಲೀ ಇನ್ನೂ ಕರೆದಿಲ್ಲ. ಬಹುಶಃ ಅವರಿಬ್ಬರನ್ನೂ ಕರೆದು ಹೇಳಿಕೆಗಳನ್ನು ಪಡೆಯಲೇ ಬೇಕಾದ ಸಂದರ್ಭ ಬಂದಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಜಗದಗಲ


ಶರತ್‌ಚಂದ್ರ

ಬಾಂಗ್ಲಾದೇಶದಲ್ಲಿ ಮೂಲಭೂತವಾದದ ವಿರುದ್ಧ ಚಳುವಳಿ

ಅರಬ್ ದೇಶಗಳಲ್ಲಿ ಸಾಮ್ರಾಜ್ಯಶಾಹಿ ಬಂಟರಾದ ಸರ್ವಾಧಿಕಾರಿಗಳ ವಿರುದ್ಧ ಮತ್ತು ಪ್ರಜಾಪ್ರಭುತ್ವ ಹಕ್ಕುಗಳಿಗೆ ನಡೆದ 'ಅರಬ್ ವಸಂತ' ಎಂದು ಕರೆಯಲಾದ ಜನತೆಯ ವ್ಯಾಪಕ ಚಳುವಳಿ ತಣ್ಣಗಾಗಿದೆ. ಅದರ ಪ್ರಯೋಜನವನ್ನು ಮುಸ್ಲಿಂ ಮೂಲಭೂತವಾದಿಗಳು ಪಡೆಯುವತ್ತ ಮುನ್ನಡೆದಿದೆ. ಜಗತ್ತಿನ ಪ್ರಗತಿಪರರನ್ನು ನಿರಾಸೆಗೊಳಿಸಿದೆ. ಆದರೆ ಬಾಂಗ್ಲಾದೇಶದಲ್ಲಿ ಇನ್ನೊಂದು ವ್ಯಾಪಕ ಚಳುವಳಿ, ಜಾತ್ಯತೀತ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗಟ್ಟಿಗೊಳಿಸುವತ್ತ ಇತ್ತೀಚೆಗೆ ನಡೆದಿದೆ. ಜಗತ್ತಿನ ಪ್ರಗತಿಪರರಿಗೆ ಹರ್ಷ ತಂದಿದೆ.

ಬಾಂಗ್ಲಾದೇಶದ 1971ರ ವಿಮೋಚನಾ ಸಮರದಲ್ಲಿ ಪಾಕಿಸ್ತಾನದ ಮಿಲಿಟರಿ ಜತೆ ರಜಾಕಾರರು (ಮುಸ್ಲಿಂ ಮೂಲಭೂತವಾದಿ ಗುಂಪುಗಳು) ಶಾಮೀಲಾಗಿದ್ದರು. ಜನತೆ ಮೇಲೆ ಸಾಮೂಹಿಕ ಕೊಲೆ, ಅತ್ಯಾಚಾರ ಮುಂತಾದ ಹೀನ ದಮನಚಕ್ರವನ್ನು ಹರಿಯ ಬಿಟ್ಟಿದ್ದವು. ಬಾಂಗ್ಲಾದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವಿಮೋಚನಾ ಪಡೆ 'ಮುಕ್ತಿ ಬಾಹಿನಿ' ಕಾರ್ಯಕರ್ತರ ಮೇಲೆ ದಾಳಿ ಕೊಲೆಗಳಲ್ಲೂ, ಅವರ ಚಲನವಲನದ ಮಾಹಿತಿ ಕೊಡುವ ಮತ್ತಿತರ ದೇಶದ್ರೋಹಿ ಅಪರಾಧಗಳಲ್ಲೂ ತೊಡಗಿದ್ದರು. 1971ರ ವಿಮೋಚನಾ ಸಮರದಲ್ಲಿ 25-30 ಲಕ್ಷ ಜನ ಬಲಿಯಾದರು. ಪ್ರಸ್ತುತ ಸರ್ಕಾರ ಈ ನರಮೇಧ, ಯುದ್ಧ-ಅಪರಾಧ ಮತ್ತು ಮಾನವ ಹಕ್ಕುಗಳ ಅಪರಾಧಗಳಲ್ಲಿ ತೊಡಗಿದ್ದವರ ವಿಚಾರಣೆ ನಡೆಸಿ ಶಿಕ್ಷಿಸಲು ಒಂದು ಟ್ರಿಬ್ಯುನಲ್ ನೇಮಿಸಿತ್ತು. ಜಮಾತೇ ಇಸ್ಲಾಮಿ (ರಜಾಕಾರರು ಆ ಮೇಲೆ ಸಂಘಟಿಸಿದ ಮೂಲಭೂತವಾದಿ ಸಂಘಟನೆ)ಯ ಪ್ರಮುಖ ನಾಯಕರು ಈ ಟ್ರಿಬ್ಯುನಲ್ ವಿಚಾರಣೆ ನಡೆಸುತ್ತಿರುವ ಅಪರಾಧಿಗಳು. ಟ್ರಿಬ್ಯುನಲ್ ವಿರುದ್ಧ ಮೊದಲಿಂದಲೂ, ವಿಚಾರಣೆ ನಡೆದು ಶಿಕ್ಷೆ ಘೋಷಣೆ ಆಗುತ್ತಿದ್ದಂತೆ ಅದನ್ನು ತಡೆಯಲು ಜಮಾತೇ ಇಸ್ಲಾಮಿ ತನ್ನ ಎಂದಿನ ಹಿಂಸಾತ್ಮಕ ಕ್ರಮಗಳಿಂದ ಮುಂದಾಯಿತು. ಜಾತ್ಯತೀತ ಶೇಕ್ ಹಸೀನಾ ಸರ್ಕಾರವನ್ನು ಹಿಂಸಾತ್ಮಕವಾಗಿ ಉರುಳಿಸುವ ಸವಾಲೆಸೆಯಿತು. ಬಲಪಂಥೀಯ ವಿರೋಧ ಪಕ್ಷವಾದ ಬಿ.ಎನ್.ಪಿ. ಜಮಾತೇ ಇಸ್ಲಾಮಿಗೆ ಬೆಂಬಲ ನೀಡಿತು.

ಈ ಮೂಲಭೂತವಾದಿಗಳ ಪ್ರಜಾಪ್ರಭುತ್ವ-ವಿರೋಧಿ ನಿಲುವು ಮತ್ತು ಹಿಂಸಾಚಾರಗಳ ವಿರುದ್ಧ ಅನಿರೀಕ್ಷಿತವಾಗಿ ಭಾರೀ ಚಳುವಳಿ ಆರಂಭವಾಗಿದೆ. ಅದನ್ನು ಶಹಬಾಗ್ ಚೌಕ



ಚಳುವಳಿ ಎಂದೂ ಕರೆಯಲಾಗುತ್ತಿದೆ. ಈಜಿಪ್ಟಿನ ತೆಹ್ರಿರ್ ಚೌಕದಂತೆ ಢಾಕ್ಕಾದ ಕೇಂದ್ರದಲ್ಲಿರುವ ಶಹಬಾಗ್ ಚೌಕ ಈ ಚಳುವಳಿಯ ಕೇಂದ್ರಬಿಂದು ಆಗಿದೆ. ಈ ಚಳುವಳಿ ಆರಂಭವಾಗಿದ್ದು ಫೆಬ್ರುವರಿ 5ರಂದು. ಅಂದು ನರಮೇಧ, ಯುದ್ಧ-ಅಪರಾಧಗಳಿಗೆ ವಿಚಾರಣೆಗೆ ಒಳಗಾಗಿದ್ದ ಅಬ್ದುಲ್ ಖಾದರ್ ಮೊಲ್ಲಾನಿಗೆ ಟ್ರಿಬ್ಯುನಲ್ ಜೀವಾವಧಿ ಶಿಕ್ಷೆ ವಿಧಿಸಿದ್ದು ಬಾಂಗ್ಲಾದೇಶದ ಜನತೆಗೆ ಶಾಕ್ ಕೊಟ್ಟಿತ್ತು. ಇದರ ವಿರುದ್ಧ ಕೆಲವು ಬ್ಲಾಗರುಗಳು ಶಹಬಾಗ್ ಚೌಕದಲ್ಲಿ ಪ್ರತಿಭಟನೆ ಹಮ್ಮಿಕೊಂಡರು. ನೋಡ ನೋಡುತ್ತಿದ್ದಂತೆ ಪ್ರತಿಭಟನಾಕಾರರ ಸಂಖ್ಯೆ ಹೆಚ್ಚಿತು. ಸಾಮಾಜಿಕ ತಾಣ, ಎಸ್ಸೆಮೆಸ್ ಮೂಲಕ ಸುದ್ದಿ ಕಾಡ್ಗಿಚ್ಚಿನಂತೆ ಹಬ್ಬಿತ್ತು. ಶಹಬಾಗ್ ಚೌಕ ಯುವಜನರಿಂದ ತುಂಬಿ ಹೋಯಿತು. ಚಳುವಳಿ ವ್ಯಾಪಕವಾಗಿ ದೇಶದ ಇತರ ಪಟ್ಟಣಗಳಿಗೂ ಹಬ್ಬಿತು.

ಶಹಬಾಗ್ ಚೌಕ ಚಳುವಳಿ ಭಾರೀ ಜನತಾ ಚಳುವಳಿಯಾಯಿತು. ಅದಕ್ಕೆ 'ಗಣ ಜಾಗರಣ ಮಂಚ' ಎಂದು ಹೆಸರಿಡಲಾಯಿತು. ಫೆಬ್ರುವರಿ 8ರಂದು ಶಹಬಾಗ್ ಚೌಕದಲ್ಲಿ ನಡೆದ ಚಾರಿತ್ರಿಕ ರ್‍ಯಾಲಿಯಲ್ಲಿ, ಚಳುವಳಿ ಸ್ಪಷ್ಟ ಬೇಡಿಕೆಗಳನ್ನು ಮುಂದಿಟ್ಟಿತು. ಶಹಬಾಗ್ ಚೌಕ ಹೇಳಿಕೆ ಅಂಗೀಕರಿಸಿತು. ಇದು ಬಾಂಗ್ಲಾದೇಶದ ಚರಿತ್ರೆಯಲ್ಲೇ ಅತ್ಯಂತ ದೊಡ್ಡ ರ್‍ಯಾಲಿ ಆಗಿತ್ತು. ಲಕ್ಷಾಂತರ ಜನ ಭಾಗವಹಿಸಿದರು. ಯುದ್ಧ ಅಪರಾಧಗಳಲ್ಲಿ ತೊಡಗಿದ್ದ ಅಪರಾಧಿಗಳ ಪಟ್ಟಿ ಪ್ರಕಟಿಸಬೇಕು. ಈ ಅಪರಾಧಿಗಳು ಯುದ್ಧ ಅಪರಾಧಗಳಲ್ಲಿ ಬರಿಯ ಶಾಮೀಲಾಗಿರಲಿಲ್ಲ. ಅದನ್ನು ಯೋಜಿಸಿ ಆರಂಭಿಸಿದವರು ಎಂದು ಪರಿಗಣಿಸಬೇಕು. ಯುದ್ಧ ಅಪರಾಧಿಗಳಿಗೆ ಗಲ್ಲು ಶಿಕ್ಷೆ ಆಗಬೇಕು. ಟ್ರಿಬ್ಯುನಲ್ ಜೀವಾವಧಿ ಶಿಕ್ಷೆ ವಿಧಿಸಿದರೆ ಅದರ ವಿರುದ್ಧ ಅಪೀಲು ಹೋಗಲು ಟ್ರಿಬ್ಯುನಲ್ ಕಾಯಿದೆ ತಿದ್ದುಪಡಿ ಮಾಡಬೇಕು. ಯುದ್ಧ ಅಪರಾಧಿಗಳು ಸಕ್ರಿಯವಾಗಿರುವ ಜಮಾತೇ ಇಸ್ಲಾಮಿ, ಅದರ ವಿದ್ಯಾರ್ಥಿ ವಿಭಾಗ ಇಸ್ಲಾಮಿ ಛಾತ್ರ ಶಿಬಿರ ಮತ್ತು ಇತರ ಮೂಲಭೂತವಾದಿ ಸಂಘಟನೆಗಳನ್ನು ನಿಷೇಧಿಸಬೇಕು. ಯುದ್ಧ ಅಪರಾಧಿಗಳು ನಡೆಸುತ್ತಿರುವ ಮತ್ತು ಈ ಮೂಲಭೂತವಾದಿ ಸಂಘಟನೆಗಳನ್ನು ಸಾಕುತ್ತಿರುವ, ಹಲವು ಕಂಪನಿ ಮತ್ತು ವಾಣಿಜ್ಯ ಸಂಘಟನೆಗಳ (ಪತ್ರಿಕೆಗಳು, ಬ್ಯಾಂಕುಗಳು, ಶಿಕ್ಷಣ ಸಂಸ್ಥೆಗಳು, ಟ್ರಸ್ಟುಗಳು, ಟಿವಿ ವಾಹಿನಿಗಳು ಇತ್ಯಾದಿ) ಆಸ್ತಿ-ಪಾಸ್ತಿ ಜಪ್ತಿ ಮಾಡಬೇಕು. ಈ ಸಂಘಟನೆಗಳು ಮತ್ತು ಸಂಸ್ಥೆಗಳ, ಹಾಗೂ ಅದರ ಸದಸ್ಯರ ವಿರುದ್ಧ ಸಾಮಾಜಿಕ ಬಹಿಷ್ಕಾರ ಹಾಕಬೇಕು. ಇವು ಶಹಬಾಗ್ ಚೌಕದಲ್ಲಿ ಜನತೆ ತೆಗೆದುಕೊಂಡ ಪ್ರತಿಜ್ಞೆ. ಅಂದಿನಿಂದ ಇಂದಿನವರೆಗೆ ಶಹಬಾಗ್ ಚೌಕ,



ಹಾಡು ನೃತ್ಯ ನಾಟಕ ಕಾವ್ಯ ವಾಚನಗಳ ಸತತ ಕಲಾತ್ಮಕ ಅಭಿವ್ಯಕ್ತಿಗಳ ತಾಣವಾಗಿದೆ. ಈ ಎಲ್ಲಾ ಬೇಡಿಕೆಗಳು ಈಡೆರುವ ವರೆಗೆ ಚೌಕದಲ್ಲಿ ಚಳುವಳಿ ಮುಂದುವರೆಯುತ್ತದೆ ಎಂದು ಹೇಳಲಾಗಿದೆ. ಜಮಾತೇ ಇಸ್ಲಾಮಿಯನ್ನು ಮೊದ ಮೊದಲು ಬೆಂಬಲಿಸಿದ ಬಲಪಂಥಿಯ ವಿರೋಧ ಪಕ್ಷ ಬಿ.ಎನ್.ಪಿ. ಚಳುವಳಿಯ ವ್ಯಾಪಕತೆ ಡಿ ಹಿಂಜರಿಯಿತು. ಚಳುವಳಿಯನ್ನು 'ಸ್ವಾಗತ' ಮಾಡಿತು. ಆದರೆ 'ಆಳುವ ಪಕ್ಷ ಅದನ್ನು ರಾಜಕೀಯವಾಗಿ ಬಳಸಬಾರದು' ಎಂದು 'ಎಚ್ಚರಿಸಿತು'.

ಶಹಬಾಗ್ ಚೌಕ ಚಳುವಳಿ ಬಾಂಗ್ಲಾದೇಶ ಇತಿಹಾಸದಲ್ಲಿ ಒಂದು ಪ್ರಮುಖ ಘ ಮತ್ತು ಗಮನಾರ್ಹ ಬೆಳವಣಿಗೆ ಎಂಬು ಸ್ಪಷ್ಟ. ವಿದ್ಯಾರ್ಥಿ-ಯುವಜನರು ಆರಂಭ ಭಾರೀ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ ಸಾಮಾಜಿಕ ತಾಣಗಳ ವ್ಯಾಪಕ ಬಳ ವಿದ್ಯಾರ್ಥಿ-ಯುವಜನರು ಆರಂಭಿಸಿ ಚಳುವಳಿ ವ್ಯಾಪಕ ರಾಷ್ಟ್ರೀಯ ಜನ ಚಳುವಳಿ ಆಗಿದ್ದು, ಸೆಕ್ಯುಲರ್ ಪ್ರಜಾಸತ್ತೆಯ ಮತ್ತು ಸೆಕ್ಯುಲರ್ ಸರ್ಕಾರವನ್ನು ರಕ್ಷಿಸ ಬೀದಿಗಿಳಿದದ್ದು, ಮೂಲಭೂತವ ಮತ್ತು ಬಲಪಂಥೀಯ ಶಕ್ತಿಗಳು ಸೆಕ್ಯುಲ ಪ್ರಜಾಸತ್ತೆಯ ವಿರೋಧಿಗಳು ಎಂ ಸ್ಪಷ್ಟವಾಗಿ ಗುರುತಿಸಿ ಅವರನ್ನು ಮಟ್ಟ ಹಾಕ ಸಾಮಾಜಿಕ ಆಡಳಿತಾತ್ಮಕ ಮತ್ತು ರಾಜಕೀ ಕ್ರಮಗಳಿಗೆ ಮುಂದಾದದ್ದು – ಈ ಚಳುವಳಿ ವಿಶೇಷತೆಗಳು. ಬಾಂಗ್ಲಾದೇಶದ ಇತಿಹಾಸ ಇದು ನಾಲ್ಕನೆಯ ದೊಡ್ಡ ಚಳುವಳಿ. 19 ಭಾಷಾ ಆಂದೋಲನ, 1969ರ ಮಿಲಿ ಸರ್ವಾಧಿಕಾರದ ವಿರುದ್ಧ ಚಳುವಳಿ, 19 ವಿಮೋಚನಾ ಸಮರದ ನಂತರ ಇದು ಅತ್ಯ ಗಮನಾರ್ಹ ಬೆಳವಣಿಗೆ. ಮೂಲಭೂತವ ಮತ್ತು ಬಲಪಂಥೀಯ ಶಕ್ತಿಗಳು ಮಾಡುತ್ತವೆ ? ಅವರ ವಿರುದ್ಧ ಚಳು ಮುಂದೆ ಯಾವ ರೀತಿ ಮುಂದುವರೆಯು ಎಂಬುದು ಕಾದು ನೋಡಬೇಕಾಗಿದೆ. ಬಾಂಗ್ಲಾದೇಶದ ಇತಿಹಾಸದಲ್ಲಿ ಒ ಹೊಸ ಪ್ರಗತಿಪರ ಜನಪರ ಅದ್ಯಾ ಆರಂಭವಾಗಬಹುದು ಎಂಬ ಆಶಾಭಾವನೆ ಇಟ್ಟುಕೊಳ್ಳಬಹುದು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಂದು ಉತ್ತಮ ಭಾರತಕ್ಕಾಗಿ....

ಟ 7 ರಿಂದ

ಲಕ ಮಾಡಬೇಕಾಗಿದೆ.
ನ್ನೊಂದೆಡೆಯಲ್ಲಿ, ಮಹಾ ಭ್ರಷ್ಟಾಚಾರದ ಗರಣಗಳನ್ನು ತಡೆದಿದ್ದರೆ, ಸಾರ್ವತ್ರಿಕ ಹಾರ ಭದ್ರತೆ, ಶಿಕ್ಷಣ, ಆರೋಗ್ಯ ತ್ತು ನಮ್ಮ ಜನಗಳ ಬದುಕನ್ನು ತ್ತಮಗೊಳಿಸುವ ಇತರ ಅಗತ್ಯಗಳಿಗೆ ಕಷ್ಟು ಸಂಪನ್ಮೂಲಗಳು ಒದಗುತ್ತಿದ್ದವು. ಜಿ ಹಗರಣವೊಂದೇ(ರೂ.1.76ಲಕ್ಷ ೋಟಿ) ದೇಶದಲ್ಲಿ ಎಪಿಎಲ್/ಬಿಪಿಎಲ್ ೇಧ-ಭಾವವಿಲ್ಲದೆ ಎಲ್ಲ ಕುಟುಂಬಗಳಿಗೆ ಜಿಗೆ 2ರೂ.ಗಿಂತ ಕಡಿಮೆ ದರದಲ್ಲಿ 35 ಜಿ ಆಹಾರ ಧಾನ್ಯಗಳ ವಿತರಣೆಗೆ ಸಾಕಷ್ಟು ಂಪನ್ಮೂಲಗಳನ್ನು ಬಿಡುಗಡೆ ಮಾಡುತ್ತಿತ್ತು. ಲ್ಲಿದ್ದಲು ಬ್ಲಾಕುಗಳ ನೀಡಿಕೆ ಹಗರಣದ- ೋಲ್‌ಗೇಟ್-ರೂ. 1.86;ಲಕ್ಷ ಕೋಟಿ ದೇಶದ ಪ್ರತಿಯೊಂದು ಬಾಲಕ ಮತ್ತು ಾಲಕಿಯನ್ನು ಶಾಲೆಗೆ ಸೇರಿಸಿ ಅವರಿಗೆ ುಸ್ತಕಗಳನ್ನು, ಸಮವಸ್ತ್ರಗಳನ್ನು ಮತ್ತು ಧ್ಯಾಹ್ನದ ಊಟವನ್ನು ಒದಗಿಸಲು ರಕಾರಕ್ಕೆ ಬೇಕಾದಷ್ಟು ಆಗುತ್ತಿತ್ತು. ನಮ್ಮ ಂಪನ್ಮೂಲಗಳ ಇಂತಹ ಮಹಾಲೂಟಿಯನ್ನು ಡೆಯಬೇಕಾಗಿದೆ, ಇದಕ್ಕಾಗಿ ಜನಗಳ ೋರಾಟಗಳ ಮೂಲಕ ನಮ್ಮ ಆಳುವ ರ್ಗಗಳ ಮೇಲೆ ಹೆಚ್ಚೆಚ್ಚು ಒತ್ತಡಗಳನ್ನು ಾಕಬೇಕಾಗಿದೆ.

ರ್ಯಾಯ ಸರಕಾರದ ಪ್ರಶ್ನೆ

್ಯಾಲಿ ಆರಂಭವಾಗುತ್ತಿದ್ದಂತೆ, ಯುಪಿಎ-2 ರಕಾರದ ಇನ್ನೊಂದು ಮಹತ್ವದ ಮಿತ್ರಪಕ್ಷ, ಡಿಎಂಕೆ ಬೆಂಬಲ ಹಿಂತೆಗೆದುಕೊಂಡು ಈ ಸರಕಾರವನ್ನು ಇನ್ನಷ್ಟು ರಾಜಕೀಯ ಅಸ್ಥಿತೆಯತ್ತ ತಳ್ಳಿರುವ ಸುದ್ದಿ ಬಂತು. ಈಗಾಗಲೇ ಇದೊಂದು ಅಲ್ಪಮತದ ಸರಕಾರ, ಬಿಎಸ್‌ಪಿ ಮತ್ತು ಎಸ್‌ಪಿಯಂತಹ ಪಕ್ಷಗಳ ಹೊರಗಣ ಬೆಂಬಲದ ಮೇಲೆ ಬದುಕುಳಿದಿದೆ. ಈ ರಾಜಕೀಯ ಅಸ್ಥಿರತೆ ಸಹಜವಾಗಿಯೇ ಒಂದು ಪರ್ಯಾಯ ಸರಕಾರದ ಪ್ರಶ್ನೆಯನ್ನು ಎತ್ತಿದೆ.

ಈ ವಿಷಯದಲ್ಲಿ, ಒಂದು ಉತ್ತಮ ಭಾರತದ ನಿರ್ಮಾಣಕ್ಕಾಗಿ ಪರ್ಯಾಯ ಧೋರಣೆಗಳು ಅಗತ್ಯ ಎಂಬ ದೃಷ್ಟಿಕೋಣದಿಂದ ನೋಡಿದರೆ, ಬಿಜೆಪಿ ಪರ್ಯಾಯವೇನೂ ಆಗಲಾರದು. ಅದರ ಆರ್ಥಿಕ ನೀತಿಗಳು ನವ-ಉದಾರವಾದಿ ಸುಧಾರಣಾ ದಿಕ್ಪಥದಿಂದ ಭಿನ್ನವೇನೂ ಆಗಿಲ್ಲ. ಬಿಜೆಪಿ ನೇತೃತ್ವದ ಎನ್‌ಡಿಎ ಕೇಂದ್ರ ಸರಕಾರದ ಅಧಿಕಾರ ಸೂತ್ರಗಳನ್ನು ಹಿಡಿದಿದ್ದಾಗ ಚಿಲ್ಲರೆ ವ್ಯಾಪಾರ ವಲಯದಲ್ಲಿ ಎಫ್‌ಡಿಐಗೆ ಅನುಮತಿ ನೀಡಬೇಕು ಎಂದು ಸೂಚಿಸಿತ್ತು. ಸಿಪಿಐ(ಎಂ) ಇದಕ್ಕೆ ಆಕ್ಷೇಪವೆತ್ತಿ ಪ್ರತಿಭಟನೆಗಳನ್ನು ಸಂಘಟಿಸಿದಾಗ, ಕಾಂಗ್ರೆಸ್ ಪಕ್ಷವೂ ಆ ಪ್ರಯತ್ನವನ್ನು ವಿರೋಧಿಸಿತು. ಈಗ ಕಾಂಗ್ರೆಸ್ ನೇತೃತ್ವದ ಯುಪಿಎ ಕೇಂದ್ರ ಸರಕಾರದ ಅಧಿಕಾರ ಸೂತ್ರಗಳನ್ನು ಹಿಡಿದಿರುವಾಗ ಇದಕ್ಕೆ ಸಿಪಿಐ(ಎಂ)ನ ಎಡೆಬಿಡದ ವಿರೋಧಕ್ಕೆ ಬಿಜೆಪಿ ಕೂಡ ಬೆಂಬಲ ನೀಡಿದರೂ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಅನುಮತಿ ನೀಡಲಾಗಿದೆ. ಬಿಜೆಪಿ ಸರಕಾರದಲ್ಲಿ ಇದ್ದಾಗ ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕ ವಲಯದ ಶೇರುವಿಕ್ರಯ ನಡೆಸಿತು. ಅದರ ಮೊದಲ 13 ದಿನಗಳ ಸರಕಾರ ಲೋಕಸಭೆಯಲ್ಲಿ ವಿಶ್ವಾಸ ಮತದಲ್ಲಿ ಖಂಡಿತ ಸೋಲುತ್ತದೆ ಎಂದಿದ್ದಾಗಲೂ, ಸಂಸತ್ತಿನ ಅಧಿವೇಶನ ನಡೆಯುತ್ತಿದ್ದಾಗಲೇ ಅವಸರವಸರವಾಗಿ ಸಂಪುಟ ಸಭೆ ಕರೆದು ಎನ್ರೋನ್‌ಗೆ ವಿದ್ಯುತ್ ಖರೀದಿ ಒಪ್ಪಂದವನ್ನು ಕೊಡಮಾಡಿತು. ಈಗ ಇದೊಂದು ಮರ್ಯಾದೆ ಕಳಕೊಂಡ, ದಿವಾಳಿಯೆದ್ದಿರುವ ಬಹುರಾಷ್ಟ್ರೀಯ ಕಂಪನಿ. ಅದಕ್ಕೆ ಕೊಡಮಾಡಿದ ಆ ಒಪ್ಪಂದ ಜನತೆಯ ಲೂಟಿಯೇ ಆಗಿತ್ತು. ಪ್ರಸಕ್ತ ಸಂಸತ್ತಿನಲ್ಲೂ ಬಿಜೆಪಿ ಪೆನ್ಶನ್ ನಿಧಿಗಳ ಖಾಸಗೀಕರಣದ ಯುಪಿಎ ಪ್ರಸ್ತಾವಕ್ಕೆ ಬೆಂಬಲ ನೀಡಿ, ನಮ್ಮ ಕೋಟ್ಯಂತರ ನೌಕರರನ್ನು ಜಾಗತಿಕ ಹಣಕಾಸು ಬಂಡವಾಳದ ಮರ್ಜಿಗೆ ಒಳಪಡಿಸಿದೆ.

ಬಿಜೆಪಿ ಈಗಲೂ ಭಾರತದ ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರವನ್ನು ಅತ್ಯಂತ ಅಸಹಿಷ್ಣು 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸುವ ಆರೆಸ್ಸೆಸ್‌ನ ಗುರಿಯನ್ನು ಸಾಧಿಸಲಿಕ್ಕಾಗಿ ಇರುವ ಅದರ ರಾಜಕೀಯ ಅಂಗವಾಗಿಯೇ ಕೆಲಸ ಮಾಡುತ್ತಿದೆ. ಅದು ಕೂಡ ಅವೇ ಜನ-ವಿರೋಧಿ ನವ-ಉದಾರವಾದಿ ಸುಧಾರಣೆಗಳನ್ನು ಅನುಸರಿಸುತ್ತದೆ.

ಜನತಾ ಹೋರಾಟಗಳ ಬಲದ ಮೇಲೆ

ಆದ್ದರಿಂದ ಈಗ ದೇಶಕ್ಕೆ ಬೇಕಾಗಿರುವುದು ಒಂದು ಸರಕಾರ ರಚಿಸಲಿಕ್ಕಾಗಿ ಇರುವ ಕಾಂಗ್ರೆಸ್-ವಿರೋಧಿ, ಬಿಜೆಪಿ-ವಿರೋಧಿ ರಾಜಕೀಯ ಪಕ್ಷಗಳ ಒಂದು ಪರ್ಯಾಯ ಗುಂಪಷ್ಟೇ ಅಲ್ಲ. ದೇಶಕ್ಕೆ ಮತ್ತು ಜನತೆಗೆ ಬೇಕಾಗಿರುವುದು ಒಂದು ಪರ್ಯಾಯ ಧೋರಣೆಯ ದಿಕ್ಕು. ನಮ್ಮ ಧೋರಣೆ-ಯ ದಿಕ್ಕಿನಲ್ಲಿ ಇಂತಹ ಒಂದು ಪಲ್ಲಟವನ್ನು ತರಬಲ್ಲ ರಾಜಕೀಯ ಪರ್ಯಾಯ ಜನತೆಯ ಹೆಚ್ಚುತ್ತಿರುವ ಹೋರಾಟಗಳ ಬಲದ ಮೇಲಷ್ಟೇ ಬರಲು ಸಾಧ್ಯ.

ಈಗ ನಮ್ಮ ದೇಶದ ಧೋರಣೆಗಳ ದಿಕ್ಕಿನಲ್ಲಿ ಇಂತಹ ಒಂದು ಪಲ್ಲಟವನ್ನು ತರುವ ಜನತಾ ಹೋರಾಟಗಳನ್ನು ಬಲಪಡಿಸಬೇಕಾಗಿದೆ. ಇಂತಹ ಜನತಾ ಹೋರಾಟಗಳನ್ನು ಮೇಲ್ಮಟ್ಟಗಳಿಗೆ ಮುಂದೊಯ್ಯಲು ರ್‍ಯಾಲಿ ಮೇ 15ರಿಂದ 31ರ ನಡುವೆ ದೇಶಾದ್ಯಂತ ಬ್ಲಾಕ್, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಎಲ್ಲ ಸರಕಾರೀ ಕಚೇರಿಗಳ ಪಿಕೆಟಿಂಗ್ ನಡೆಸಲು ಕರೆ ನೀಡಿದೆ. ಸಾಮೂಹಿಕ ಪಿಕೆಟಿಂಗ್‌ನ ಇಂತಹ ಒಂದು ಕಾರ್ಯಕ್ರಮದಲ್ಲಿ ಕಾನೂನಿನ ಉಲ್ಲಂಘನೆಯೂ ಸೇರಿದೆ. ಅದು ಒಂದು ಬೃಹತ್ ನಾಗರಿಕ ಕಾನೂನುಭಂಗ ಆಂದೋಲನದ ಆಯಾಮವನ್ನು ಪಡೆಯಬಹುದು.

ಈ ಸಂಘರ್ಷ ಸಂದೇಶ ಜಾಥಾಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಭಾರತೀಯ ಜನತೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಮುಂದೆ ಬಂದು ನಮ್ಮ ಎಲ್ಲ ಜನತೆಗೆ ಒಂದು ಉತ್ತಮ ಭಾರತವನ್ನು ನಿರ್ಮಿಸಲಿಕ್ಕಾಗಿ ಇನ್ನೂ ಬಲಿಷ್ಟ ಹೋರಾಟಗಳು ನಡೆಯುವಂತೆ ಮಾಡಬೇಕು ಎಂದು ಸಿಪಿಐ(ಎಂ) ಕರೆ ನೀಡುತ್ತದೆ.

ಶ್ರೀಲಂಕಾ ತಮಿಳರ ಸಮಸ್ಯೆಗಳ ಬಗ್ಗೆ ಸಿ.ಪಿ.ಐ(ಎಂ) ಪಿ.ಬಿ.

ಶ್ರೀಲಂಕಾ ಮತ್ತು ಎಲ್.ಟಿ.ಟಿ.ಇ.ಗಳ ನಡುವೆ ಮಿಲಿಟರಿ ಘರ್ಷಣೆ ನಿಂತು ನಾಲ್ಕು ರ್ಷಗಳು ಕಳೆದರೂ, ಯುದ್ಧದ ಕೊನೆಯ ಹಂತದಲ್ಲಿ ನಡೆಸಲಾದ ಅತ್ಯಾಚಾರಗಳ ಬಗೆಗಿನ ಷಯ ಬಗೆಹರಿಸಲು ಅರ್ಥಪೂರ್ಣ ಕ್ರಮಗಳನ್ನು ಕೈಗೊಳ್ಳಲಾಗಿಲ್ಲ. ಅಮಾಯಕ ನಾಗರಿಕರ ಮೇಲೆ ನಡೆಸಲಾದ ಯುದ್ಧ ಅಪರಾಧಗಳ ಬಗ್ಗೆ ಸಾಕಷ್ಟು ಪುರಾವೆಗಳು ಇವೆ. ಮಾರ್ಚ್ 2012ರಲ್ಲಿ ವಿಶ್ವಸಂಸ್ಥೆ ಮಾನವ ಹಕ್ಕುಗಳ ಮಂಡಳಿ ಒಂದು ನಿರ್ಣಯವನ್ನು ಅಂಗೀಕರಿಸಿ, 'ಕಲಿತ ಪಾಠಗಳು ಮತ್ತು ಸಮಜಾಯಿಷಿ ಕಮಿಶನ್' ಮಾಡಿರುವ ಶಿಫಾರಸುಗಳನ್ನು ಶ್ರೀಲಂಕಾ ಸರ್ಕಾರ ಜಾರಿ ಮಾಡಬೇಕೆಂದು ಕೇಳಿಕೊಂಡಿತ್ತು. ಈ ವಿಷಯದಲ್ಲಿ ಇಂದಿನವರೆಗೂ ಯಾವುದೇ ಪ್ರಗತಿ ಆಗಿಲ್ಲ.

ವಿಶ್ವಸಂಸ್ಥೆ ಮಾನವ ಹಕ್ಕುಗಳ ಮಂಡಳಿಯ ಸಭೆಯಲ್ಲಿ, ಯುದ್ಧದ ಕೊನೆಯ ಹಂತದಲ್ಲಿ ನಡೆಸಲಾದ ಯುದ್ಧ ಅಪರಾಧಗಳ ಆಪಾದನೆಗಳ ಬಗ್ಗೆ ಶ್ರೀಲಂಕಾ ಸರ್ಕಾರ ಒಂದು ಉನ್ನತ ಮಟ್ಟದ, ವಿಶ್ವಾಸಾರ್ಹ ಮತ್ತು ಸ್ವತಂತ್ರ ತನಿಖೆಗೆ ಒಪ್ಪಬೇಕು - ಎಂಬ ನಿಲುವನ್ನು ಭಾರತ ಸರ್ಕಾರ ತೆಗೆದುಕೊಳ್ಳಬೇಕು.

ಶ್ರೀಲಂಕಾ ಅಧ್ಯಕ್ಷ ರಾಜಪಕ್ಸ ತಮಿಳು-ಭಾಷಿಕ ಪ್ರದೇಶಗಳಿಗೆ ಸ್ವಾಯತ್ತತೆ ಕೊಡುವುದಿಲ್ಲ ಎಂದು ಘೋಷಿಸಿರುವುದು ಕಳವಳಕಾರಿ ಬೆಳವಣಿಗೆ. ತಮಿಳು-ಭಾಷಿಕ ಪ್ರದೇಶಗಳಿಗೆ ಅಧಿಕಾರ ವರ್ಗಾಯಿಸುವ ವಿಚಾರದಲ್ಲಿ ಸಂವಿಧಾನದ 13 ನೇ ತಿದ್ದುಪಡಿಗಿಂತಲೂ ಹೆಚ್ಚಿನದ್ದು ಕೊಡಲು ಸಾಧ್ಯ ಎಂಬ ಅವರದೇ ನಿಲುವಿಂದಲೂ ಅವರು ಹಿಂಜರಿದಿದ್ದಾರೆ. ಭಾರತ ಸರ್ಕಾರ ಈ ವಿಷಯದ ಬಗ್ಗೆ ಶ್ರೀಲಂಕಾ ಸರ್ಕಾರದ ಜತೆ ಪ್ರಸ್ತಾಪ ಮಾಡಿ, ತಮಿಳು-ಷಿಕ ಪ್ರದೇಶಗಳಿಗೆ ಸಾಕಷ್ಟು ಅಧಿಕಾರ ವರ್ಗಾಯಿಸುವಂತಹ ರಾಜಕೀಯ ಒಪ್ಪಂದಕ್ಕೆ ಬರುವಂತೆ ಒತ್ತಡ ಹೇರಬೇಕು.

ಚಿರಾಯು ಚಾವೆಜ್...

ಪುಟ 05 ರಿಂದ

ಆ ಸಂದರ್ಭದ ಬಿಕ್ಕಟ್ಟಿನಿಂದ ಹೊರಬರಲು ನೆರವಾಯಿತು. ಫೆಬ್ರುವರಿ 17 ರಂದು ಚಾವೆಜ್ ಕೊನೆಯ ಸಾರಿ ಕ್ಯೂಬಾವನ್ನು ಬಿಟ್ಟು ವೆನೆಜುವೇಲಕ್ಕೆ (ಸಾಯಲು) ಹೊರಟು ಬರುವಾಗ ಫಿಡೆಲ್ ಅವರಿಗೆ ಬರೆದ ಪತ್ರದಲ್ಲಿ "ಸಮಾಜವಾದಿ ಬಣ ಉರುಳಿ ಯುಎಸ್‌ಎಸ್‌ಆರ್ ವಿದಳಗೊಂಡಾಗ ಸಾಮ್ರಾಜ್ಯಶಾಹಿ ತನ್ನ ಆಯುಧಗಳನ್ನು ಮಸೆದು ಕೊಂಡು ಕ್ಯೂಬಾದ ಕ್ರಾಂತಿಯನ್ನು ರಕ್ತದ ಮಡುವಿನಲ್ಲಿ ಮುಳುಗಿಸಲು ಹವಣಿಸುತ್ತಿದ್ದಾಗ ಹೋಲಿಕೆಯಲ್ಲಿ ಸಣ್ಣ ದೇಶವಾದಂತಹ ವನೆಜುವೆಲಾ ಅದನ್ನು ತಡೆಯುವಲ್ಲಿ ಸಮರ್ಥವಾಯಿತು." ಎಂದಿದ್ದಾರೆ.

ಕ್ರಾಂತಿಕಾರಿ ದೃಷ್ಟಿಕೋನ

ಇದು ಚಾವೆಜ್ ಅವರ ಅಂತರ್ರಾಷ್ಟ್ರೀಯ ಕ್ರಾಂತಿಕಾರಿ ದೃಷ್ಟಿಕೋನವಾಗಿತ್ತು. ಅವರ ವಿದೇಶಾಂಗ ನೀತಿ ಸಾಮ್ರಾಜ್ಯಶಾಹಿಯನ್ನು ವಿರೋಧಿಸುವ ಕೇಂದ್ರ ಬಿಂದುವನ್ನು ಹೊಂದಿತ್ತು. ಮೂರನೇ ಜಗತ್ತಿನ ದೇಶಗಳ ಸಾರ್ವಭೌಮತೆಯನ್ನು ರಕ್ಷಿಸಿ ಅವು ತಮ್ಮ ಸ್ವತಂತ್ರ ಇಚ್ಛೆಯಿಂದ ಬೆಳೆಯಲು ಅವಕಾಶ ಸೃಷ್ಟಿಸುವುದು ಅವರ ಉದ್ದೇಶವಾಗಿತ್ತು.


ನಾನು 2004 ರ ಡಿಸೆಂಬರ್‌ನಲ್ಲಿ ಕ್ಯಾರಕಾಸ್ ನಲ್ಲಿ ಹ್ಯುಗೋ ಚಾವೆಜ್ ಅವರನ್ನು ಭೇಟಿಯಾಗಿದ್ದೆ. ಸುಮಾರು ಒಂದು ಗಂಟೆಯ ಅವಧಿಯ ಭೇಟಿಯಲ್ಲಿ ಅವರು ದಕ್ಷಿಣ-ದಕ್ಷಿಣ ದ ಸಹಕಾರದ ಬಗೆಗಿನ ತಮ್ಮ ದೃಷ್ಟಿಕೋನವನ್ನು ತೆರೆದಿರಿಸಿದ್ದರು. ಅಲಿಪ್ತ ಚಳುವಳಿಯನ್ನು ಹೇಗೆ ಪುನರುಜ್ಜೀವಗೊಳಿಸಬೇಕು ಮತ್ತು ಸಮಾಜವಾದದ ಬಗೆಗೆ ಅವರೊಳಗೆ ಸ್ಫುರಿಸುತ್ತಿದ್ದ ವಿಚಾರಗಳನ್ನೂ ಅವರು ಪ್ರತಿಪಾದಿಸಿದ್ದರು. ಅವರ 2005 ರಲ್ಲಿನ ಭಾರತ ದೇಶದ ಭೇಟಿಯ ಬಗೆಗೆ ಅವರು ಉತ್ಸುಕರಾಗಿದ್ದು ಕೋಲ್ಕತ್ತಾಕ್ಕೆ ಹೋಗಲು ಅತೀ ಆಸಕ್ತಿ ಹೊಂದಿದ್ದರು.

ಹ್ಯುಗೊ ಚಾವೆಜ್ ಅವರು ಒಂದು ಹೊಸ ದಾರಿಯ ಬಗೆಗೆ 21 ನೇ ಶತಮಾನದಲ್ಲಿ ಯಾರೊಬ್ಬರೂ ಮಾಡಿಲ್ಲದಿರುವಷ್ಟು ಕೆಲಸವನ್ನು ಮಾಡಿದ್ದಾರೆ.

ವೆನೆಜುವೆಲಾದ ಎಡ ಮತ್ತು ಜನಪರ ಶಕ್ತಿಗಳು ಹ್ಯುಗೋ ಚಾವೆಜ್ ಹಾಕಿಕೊಟ್ಟ ದಾರಿಯಲ್ಲಿ ಮುಂದುವರೆಯುವ ಮನೋದಾರ್ಢ್ಯ ಹೊಂದಿವೆ. ಅವರು ಬಹಳ ದೊಡ್ಡ ಅಡೆತಡೆಗಳನ್ನು ಎದುರಿಸುತ್ತಾರೆ. ನಮ್ಮ ಐಕ್ಯಮತ್ಯ ಮತ್ತು ಬೆಂಬಲ ಅವರ ಪ್ರತಿ ಹೆಜ್ಜೆಯೊಂದಿಗೂ, ಎಲ್ಲ ಕಾಲದಲ್ಲೂ ಇರುತ್ತದೆ.

JANASHAKTHI KANNADA VARA PATRIKE MAR 31, 2013 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17926 Posted on every Sat
Licensed to Post without prepayment License No. WPP-2

'ಪುಟ್ಟ ರಷ್ಯಾ'ಎಂದು ಹೆಸರಾದ ಅನಿಯುವಾನ್ ಗಣಿ ಪ್ರದೇ



ಭಾಗ 27

ಅತ್ಯಂತ ಯಶಸ್ವೀ ಮುಷ್ಕರವನ್ನು ನಡೆಸಿ ವಿಜಯೋತ್ಸವವನ್ನು ಆಚರಿಸಿದ ಗಣಿ ಮತ್ತು ರೈಲ್ವೆ ಕಾರ್ಮಿಕರ ಈ ವಿಜಯ ಆಗ ತಾನೇ ಮೊಳಕೆಯೊಡೆದು ಎರಡೆಲೆ ಬಿಟ್ಟಿದ್ದ ಇಡೀ ಚೀನಾದ ಕಾರ್ಮಿಕ ಚಳುವಳಿಗೆ ಇನ್ನಿಲ್ಲದ ಉತ್ಸಾಹವನ್ನು ತುಂಬಿತು. ಇಲ್ಲಿಯವರೆಗೆ ನಿರಂತರವಾಗಿ ತುಳಿತಕ್ಕೊಳಗಾದ, ಜೀವನ ನಡೆಸಲು ಏಗಬೇಕಾಗಿದ್ದ, ದಿನ ನಿತ್ಯವೂ ನಾನಾ ತೆರನ ಹೊಡೆತ ಬಡಿತ ಮತ್ತು ಹಿಂಸೆಗೊಳಗಾಗುತ್ತಿದ್ದ ಕಾರ್ಮಿಕರು ಯಾವಾಗಲಾದರೋ ಒಮ್ಮೆ ಮೇರೆ ಮೀರಿದ ರೋಷದಿಂದ ಸಿಕ್ಕವರನ್ನು ಬಡಿದು, ಸಿಕ್ಕಸಿಕ್ಕದ್ದೆಲ್ಲವನ್ನು ಪುಡಿ ಮಾಡಿ ನಂತರ ಸೈನ್ಯದ ಹಾಗೂ ಮಾಲೀಕ ವರ್ಗದಿಂದ ಮತ್ತೆ ತಲೆಯೆತ್ತದಂತೆ ಭಯಂಕರ ದಮನಕ್ಕೆ ತುತ್ತಾಗುವುದೇ ಕಾರ್ಮಿಕರ ಪರಿಸ್ಥಿತಿಯಾಗಿತ್ತು. ಹೀಗಿರುವಲ್ಲಿ ಕೇವಲ ಐದೇ ದಿನಗಳಲ್ಲಿ ಯಶಸ್ಸು ಕಂಡ ಈ ಮುಷ್ಕರದ ಪರಿ ಚೀನಾಕ್ಕೆ ಹೊಸ ಮಾದರಿಯನ್ನು ರೂಪಿಸಿತು. ಅದರಲ್ಲಿಯೂ ಹುನಾನ್ ಸೇರಿದಂತೆ ದಕ್ಷಿಣ ಚೀನಾದ ರಾಜ್ಯಗಳಲ್ಲಿ.

ಈ ಹೊಸ ಮಾದರಿಗೆ ಹಾಗೂ ಕಾರ್ಮಿಕರಲ್ಲಿ ಮೂಡಿದ ಹೊಸ ಚೈತನ್ಯಕ್ಕೆ ರಕ್ತ ಚಾಲನೆ ನೀಡಿದ ಹೃದಯ ಆಗತಾನೆ ಹುಟ್ಟಿದ್ದ ಕಮ್ಯುನಿಸ್ಟ್ ಪಕ್ಷ. ಮೊದಲು ರಾಜಕೀಯ ಹಾಗೂ ಸೈದ್ಧಾಂತಿಕ ಶಿಕ್ಷಣ, ನಂತರ ಬಿಗಿಯಾದ ಸಂಘಟನೆ, ಸಮಾಜದ ಎಲ್ಲ ವಿಭಾಗಗಳ ಬೆಂಬಲ ಗಳಿಸುವ ವಿಶಿಷ್ಟ ಪ್ರಯತ್ನಗಳು, ಅತ್ಯಂತ ವಿವರವಾಗಿ ರೂಪಿಸಿದ ಸಂಘರ್ಷದ ಯೋಜನೆ, ಸ್ವಯಂಸೇವಕ ಪಡೆಯ ಅವಿರತ ಶ್ರಮ ಹಾಗೂ ಎಣೆಯಿಲ್ಲದ ಬದ್ಧತೆಯಿಂದ ಸಾಧಿಸಿದ ಕಾರ್ಮಿಕರೆಲ್ಲರ ಅಪೂರ್ವ ಶಿಸ್ತು ಹಾಗೂ ರಹಸ್ಯ ಮಾಹಿತಿ ಸಂಗ್ರಹಣೆಯೂ ಸೇರಿದಂತೆ ಕಾರ್ಮಿಕ ಕೇಂದ್ರ ಮತ್ತು ನಾಯಕತ್ವದ ರಕ್ಷಣೆ. ಇವು ಆ ಯಶಸ್ಸಿನ ಮುಖ್ಯ ಆಧಾರ ಸ್ತಂಭಗಳು. ಮುಷ್ಕರದ ಅತಿ ಶೀಘ್ರ ಯಶಸ್ಸು ಕಾರ್ಮಿಕರ ಅದರ ನಾಯಕರ ತಲೆಗೆ ಹೊಕ್ಕು ಅವರು ಹೆಮ್ಮೆಯಿಂದ ಬೀಗುತ್ತಾ ಆರಾಮವಾಗಿ ಕೂರಲಿಲ್ಲ, ತಕ್ಷಣವೇ ಕಾರ್ಯ ಪ್ರವೃತ್ತರಾದರು.

ಸೈದ್ಧಾಂತಿಕ ಶಿಕ್ಷಣ :

ಕಾರ್ಮಿಕರಿಗೆ ರಾತ್ರಿ ಶಾಲೆಗಳ ಮೂಲಕ ಮುಷ್ಕರಕ್ಕೆ ಮುನ್ನ ನೀಡಿದ ಮಾರ್ಕ್ಸ್‌ವಾದದ ಮೂಲಭೂತ ಶಿಕ್ಷಣ ಅದರಿಂದ ಕಾರ್ಮಿಕರಲ್ಲಿ ಮೂಡಿದ ವರ್ಗ ಎಚ್ಚರವೇ ತಮ್ಮ ಹೋರಾಟದ ಯಶಸ್ಸಿಗೆ ಮೂಲ ಕಾರಣ ಎಂದು ಅರಿತುಕೊಂಡ ನಾಯಕರು ಹೋರಾಟ ನಡೆಯುತ್ತಿರುವಾಗಲೂ ಅಂದಂದಿನ ಅನುಭವಗಳನ್ನು ಮಾರ್ಕ್ಸ್‌ವಾದೀ ದೃಷ್ಟಿಕೋನದಿಂದ ವಿಶ್ಲೇಷಿಸುವ ಮೂಲಕ ಅವರ ತಿಳುವಳಿಕೆಯನ್ನು ಎತ್ತರಿಸುತ್ತಾ ನಡೆದರು. ಮುಷ್ಕರ ಕೊನೆಗೊಂಡ ನಂತರ ಕಾರ್ಮಿಕರ ಶಾಲೆಯನ್ನು ವಿಸ್ತರಿಸಿದರು. ಸಾವಿರಾರು ಸಂಖ್ಯೆಯಲ್ಲಿ ಕಾರ್ಮಿಕರಿಗೆ ಶಿಕ್ಷಣ ನೀಡಿದರು. ಇಡೀ ಹೋರಾಟದ ಅನುಭವ, ಅವರ ಜೀವನದ ಅನುಭವಗಳನ್ನು ಬಳಸಿ ಅವರ ರಾಜಕೀಯ ಪ್ರಜ್ಞೆಯನ್ನು ಹೆಚ್ಚಿಸಿದರು. ಇದರಿಂದಾಗಿ ಕಾರ್ಮಿಕರ ನಡುವಿನಿಂದಲೇ ಹೊಸ ನಾಯಕರು ಹಲವರನ್ನು ತಯಾರು ಮಾಡಲು ಸಾಧ್ಯವಾಯಿತು. ಕಾರ್ಮಿಕ ಚಳುವಳಿಯನ್ನು ಹಲವು ಗಣಿ, ರೈಲ್ವೆ ಮತ್ತಿತರ ಪ್ರದೇಶಗಳಿಗೆ ವಿಸ್ತರಿಸಲು ನೆರವಾಯಿತು.

ಬಿಗಿಯಾದ ಸಂಘಟನೆ :

ಕಾರ್ಮಿಕ ಸಂಘಟನೆಯ ಬಿಗಿಯಾದ ಸ್ವರೂಪ ಹೋರಾಟದ ಯಶಸ್ಸಿನ ಮತ್ತೊಂದು ಮುಖ್ಯ ಅಡಿಪಾಯ. ಹಿಂದೆ ವಿವರಿಸಿದಂತೆ ಪ್ರತಿ ಹತ್ತು ಜನರಿಗೆ ಒಂದು ಘಟಕ, ಒಬ್ಬ ಪ್ರತಿನಿಧಿ. ಪ್ರತಿ ಹತ್ತು ಘಟಕಕ್ಕೆ ಒಬ್ಬ ವಲಯ ಪ್ರತಿನಿಧಿ. ಪ್ರತಿ ಗಣಿ ಗುಣಿ ಅಥವಾ ಕಾರ್ಯಾಗಾರ-ಕ್ಕೆ ಒಂದು ವಲಯ ಪ್ರತಿನಿಧಿಗಳಿಂದ ಕೂಡಿದ ಮಂಡಳಿ. ಈ ಮಂಡಳಿಗೆ ಒಬ್ಬ ಮುಖ್ಯ ಪ್ರತಿನಿಧಿ. ಇಡೀ ಗಣಿ ಪ್ರದೇಶಕ್ಕೆ ಮುಖ್ಯ ಪ್ರತಿನಿಧಿಗಳಿಂದ ಕೂಡಿದ ಕಾರ್ಮಿಕ ಪರಿಷತ್ತು. ಹೀಗೆ ಒಂದು ಕಡೆ ಕಾರ್ಮಿಕರಿಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು , ಅದನ್ನು ಕ್ರೋಢೀಕರಿಸಲು ಚೀನಾ ಕಂಡರಿಯದ ಪ್ರಜಾಪ್ರಭುತ್ವ ಪದ್ಧತಿಯ ರಚನೆ. ಮತ್ತೊಂದು ಕಡೆ ನಾಯಕತ್ವ ಮಂಡಳಿ, ಸಮಿತಿಗಳ ತೀರ್ಮಾನಗಳನ್ನು ಅತಿ ಶೀಘ್ರವಾಗಿ ಎಲ್ಲ ಕಾರ್ಮಿಕರಿಗೆ ತಲುಪಿಸಲು, ವಿವರಿಸಲು ಸುಸಂಘಟಿತವಾದ ರೂಪ. ಜೊತೆ-ಗೆ ಶಿಸ್ತು ಪಾಲನೆ. ಈ ಸಂಘಟನಾ ಸ್ವರೂಪ ಮುಷ್ಕರಕ್ಕೆ ಮಾತ್ರವಲ್ಲ ಮುಂದಿನ ದಿನಗಳಲ್ಲಿ ಇಡೀ ಚೀನಾದಲ್ಲಿ ಸರ್ಕಾರ ಕಾರ್ಮಿಕರ ಮೇಲೆ ತೀವ್ರ ದಮನವನ್ನು ಹರಿ ಬಿಟ್ಟಾಗಲೂ ಕೂಡ ಅನಿಯುವಾನ್ ಗಣಿ ಕಾರ್ಮಿಕರ ಸಂಘ ಬಿರಿಯಲಿಲ್ಲ ಎಂಬುದಕ್ಕೆ ಪ್ರಮುಖ ಕಾರಣವಾಯಿತು. ಕಾರ್ಮಿಕ ಸಂಘದ ಭಾಗವಾಗಿ ಅವರ ಮೇಲಿನ ವಿವಿಧ ಶೋಷಣೆಯ ಹಿಡಿತದಿಂದ ಪಾರು ಮಾಡಲು ಕಾರ್ಮಿಕರ ಸಹಕಾರೀ ಸಂಘ ಹಾಗೂ ಬ್ಯಾಂಕನ್ನು ಬಲಗೊಳಿಸಿದರು.

ಸುಸಂಬದ್ಧವಾದ ಯೋಜನೆ ಮತ್ತು ಪರಿಸ್ಥಿತಿಗನುಗುಣವಾಗಿ ಮಾರ್ಪಡಿಸಬಲ್ಲ ಕಾರ್ಯತಂತ್ರ :

ಕಾರ್ಮಿಕರ ಹಾಗೂ ಮಾಲೀಕ ವರ್ಗದ ಎರಡೂ ಕಡೆಯ ಶಕ್ತಿಯ ಸರಿಯಾದ ಅಂದಾಜು ಯಾವುದೇ ಸಂಘರ್ಷದಲ್ಲಿ ಅತಿ ಮುಖ್ಯ. ಕಾರ್ಮಿಕರ ಶಕ್ತಿಯ ಮೇಲಂದಾಜು, ಮಾಲೀಕರ ಶಕ್ತಿಯ ಕೀಳಂದಾಜು ಅಥವಾ ಅದರ ವಿರುದ್ಧವಾದ ತಪ್ಪು ಅಂದಾಜುಗಳು ಹೋರಾಟದ ವಿಫಲತೆಗೆ ಕಾರಣವಾಗಬಲ್ಲವು. ಹೋರಾಟಕ್ಕೆ ತೊಡಗಿದಾಗ ಆಗಬಹುದಾದ ಹೆಚ್ಚು ಕಡಿಮೆಗಳ ಬಗ್ಗೆ ನಿರಂತರವಾದ ಹಾಗು ಆದಷ್ಟೂ ಕರಾರುವಾಕ್ಕಾದ ಅಂದಾಜುಗಳನ್ನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಹೋರಾಟ ಪಡೆಯಬಹುದಾದ ಅನಿರೀಕ್ಷಿತ ತಿರುವುಗಳು ಕಾರ್ಮಿಕರನ್ನು ಮಾತ್ರವಲ್ಲದೇ ಅವರ ನಾಯಕರನ್ನೂ ಕಕ್ಕಾವಿಕ್ಕಿ ಮಾಡಿ ಅರಾಜಕತೆಯನ್ನುಂಟು ಮಾಡಬಹುದು. ಹೋರಾಟವನ್ನು ದಿಕ್ಕುಗೆಡಿಸಬಹುದು. ಆದ್ದ-ರಿಂದ ವಿವಿಧ ಶಕ್ತಿಗಳು ಅವರ ಪ್ರಭಾವ, ಬಲಾಬಲಗಳು, ಅವರು ಮಾಡಬಹುದಾದ ಕುತಂತ್ರಗಳು ಇವೆಲ್ಲವುಗಳ ಬಗ್ಗೆ ವಿವರವಾದ ಮುಂದಾಲೋಚನೆ, ಅವುಗಳನ್ನು ಎದುರಿಸುವ ಬಗ್ಗೆ ಪೂರ್ವ ಸಿದ್ಧತೆ ಒಂದು ಕಡೆ, ಅವಶ್ಯಕತೆಗೆ ತಕ್ಕಂತೆ ಯೋಜನೆಯ ಮಾರ್ಪಾಟು ಮಾಡುವ ಸಾಧ್ಯತೆ ಮತ್ತೊಂದು ಕಡೆ ಹೋರಾಟದ ಯಶಸ್ಸಿಗೆ ಅತ್ಯವಶ್ಯಕವೆಂದು ಅನಿಯುವಾನ್ ಗಣಿ ಕಾರ್ಮಿಕರ ಮುಷ್ಕರ ತೋರಿಸಿಕೊಟ್ಟಿತು. ಅಪಾಯಕಾರೀ ರಹಸ್ಯ ಕೂಟವನ್ನು, ಸೈನ್ಯವನ್ನು ತಟಸ್ಥಗೊಳಿಸಿದ್ದು ಒಂದು ಪ್ರಮುಖ ಮುಂದಾಲೋಚನೆಯ



ಸಾಧನೆಯಾದರೆ, ವಾಣಿಜ್ಯ ಮಂಡಳಿ ಮೊದಲಾದ ಸಾಮಾಜಿಕ ಸಂಘಗಳು, ಶಕ್ತಿಗಳ ನೆರವು ಕೋರಿ ಪಡೆದದ್ದು ಮತ್ತೊಂದು. ಮುಷ್ಕರದ ದಿನಗಳಲ್ಲಿ ಗಣಿ ಗುಂಡಿ (ಪಿಟ್) ಗಳಲ್ಲಿ ಹಾಗೂ ಹೊರಗೆ ಯಾರ್ಯಾರು ಏನು ಮಾಡಬೇಕೆಂಬ ಬಗ್ಗೆ ಯಾವುದೇ ಸಂದಿಗ್ಧ, ಗೊಂದಲಗಳಿಗೆ ಅವಕಾಶವಿಲ್ಲದಂತೆ ಜವಾಬ್ದಾರಿ ವಿಂಗಡಣೆ ಹೀಗೆ ಹತ್ತು ಹಲವು ವಿವರಗಳಿಗೆ ಗಮನ ಕೊಟ್ಟು ಯೋಜನೆ ಮಾಡಿದ್ದು ಮುಷ್ಕರದ ಯಶಸ್ಸಿಗೆ ಕೊಡುಗೆ ನೀಡಿತು.

ಆದೇ ಸಮಯದಲ್ಲಿ ಕೇವಲ ಹೋರಾಟ ಕೈಗೊಂಡ ವಿಧಾನ ಮಾತ್ರವೇ ಯಶಸ್ಸಿಗೆ ಕಾರಣವಾಗಿರಲಿಲ್ಲ. ಮೇ ನಾಲ್ಕರ ದೀರ್ಘ ಚಳುವಳಿ ದೇಶದ ಜನ ಸಮುದಾಯ ಚೀನಾದ ಬಂಡವಾಳಶಾಹಿಯ ವಿಭಾಗಗಳೂ ಸೇರಿದಂತೆ ಎಚ್ಚರಗೊ ದೇಶಾಭಿಮಾನ ಒಂದು ಕಡೆ ಕಾಮಿ ಹೋರಾಟಗಳಿಗೆ ಸಾಮಾನ್ಯ ಜ ನಡುವೆ ವ್ಯಾಪಕ ಬೆಂಬಲಕ್ಕೆ ಬೇ ಅಡಿಪಾಯವನ್ನು ಹಾಕಿಕೊಟ್ಟಿತ್ತು. ಮತ್ತೊ ಕಡೆ ದೇಶದ ಹಲವು ಕಡೆ ಸಿಡಿದೆದ್ದ ಕಾ ಚಳುವಳಿಗಳು ಪರಸ್ಪರ ಸ್ಫೂರ್ತಿಯ ಬೆಂಬಲವನ್ನೂ ನೀಡುತ್ತಿದ್ದವು. ಯುದ್ಧಕ ಪಾಳೆಯಗಾರರ ನಡುವೆ ಹಾಗೂ ಮಟ್ಟದ ಮತ್ತು ರಾಜ್ಯ, ಸ್ಥಳೀಯ ಮ ಪಾಳೆಯಗಾರೀ ಆಡಳಿತಗಾರರ ನಡುವೆ ತಿಕ್ಕಾಟಗಳನ್ನು ಉಪಯೋಗಿಸಿಕೊಂಡ ಕೂಡ ಈ ಹೋರಾಟದ ಅಪೂರ್ವ ಯ ಕಾರಣವಾಗಿದ್ದುವು. ಇವೆಲ್ಲವನ್ನೂ ಕಾ ನಾಯಕರು ಅರ್ಥ ಮಾಡಿಕೊಂಡಿ ಮಾತ್ರವಲ್ಲ ಕಾರ್ಮಿಕರಿಗೂ ವಿವರಿ ಅವರ ಜಾಗೃತಿಯನ್ನು ಎತ್ತರಕ್ಕೊಯ ನೆರವಾಗಿದ್ದುವು.

ರೈತ ಚಳುವಳಿಗೆ, ಕೆಂಪು ಸೈನ್ಯಕ್ಕೆ ಕಾರ್ಮಿ ಅಗಾಧವಾದ ಕೊಡುಗೆ

ವಿವಿಧ ಗಣಿಗಳ ಕಾರ್ಮಿಕರ ಹಾ ಇತರ ಕಾರ್ಮಿಕರ ನಡುವೆ ಚಳುವಳಿ ವಿಸ್ತರಣೆಗೆ ಈ ಹೋರಾಟ ನೆರವಾಯಿ ಮಾತ್ರವಲ್ಲ ಹುನಾನ್ ರಾಜ್ಯದ ವಿ ಹಳ್ಳಿಗಳಿಂದ ಬಂದಿದ್ದ ಈ ಕಾರ್ಮಿ ತಮ್ಮ ಹಳ್ಳಿಗಳಲ್ಲಿನ ಪಾಲೆಯಗಾ ಭೂ ಮಾಲಕರ ಶೋಷಣೆಯ ವಿರ ಹೋರಾಟ ಮಾಡುವ ಅಗತ್ಯವ ಕಂಡರು. ಇದನ್ನು ಕಂಡ ಮಾವೋರ ಕೆಲವು ಕಾರ್ಮಿಕರನ್ನು 1925ರ ಹಾಗೂ 1926 ರಲ್ಲಿ ಆ ವೇ ಸ್ಥಾಪನೆಯಾಗಿದ್ದ ರೈತ ಅಧ್ಯ ಕೇಂದ್ರ ಕ್ಕೆ ತರಬೇತಿಗೆ ಕಳುಹಿಸಿದ 1927 ರಲ್ಲಿ ಹುನಾನ್ ರಾಜ್ಯದಲ್ಲಿ ಕುಯಿಲಿನ ಸಂದರ್ಭದಲ್ಲಿ ಎದ್ದ ಚಳುವಳಿಯ ಅಲೆಯ ಸಮಯ ಮಾವೋರವರು ಈ ಕಾರ್ಮಿ ನೆರವನ್ನು ಬಯಸಿದಾಗ ಸಾವಿರ ಕಾರ್ಮಿಕರು ರೈತ ಚಳುವಳಿಗೆ ಧುಮುಕಿದ ಇಂತಹ ಎಚ್ಚರಗೊಂಡ ಕಾರ್ಯಕರ್ತರ ನೆ ರೈತ ಚಳುವಳಿಗೆ ಎಂತಹ ಅವಶ್ಯ ಕಾ ನೀಡಿತು ಎಂಬುದನ್ನು ಊಹಿಸಿಕೊಳ್ಳಿ !

ಮುಂದೆ ಪಕ್ಷ ಕೆಂಪು ಸೈನ್ಯವನ್ನು ಸ್ಥಾಪಿ ಮೇಲೆ ಹಲವರು ಕೆಂಪು ಸೈನ್ಯವ ಸೇರಿದರು. ವಿವಿಧ ಸಂದರ್ಭಗಳಲ್ಲಿ ಕೆ ಸೈನ್ಯ ಈ ಪ್ರದೇಶದ ಆಸು ಪಾಸಿನಲ್ಲಿ ಹಾ ಹೋಗುವಗೆಲ್ಲಾ ಅಮೂಲ್ಯವಾದ ಸಹಾ ಬೆಂಬಲ ನೀಡಿದರು. ಹೀಗೆ ಅನಿಯುವಾ ಗಣಿ ಪ್ರದೇಶ 'ಪುಟ್ಟ ರಷ್ಯಾ' ಎಂ ಹೆಸರಾಯಿತು.

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**